## ೭, ಧವಲಾ–ಜಯಧವಲಾದ ಉತ್ತರಕಾಲೀನ ಗ್ರಂಥಗಳು

ಷಟ್ ಖಂಡಾಗಮ ಮತ್ತು ಕಷಾಯಪ್ರಾಭೃತ ಆಗಮಗಳು ನಿರಂತರವಾದ ಗುರು ಶಿಷ್ಯಾನುಕ್ರಮದಲ್ಲಿ ಮತ್ತು ವ್ಯಾಖ್ಯಾನಗಳ ಸರಣಿಯಲ್ಲಿ ಹೊಂದಿ ಉಳಿದು ಬಂದ್ ಐತಿಹಾಸಿಕ ಸಂಗತಿ ಈಗ ಸ್ಪಷ್ಟಗೊಂಡಿದೆ. ಕೊನೆಯದಾಗಿ ಸ್ವಾಮಿ ಜಿನಸೇನರ ವ್ಯಾಖ್ಯಾನದೊಡನೆ ಅಂತಿಮರೂಪ ಪಡೆದ ಈ ಆಗಮ ಸಿದ್ಧಾಂತವು ಮೂಸಿ ಬೆಳೆದು ಬಂದು ಬಗೆಯನ್ನು ಇಂದ್ರನಂದಿಯವರು ತಮ್ಮ 'ಶ್ರುತಾವತಾರ' ದಲ್ಲಿ ವಿವರಿಸಿದ್ದಾರೆ. ಪ್ರಾಯಶಃ ಶ್ರುತದ ಅವತರಣವನ್ನು ನಿರೂಪಿಸುವ ಗ್ರಂಥಗಳಲ್ಲಿ ಇದು ಮೊದಲನೆಯದಗಿದೆ. ಇದರಲ್ಲಿ ಕಂಡುಬರುವ ವಸ್ತುನಿಷ್ಠೆಯ ಬಗ್ಗೆ ಹಿಂದೆ ಸ್ಪಷ್ಟಪಡಿಸಿದೆ. ಇಂದ್ರನಂದಿಯವರು ತಮ್ಮ ಕಾಲದಲ್ಲಿ ಉಪಲಬ್ಧವಿದ್ದ ಸಾಹಿತ್ಯ ಮತ್ತು ವೃದ್ಧಮುನಿ ಜನದ ಹೇಳಿಕೆಯ ಆಧಾರದಿಂದ ಇದಕ್ಕೆ ಸಂಬಂಧಿಸಿದ ಐತಿಹಾಸಿಕ ಸಂಗತಿಯನ್ನು ನಿರೂಪಿಸಿದ್ದಾರೆಂಬುದಲ್ಲದೆ ಸ್ವತಃ ಧವಲಾ ಮತ್ತು ಜಯಧವಲಾ ಟೀಕಾಸಹಿತವದ ಷಟ್ ಖಂಡಾಗಮ ಮತ್ತು ಕಷಯ ಪ್ರಾಭೃತಗಳ ಅಧ್ಯಯನವನ್ನೂ ಮಾಡಿರುವರೆಂ ಬುದರಲ್ಲಿ ಸಂದೇಹವಿಲ್ಲ. ಇದರಿಂದ ಆ ಕಾಲದಲ್ಲಿ ವ್ಯಾಖ್ಯಾನಸಹಿತವಾದ ಈ ಆಗಮ ಸಾಹಿತ್ಯದ ಬಗ್ಗೆ ಇದ್ದ ಮಹತ್ವಾದ ಗೌರವ ಭಾವನೆ ಮತ್ತು ಅಧ್ಯಯನದ ವಿಶೇಷ ಆಸಕ್ತಿಯು ವ್ಯಕ್ತವಾಗುವುದು. ಇದರಲ್ಲಿ ಈ ಆಗಮ ಸಾಹಿತ್ಯದ ಸಂರಕ್ಷಣೆಯ ಪ್ರಥಮ ಉದ್ಯಮವನ್ನು ಕಾಣಬಹುದು.

ದಿಗಂಬರ ಪಂಥದ ಅನೇಕ ಮುನಿಗಳ ಹೆಸರಿನೊಡನೆ ತ್ರೈವಿದ್ಯದೇವ ಎಂಬ ಬಹುಮಾನಾರ್ಥದ ಹೆಸರು ಸಂಯೋಜಿತವಾಗಿರುವುದನ್ನು ಶಾಸನಗಳಲ್ಲಿ ಕಾಣ ಬಹುದು. ಈ 'ತ್ರೈವಿದ್ಯದೇವ' ಎಂಬ ಉಪಾಧಿನಮದ ಬಗ್ಗೆ ಮಾನ್ಯ ಹೀರಾಲಾಲ್ ಜೈನ್ ರವರು "ಸಿದ್ಧಾಂತದ ಮೊದಲ ಮೂರು ಖಂಡಗಳಲ್ಲಿ ಪಾರಂಗತರಾದವರು' ಎಂಬ ಅರ್ಥ ಹೇಳಿದ್ದಾರೆ.[೧] ಆದರೆ ಶ್ರವಣಬೆಳಗುಳದ ಶಾಸನದಲ್ಲಿ (೪೭–೧೨೭) ಸಿದ್ಧಾಂತ ತರ್ಕ ಮತ್ತು ವ್ಯಾಕರಣ ತ್ರಿವಿದ್ಯೆಗಳಲ್ಲಿ ನಿಷ್ಣಾತರಾದವರನ್ನು 'ತ್ರೈವಿದ್ಯರು' ಎಂದು ಹೇಳಿದೆ ಈ ರೀತಿಯದಾದ 'ತ್ರೈವಿದ್ಯದೇವ' ಎಂಬ

ಪ್ರಶಸ್ತಿರೂಪದ ಹೆಸರನ್ನು ಹೊಂದಿದ್ದ ಅನೇಕ ಮುನಿಗಳ ಹೆಸರುಗಳು ಶ್ರವಣಬೆಳಗುಳದ ಶಾಸನಗಳಲ್ಲಿ ಲಿಖಿತಗೊಂಡಿವೆ. ಉದಾಹರಣೆಯಾಗಿ : ಶಾಸನ ಸಂ ೬೪ರಲ್ಲಿ – ಗತ ಪ್ರತ್ಯಾಗತ ರೂಪದಿಂದ ಚಮತ್ಕಾರಕಾರಿಯಾದ ರಾಘವಪಾಂಡವೀಯವನ್ನುವಿರಚಿಸಿದ ಶ್ರುತಕೀರ್ತಿ ತ್ರೈವಿದ್ಯ, ಮಾಘನಂದಿ ತ್ರೈವಿದ್ಯದೇವ, ಶುಭಚಂದ್ರ ತ್ರೈವಿದ್ಯದೇವ, ರಾಮಚಂದ್ರ ತ್ರೈವಿದ್ಯದೇವ ಮ್ತು ಅಕಳಂಕ ತ್ರೈವಿದ್ಯದೇವರ ಹೆಸರುಗಳನ್ನು ಕಾಣಬಹುದು. ಇತರ ಶಾಸನಗಳಲ್ಲಿಯೂ ಇದೇ ರೀತಿಯಿಂದ 'ತ್ರೈವಿದ್ಯದೇವ' ಎಂಬ ಪ್ರಶಸ್ತಿಯ ಹೆಸರಿನೊಡನೆ ಕೊನೆಗೊಳ್ಳುವ ಮುನಿಗಳ್ ಹೆಸರುಗಳನ್ನು ಕಣಬಹುದು.

ತ್ರೈವಿದ್ಯದೇವ ಎಂಬ ಬಹುಮಾನದ ಹೆಸರಲ್ಲದೆ, ಸೈದ್ಧಾಂತಾಬುಧಿ ಪಾರಗ, ಸಿದ್ಧಾಂತವಿದ್ಯಾನಿಧಿ, ಸಿದ್ಧಾಂತಚಕ್ರವರ್ತಿ ಎಂದು ಮುಂತಾದ ಬಹುಮಾನದ ಹೆಸರುಗಳು ಮುನಿಗಳ ಹೆಸರುಗಳ ಹೆಸರುಗಳೊಡನೆ ಸೇರಿರುವುದನ್ನು ಶ್ರವಣಬೆಳಗುಳದ ಶಾಸನಗಳಲ್ಲಿ ಕಾಣಬಹುದು. ಇದರಿಂದ ಆಗಮ–ಸಿದ್ಧಾಂತದ ಅಧ್ಯಯನ ನಿರಂತರವಾಗಿ ಮುಂದುವರಿದು ನಡೆದಿತ್ತೆಂಬುದು ಸೂಚಿತವಾಗುವುದಲ್ಲದೆ, ಸಿದ್ಧಾಂತಿಗಳೆನ್ನಿಸಿಕೊಂಡವರ ಬಗ್ಗೆ ಸನಾಜದಲ್ಲಿ ಅಪಾರವಾದ ಗೌರವಾದರಭಾವ–ಪೂಜ್ಯಭಾವವಿದ್ದಿತೆಂದೂ ವ್ಯಕ್ತವಾಗುವುದು. ಈ ರೀತಿಯಿಂದ ಸಿದ್ಧಾಂತದ ಅಧ್ಯಯನವು ನಿರಂತರವಾಗಿ ನಡೆದುಬಂದಿತ್ತೆಬುದಕ್ಕೆ ಗೊಮ್ಮಟಸಾರ ರಚನಾಕಾರರಾದ ನೇಮೀಚಂದ್ರ ಸಿದ್ಧಾಂತ ಚಕ್ರವರ್ತಿಯವರೆಗೆ ಸಿದ್ಧಾಂತಡ ಉಪದೇಶವಿತ್ತ ಗುರುಗಳ ಇತಿವೃತ್ತಸಂಗತಿಯಿಂದ ಸಾಕ್ಷೀಕೃತವಾಗುವುದು. ಈ ಗುರುಗಳ ಬಗ್ಗೆ ಉಪಲಬ್ಧವಿರುವ ಇತಿವೃತ್ತವನ್ನು ಇಲ್ಲಿ ಹೇಳ ಬೇಕಾಗಿದೆ.

ಇಂದ್ರನಂದಿ–ಗೊಮ್ಮಟಸಾರ–ಕರ್ಮಕಾಂಡದ ಗಾಹೆ ೩೯೬ರಲ್ಲಿ "ಇಂದ್ರನಂದಿ ಗುರುವಿನ ಬಳಿ ಸಕಲ ಸಿದ್ಧಾಂತವನ್ನು ಕೇಳಿ ಕನಕನಂದಿ ಗುರುವು 'ಸತ್ವಸ್ಥಾನ' ವನ್ನು ಹೇಳಿದ್ದಾರೆ[೨ಎ]" ಎಂದು ಹೇಳಿದೆ. ಗಾಹೆ ೪೩೬ರಲ್ಲಿ ನೇಮಿಚಂದ್ರ ಸಿ. ಚ. ಅವರು ತಮ್ಮನ್ನು ಮೀರನಂದಿ ಮತ್ತು ಇಂದ್ರನಂದಿಯವರುಗಳ ವತ್ಸ ( ವೀರಿಂದಣಂದಿವಚ್ಛೋ) ಎಂದು ನಿರ್ದೇಶಿಸಿಕೊಂಡು ಅಭಯನಂದಿ ಗುರುವಿಗೆ ವಂದನೆ ಮಾಡುವುದಾಗಿ ಹೇಳಿದ್ದಾರೆ.[೨ಬಿ] ಗಾಹೆ ೭೮೫ರಲ್ಲಿ. ಅಭಯನಂದಿಯನ್ನು ಶ್ರುತಸಾಗರಪಾರಗನಾದ ಇಂದ್ರನಂದಿಯನ್ನು ಮತ್ತು ವರ ವೀರನಂದಿನಾಥನನ್ನು ನಮಸ್ಕರಿಸಿ

‘ಪ್ರಕೃತಿಗಳ ಪ್ರತ್ಯಯವನ್ನು ಹೇಳುವೆನು’ ಎಂದು ಹೇಳಿದ್ದಾರೆ.[೨ಸಿ] ಗಾಹೆ ರ್೯೬ರಲ್ಲಿ ‘ಸಿದ್ಧಾಂತ ವೆಂಬ ಅಮೃತಮಹಾಸಾಗರದಲ್ಲಿ ಮೂಡಿದ ವರ ವೀರನಂದಿಚಂದ್ರನನ್ನು ಮತ್ತು ಇಂದ್ರನಂದಿಗುರುವನ್ನು ನಮಸ್ಕರಿಸಿ’ ಎಂದು ಹೇಳಿದೆ.[೨ಡಿ] ಈ ಉಲ್ಲೇಖಗಳಿಂದ ಇಂದ್ರನಂದಿ ಅಭಯನಂದಿ ಮತ್ತು ವೀರನಂದಿ ಆಚಾರ್ಯರುಗಳನ್ನು ನೇಮಿಚಂದ್ರ ಸಿ. ಚ. ಅವರು ಬಾರಿಬಾರಿಗೆ ಅಪಾರ ಪೂಜ್ಯಭಾವದಿಂದ ಗುರುಗಳೆಂದು ಹೇಳಿರುವುದು ಸ್ಪಷ್ಟವಾಗುವುದು. ಮೊದಲನೆಯದಾಗಿ ಇಲ್ಲಿ ಹೆಸರಿಸಿರುವ ಇಂದ್ರನಂದಿಯವರು ಯಾರು? ಎಂಬ ಪ್ರಶ್ನೆ ಮುಂದಾಗುತ್ತದೆ. ಈ ಹೆಸರಿನ ಅನೇಕ ಆಚಾರ್ಯರಿದ್ದಾರೆ. ಮಾನ್ಯ ಜುಗುಲ್ ಕಿಶೋರ್ ಮುಖ್ತಾರ್ ಅವರು ಛೇದಪಿಂಡ ಪ್ರಾಯಶ್ಚಿತ್ತ ಶಾಸ್ತ್ರಕರ್ತೃ, ಶ್ರುತಾವತಾರಕರ್ತೃ, ಜ್ವಾಲಾಮಾಲಿನೀಕಲ್ಪ ಕರ್ತೃ, ನೀತಿಸಾರ ಅಥವಾ ಸಮಯಭಾಷಣಕರ್ತೃ ಮತ್ತು ಸಂಹಿತಾಕ್ರ್ತೃಗಳೆಂದು ಐವರು ಇಂದ್ರನಂದಿ ಎಂಬ ಹೆಸರಿನ ಆಚಾರ್ಯರನ್ನು ಗುರುತಿಸಿದ್ದಾರೆ.[೨೩] ಇವರಲ್ಲಿ ಕೊನೆಯ ಇಬ್ಬರು ಗೋ. ಸಾ. ಕರ್ತೃ ನೇಮಿಚಂದ್ರಾಚಾರ್ಯರ್ ಅನಂತರ ಕಾಲದವರಾಗಿರುವರೆಂದು ಹೇಳಲು ಸ್ಪಷ್ಟ ಆಧಾರವಿದೆ. ನೀತಿಸಾರಕರ್ತೃ ಇಂದ್ರ್ನಂದಿಯವರು ಶಾಸ್ತ್ರಪ್ರಮಾಣ್ಯದ ಆಧರ ದೃಷ್ಟಿಯಿಂದ ಉಲ್ಲೇಖಿಸಿರುವ್ ಪೂರ್ವಾಚಾರ್ಯರ ಹೆಸರುಗಳ್ಲ್ಲಿ ನೇಮಿಚಂದ್ರ ಸಿ. ಚ. ಅವರು ಹೆಸರೂ ಸೇರಿದೆ. ಅದ್ದರಿಮ್ದ್ ಅವರು ನೇಮಿಚಂದ್ರ ಸಿ. ಚಕ್ರವರ್ತಿಯವರ ಗುರುವಾಗಿರುವ ಸಾಧ್ಯತೆ ಇಲ್ಲ. ಇನ್ನು ಸಂಹಿತಾ ಕರ್ತೃ ಇಂದ್ರನಂದಿಯವರು ವಿ. ಶಕೆ ಹನ್ನೆರಡನೇ ಶತಮಾನದವರಾದ ವಸುನಂದಿಯವರನ್ನು ಹೆಸರಿಸಿದ್ದಾರಾಗಿ ಇವರು ವಿ. ಶಕೆ ಹನ್ನೊಂದನೇ ಶತಮಾನದವರಾದ ನೇಮಿಚಂದ್ರ ಸಿ. ಚಕ್ರವರ್ತಿಯವರಿಂದ ಈ ಚಿನಕಾಲದವರೆಂದು ನಿಶ್ಚಿತವಾಗುವುದು . ಅದ್ದರಿಂದ ಇವರು ನೇಮಿಚಂದ್ರ ಸಿ. ಚಕ್ರವರ್ತಿಯವರ ಗುರುವಾಗಿರಲು ಸಾಧ್ಯವಿಲ್ಲ. ಉಳಿದ ಮೂವರು ಇಂದ್ರನಂದಿ ಎಂಬ ಹೆಸರಿನ ಆಚಾರ್ಯರಲ್ಲಿ ಮೊದಲಿನ ಇಬ್ಬರು ತಮ್ಮತಮ್ಮ ಗುರುಗಳ ಹೆಸರನ್ನಾಗಲಿ, ಗ್ರಂಥರಚನಾಕಾಲವನ್ನಾಗಲಿ ಹೇಳಿಲ್ಲ. ಆದ್ದರಿಂದ ಇವರ ಬಗ್ಗೆ ನಿಶ್ಚಿತರೀತಿಯಿಂದ ಏನನ್ನಾಗಲಿ ಹೇಳಲು ಸಾಧ್ಯವಾಗುವುದಿಲ್ಲ. ಇನ್ನು ಜ್ವಾಲಾ ಮಾಲಿನೀಕಲ್ಪದ ಕರ್ತೃವು ಹಿಂದೆ ಹೇಳಿರುವಂತೆ ತನ್ನ ಗ್ರಂಥರಚನೆಯು ಶಕ ಸು. ಲ೬ಗರಲ್ಲಿ ( ಕ್ರಿ.ಶ. ೯೩೯ ವಿ.ಸಂ. ೯೯೬ರಲ್ಲಿ) ಆಗಿರುವುದೆಂದು

ಹೇಳಿರುವವರಾಗಿ ಈ ಕಾಲಮಾನವು ನೇಮಿಚಂದ್ರ ಸಿ. ಚಕ್ರವರ್ತಿಯವರ ಗುರುವಾಗಿರುವ ಇಂದ್ರನಂದಿಯ ವರ ಕಾಲದೊಡನೆ ನಿಶ್ಯಂಕಿತವಾಗಿ ಸಂಗತವಾಗುವುದು. ಈ ಇಂದ್ರನಂದಿಯವರು ತಮ್ಮನ್ನು ಬಪ್ಪನಂದಿಯವರ[೨ಎಫ್] ಶಿಷ್ಯನೆಂದು, ವಾಸವನಂದಿಯವರ ಪ್ರಶಿಷ್ಯನೆಂದು ಹೇಳಿರುವುವರಲ್ಲಂದೆ ಈ ವಾಸವನಂದಿಯವರ ಗುರುವನ್ನು ಇಂದ್ರನಂದಿ ಎಂದು ಹೆಸರಿಸಿದ್ದಾರೆ.[೨ಜಿ] ಇದರಂತೆ ಈ (ಪೂರ್ವಜ) ಇಂದ್ರನಂದಿಯವರು ಜ್ವಾಲಾಮಾಲಿನೀ ಕಲ್ಪದ ಕರ್ತೃ ಇಂದ್ರನಂದಿಯವರಿಗೆ ಪ್ರಪಿತಾಮಹಗುರುವೆನಿಸುವರು. ಜ್ವಾಲಾ ಮಾಲಿನೀ ಕಲ್ಪದ ರಚನಾಕಾರರಾದ ಈ ಇಂದ್ರನಂದಿಯವರು, ಹಿಂದೆ ಹೇಳಿರುವಂತೆ, ತಮ್ಮನ್ನು 'ಜೈನೇ ಸಿದ್ಧಾಂತವಾರ್ಧೌ ವಿಮಲಿತಹೃದಯಃ' ಎಂದು ಹೇಳಿಕೊಂಡಿರುವುದರಿಂದ ಷಟ್ ಖಂಡಾಗಮಾದಿ ಸಿದ್ಧಾಂತದಲ್ಲಿ ವಿಶೇಷ ಪರಿಣತಿ ಹೊಂದಿದ್ದರೆಂದು ಸೂಚಿತವಾಗುವುದು. ಈ ರೀತಿಯಾಗಿ, ಈ ಮೇಲೆ ಹೇಳಿರುವಂತೆ, ಕಾಲಮಾನದ ಸಂಗತತ್ವ ಮತ್ತು ಸಿದ್ಧಾಂತದ ಪರಿನಿಷ್ಣಾತತ್ವ ದೃಷ್ಟಿಯಿಂದ ಇವರು ಗೋ. ಸಾ. ಕರ್ತೃ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರಿಗೆ ಗುರುವಾಗಿದ್ದಿ ರಬಹುದಾದ ಸಂಭಾವ್ಯತೆಯು ದೃಢವಾಗುವುದು. ಶ್ರವಣಬೆಳಗುಳದ ಶಾಸನ ( ೭೭/೬೭/ಜಳ) ದಲ್ಲಿ, 'ದುರಿತಗ್ರಹ ನಿಗ್ರಹದಿಂದ ನಿಮಗೆ ಭಯವಾಗಿದ್ಧಲ್ಲಿ ಭೂರಿನರೇಂದ್ರ ವಂದಿತನಾದ ಶ್ರೀ ಮುನೀಂದ್ರ ಇಂದ್ರನಂದಿಯ ಸೇವೆ ಮಾಡಿರಿ' ಎಂದು ಹೇಳಿದೆ. ಇದು ಪ್ರಾಯಿಕವಗಿ ಜ್ವಾಲಾಮಾಲಿನೀ ಕಲ್ಪದ ಕರ್ತೃ ಇಂದ್ರನಂದಿಯವರು ಸೂಚಕವಾದೆಯೆಂದು ಹೇಳಬಹುದು. ಈ ಇಂದ್ರನಂದಿಯವರು, ತಮ್ಮ ಗುರುಪರಂಪರೆಯ ಅನುಕ್ರಮವನ್ನು, ಈ ಹಿಂದೆ ಹೇಳಿರುವ ಪ್ರಕಾರವದ್ದಲ್ಲದೆ ಮತ್ತೂ ಒಂದು ಅನುಕ್ರಮವನ್ನು ಹೇಳಿದ್ದಾರೆ. ಇದರಂತೆ ಹೇಲಾಚಾರ್ಯರಿಂದ ರಚಿತವಾದ ಜ್ವಾಲಿನೀಮತವು ಗಂಗಮುನಿ, ನೀಲಗ್ರೀವ ಮುಂತಾದವರ ಅನುಕ್ರಮದಲ್ಲಿ ಬಾಂದಿತು. ಬಳಿಕ ಅದನ್ನು ಇಂದ್ರನಂದಿಯವರು ಕಂದರ್ಪ (?) ಮತ್ತು ಗುಣನಂದಿಯವರಲ್ಲಿ ಅಧ್ಯಯನಾಮಾಡಿ ಅರ್ಥಸಹಿತ ಗ್ರಂಥವನ್ನು ರಚನೆಮಾಡಿದರು.[೨ಜಿ] ಈ ಎರಡೂ ಗುರು ಪರಂಪರೆಯ ಅನುಕ್ರಮಗಳ ಸಮನ್ವಯ ಪೂರ್ವಕ ಬಪ್ಪನಂದಿಯವರು ಇಂದ್ರನಂದಿಯವರ ದೀಕ್ಷಾಗುರುವಾಗಿರುವರೆಂದು ಮತ್ತು ಗುಣನಂದಿಯವರು ವಿದ್ಯಾಗುರುವಾಗಿರುವರೆಂದು ತಿಳಿಯಬೇಕಾಗಿದೆ. 'ಜ್ವಾಲಿನೀಮತ'ವನ್ನು

ಗುಣನಂದಿಯವರಲ್ಲಿ ಅಧ್ಯಯನ ಮಾಡಿರುವುದಾಗಿ ಹೇಳಿರುವುದರಿಂದ ಇವರು ಇಂದ್ರನಂದಿಯವರ ವಿದ್ಯಾ ಗುರುಗಳಾಗಿರುವರೆಂಬುದು ನಿಶ್ಚಿತವಿದೆ. ಇಷ್ಟಾದರೂ ಇವರು ಸಿದ್ಧಾಂತದ ಅಧ್ಯಯನವನ್ನು ಯಾರಲ್ಲಿ ನಡೆಸಿಡರೆಂಬ ಪ್ರಶ್ನೆ ಉಳಿದಿಡೆ; ಇದಕ್ಕೆ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರು ತಮ್ಮ ಮತ್ತೊಬ್ಬ ಗುರುವೆಂದು ನಿರ್ದೇಶಿಸಿರುವ ಅಭಯನಂದಿಯವರ ಗುರು ಅನುಕ್ರಮದಿಂದ ಉತ್ತರ ದೊರಕುತ್ತದೆ. 'ಚಂದ್ರಪ್ರಭಚರಿತ' ರಚನಾಕಾರರಾದ ವೀರಣಂದಿಯವರು ಅಭಯನಂದಿಯವರ ಗುರು ಅನುಕ್ರಮವನ್ನು ತಿಳಿಸಿ ಇವರನ್ನು ತಮ್ಮ ಗುರುವೆಂಬುದಾಗಿ ನಿರ್ದೇಶಿಸಿದ್ಧಾರೆ. ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರು ತಮ್ಮ ಗುರುಗಳ್ಳೊಬ್ಬರೆನಿಸಿ ವೀರಣಂದಿಯವರನ್ನು ಹೆಸರಿಸಿರುವುದರಿಂದ ಚಂದ್ರಪ್ರಭಚರಿತಕರ್ತೃ ವೀರಣಂದಿಯವರೇ ಇವರಾಗಿರುವರೆಂದು ಅಭಿವ್ಯಕ್ತವಾಗುವುದು. ಈ ವೀರಣಂದಿಯವರು ಚಂದ್ರಪ್ರಭಪುರಾಣದಲ್ಲಿ ತಮ್ಮ ಗುರುಗಳ ಪೂರ್ವಾನ್ವಯವನ್ನು 'ಗುಣನಂದಿ, ವಿಬುಧ ಗುಣನಂದಿ, ಮತ್ತು ಅಭಯನಂದಿ' ಎಂಬುದಾಗಿ ನಿರ್ದೇಶಿಸಿ ತಮ್ಮನ್ನು ಅಭಯ್ನಂದಿಯವರ ಶಿಷ್ಯ ಎಂದು ಹೇಳಿಕೊಂಡಿದ್ದಾರೆ. ಇಲ್ಲಿ ವೀರನಂದಿಯವರು ಹೆಸರಿಸಿರುವ ಗುಣನಂದಿಯವರು, ಕಾಲ ಸಮನ್ವಿತತೆಯ ದೃಷ್ಟಿಯಿಂದ, ಇಂದ್ರನಂದಿಯವರ ಗುರುವಾಗಿರುವರೆಂದು ಗಣನೆಮಾಡಬಹುದಾಗಿದೆ. ಅನೇಕ ಅಚಾರ್ಯರು ಅನೇಕ ಶಾಸ್ತ್ರಸಾಹಿತ್ಯದಲ್ಲಿ ಪರಿನಿಷ್ಣಾತರಾಗಿದ್ದರೆಂಬುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಇದಕ್ಕೆ ಹಿಂದೆ ವಿವರಿಸಿರುವಂತೆ 'ತ್ರೈವಿದ್ಯ' ಎಂಬ ಬಿರುದನ್ನು ಹೊಂದಿದ್ದ ಆಚಾರ್ಯರು ನಿದರ್ಶನರಾಗಿದ್ದಾರೆ. ಹೀಗೆಯೇ ಪ್ರಸ್ತುತ ಗುಣನಂದಿಯವರು ಹೇಲಾಚಾರ್ಯರಿಂದ ಪ್ರವರ್ತಿತವಾಗಿ ಬಂದ 'ಜ್ವಾಲಿನೀ ಮತ' ಮಂತ್ರತಂತ್ರ ವಿದ್ಯೆಯಲ್ಲಿ ಮಾತ್ರವಲ್ಲದೆ ಸಿದ್ಧಾಂತದಲ್ಲಿ ಹಾಗೂ ಇತರ ಶಾಸ್ತ್ರಗಳಲ್ಲಿ ಪರಿನಿಷ್ಣಾತರಾಗಿದ್ದರೆಂದಲ್ಲಿ ಅದು ಅಸಂಭವವೆನಿಸುವುದಿಲ್ಲ.

ಇಂದ್ರನಂದಿಯವರು ಪ್ರಾಯಶಃ ಮುನಿದೀಕ್ಷೆ ಪಡೆಯುವ ಮುನ್ನ ಪಂದರ್ಪ ಮತ್ತು ಗುಣನಂದಿಯವರ ಬಳಿಯಲ್ಲಿ ( ಪಾರ್ಶ್ವೇತಯೋರ್ದ್ವಯೋರಪಿ) ಜ್ವಾಲಿನೀಮತ ಮಂತ್ರಯಂತ್ರ ತಂತ್ರ ವಿದ್ಯೆಯನ್ನು ಅಭ್ಯಸಿಸಿ ಬಳಿಕ ಗುಣನಂದಿಯವರಲ್ಲಿ ಸಿದ್ಧಾಂತ ವಿದ್ಯೆಯ ಅಧ್ಯಯನ ನಡೆಸಿರುವರೆಂದು ಹೇಳಬಹುದಾಗಿದೆ. ಮಾನ್ಯ ನಾಥೂರಾಂಪ್ರೇಮಿಯವರು, ವೀರನಂದಿ, ಇಂದ್ರನಂದಿ, ಕನಕನಂದಿ ಮತ್ತು ನೇಮಿ ಚಂದ್ರರು ಅಭಯನಂದಿಯವರ ಶಿಷ್ಯರೆಂದು ಹೇಳಿದ್ದಾರೆ. ಆದರೆ ಇದಕ್ಕೆ

ಆಧಾರ ವೇನೆಂಬುದನ್ನು ಹೇಳಿಲ್ಲ. ಹೀಗೆಅಯೇ ಮಾನ್ಯ ಜುಗಲ್ ಕಿಶೋರ್ ಮುಖ್ತಾರ್ ಅವರು, ವೀರನಂದಿಯವರು ಚಂದ್ರಪ್ರಭಚರಿತೆಯಲ್ಲಿ ಹೆಸರಿಸಿರುವ ಗುಣನಂದಿಯವರಿಂದ ಮಂತ್ರಶಾಸ್ತ್ರದ ಅಭ್ಯಾಸಮಾಡಿರಬಹುದಾದುದನ್ನು ಸಂಭಾವ್ಯವಾಗಿ ಒಪ್ಪಿ, ಗುಣನಂದಿಯವರಿಂದ ಅಭಯನಂದಿಯವರು ಸಿದ್ಧಾಂತಶಾಸ್ತ್ರದ ಅಧ್ಯಯನ ನಡೆಸಿರುವರೆಂದು ಮತ್ತು ಈ ಅಭಯನಂದಿಯವರಿಂದ ಇಂದ್ರನಂದಿಯವರು ಸಿದ್ಧಾಂತದ ಅದ್ಯಯನ ನಡೆಸಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇವರು ಉಲ್ಲೇಖಿಸಿರುವ ಶ್ಲೋಕಗಳನುಸಾರ ಗುಣನಂದಿಯವರ ಶಿಷ್ಯ ವಿಬುಧಗುಣನಂದಿಯವರೆಂದೂ ಮತ್ತು ಇವರ ಶಿಷ್ಯ ಅಭಯನಂದಿಯವರೆಂದೂ ಸ್ಪಷ್ಟವಾಗಿ ತಿಳಿದುಬರುವುದು. ಆದ್ದರಿಂದ ಇಂದ್ರನಂದಿಯವರು ಅಭಯನಂದಿವರಿಂದ ಸಿದ್ಧಾಂತದ ಅಧ್ಯಯನ ಮಾಡಿರುವರೆಂದು ಹೇಳಲು ಆಧಾರವೇನೆಂಬುದು ತಿಳಿಯುವದಿಲ್ಲ. ಇದರ ಬದಲಾಗಿ ಇಂದ್ರನಂದಿಯವರು, ತಮಗೆ ಮಂತ್ರಶಾಸ್ತ್ರವನ್ನು ಭೋಧಿಸಿದ ಗುಣನಂದಿಯವರಲ್ಲಿಯೇ ಸಿದ್ಧಾಂತದ ಅಧ್ಯಯನ ಮಾಡಿರುವರೆಂದು ಮತ್ತು ಇವರು, ಈ ಗುಣನಂದಿಯವರ ಶಿಷ್ಯನೆಂದು ಹೆಸರಿಸಿರುವ ವಿಬುಧನಂದಿಯವರ ಭ್ರಾತೃ ಗುರುವಾಗಿದ್ದರೆಂದು ತಿಳಿಯುವುದು ಹೆಚ್ಚು ಸೂಕ್ತವಾಗಿದೆ.

ಪ್ರಸ್ತುತ ಪ್ರಸಂಗದಲ್ಲಿ ಗುಣನಂದಿಯವರು ಮತ್ತು ಅಭಯನಂದಿಯವರಿಗೆ ಸಂಬಂಧಿಸಿದಂತೆ ಮತ್ತೊಂದು ಸಂಗತಿಯನ್ನು ಪ್ರಸ್ತಾವಿಸುವೌದು ವಿಷಯಾಂತರವಾಗಲಾರದು. ಗುಣನಂದಿ ಎಂಬ ಹೆಸರಿನ ಆಚಾರ್ಯರೊಬ್ಬರು ದೇವನಂದಿ ವಿರಚಿತವಾದ ಜೈನೇಂದ್ರ ವ್ಯಾಕರಣದ ಸೂತ್ರಗಳ ಜೊತೆಗೆ ತಮ್ಮಿಂದ ರಚಿತವಾದ ಸೂತ್ರಗಳನ್ನು ಸೇರಿಸಿ ಅದನ್ನು ('ಗುಣನಂದಿತಾನಿತಪುಃ') ವಿಸ್ತೃತಗೊಳಿಸಿದರೆಂಬ ಹೇಳಿಕೆ ಇದೆ. ಇದು ಪ್ರಸ್ತುತ ಗುಣನಂದಿಯವರಿಂದಾಗಿರಬಹುದೆಂದು ತಿಳಿಯಬಹುದಾಗಿದೆ. ಹೀಗೆಯೇ ಜೈನೇಂದ್ರವ್ಯಾಕರಣಕ್ಕೆ ಇಲ್ಲಿ ಪ್ರಸ್ತುತವಾಗಿರುವ, ಅಭಯನಂದಿಯವರಿಂದ ಮಹಾವೃತ್ತಿಯು ರಚಿತವಾಗಿದೆ ಎಂದು ತಿಳಿಯಬಹುದಾಗಿದೆ.

ಅಭಯನಂದಿ–ಈ ಹಿಂದೆ ಪ್ರಸ್ತುತಪಡಿಸಿರುವಂತೆ ಇವರು ಗುಣನಂದಿಯವರ ಪ್ರಶಿಷ್ಯ ಮತ್ತು ವಿಬುಧಗುಣನಂದಿಯವರ ಶಿಷ್ಯರಾಗಿರುವರೆಂದು ಸ್ಪಷ್ಟವಾಗಿದೆ.

ಇವರನ್ನು ಗೊಮ್ಮಟಸಾರದಲ್ಲಿ ಮಾತ್ರವಲ್ಲದೆ ತ್ರಿಲೋಕಸಾರ ಮತ್ತು ಲಬ್ಧಿಸಾರಗಳಲ್ಲಿಯೂ ತಮ್ಮ ಗುರುವೆಂದು ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರು ಹೇಳಿದ್ದಾರೆ ಜೈನೇಂದ್ರ ವ್ಯಾಕರಣದ ಮಹಾವೃತ್ತಿ ಟೀಕೆಯು ಇವರಿಂದ ರಚಿತವಾಗಿರಬಹುದಾದ ಸಂಭವವಿದೆ.

ವೀರನಂದಿ: ಇವರು ತಮ್ಮನ್ನು ಅಭಯನಂದಿಯವರ ಶಿಷ್ಯರೆಂದು ಹೇಳೀಕೊಂಡಿರುವುದನ್ನು ಈ ಹಿಂದೆ ಶ್ರುತಪಡಿಸಿದೆ. ನೇಮಿಚಂದ್ರಸಿದ್ಧಾಂತ ಚಕ್ರವರ್ತಿಯವರೂ ತಮ್ಮನ್ನು ಅಭಯನಂದಿಯವರ ಶಿಷ್ಯರೆಂದು ಹೇಳಿಕೊಂಡಿರುವುದನ್ನು ಹಿಂದೆ ಸ್ಪಷ್ಟ ಪಡಿಸಿದೆ. ಇದರಿಂದ ವೀರನಂದಿ ಮತ್ತು ನೇಮಿಚಂದ್ರರಿಬ್ಬರೂ ಭ್ರಾತೃಗುರಗ್ಳಾಗಿದ್ದರೆಂದು ಸೂಚಿತವಾಗುವುದು. ಇದಲ್ಲದೆ ವೀರನಂದಿಯವರನ್ನು ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರು ಗುರುಭಾವದಿಂದ ನೀರ್ದೇಶಿಸಿರುವುದರಿಂದ ಇವರನ್ನು ನೇಮಿಚಂದ್ರಸಿದ್ಧಾಂತ ಚಕ್ರವರ್ತಿಯವರ ಹಿರಿಯ ಭ್ರಾತೃಗುರುವಾಗಿರಬೇಕೆಂದು ತಿಳಿಯಬಹುದಾಗಿದೆ. ಶ್ರೀಕನಕನಂದಿ–ಇವರು ನೇಮಿಚಂದ್ರಸಿದ್ಧಾಂತ ಚಕ್ರವರ್ತ್ರಿಯವರಿಂದ ಹೆಸರಿಸಲ್ಪಟ್ಟಿರುವ ಮತ್ತೊಬ್ಬ ಗುರು. ಇಂದ್ರನಂದಿ ಗುರುವಿನ ಬಳಿ ಸಕಲ ಸಿದ್ಧಾಂತವನ್ನು ಅಧ್ಯಯನ ಮಾಡಿ 'ಸತ್ತಟ್ಠಾಣ' (ಸತ್ತ್ವ ಸ್ಥಾನ)ವನ್ನು ರಚನೆಮಾಡಿದರೆಂದು ನೇ. ಚಂ. ಸಿ. ಚಕ್ರವರ್ತಿಯವರು ಹೇಳಿರುವುದನ್ನು ಹಿಂದೆ ತಿಳಿಸಿದೆ.[೨೮] ಈ ಗ್ರಂಥವು 'ವಿಸ್ತರ ಸತ್ತ್ವತ್ರಿಭಂಗೀ' ಎಂಬ ಹೆಸರಿನೊಡನೆ ಆರಾಜೈನಸಿದ್ಧಾಂತ ಭವನದಲ್ಲಿದೆ ಎಂದು ಮತ್ತು ಇದನ್ನು, ಹೇಗಿದೆಯೋ ಹಾಗೆಯೇ ನೇ.ಮಿ. ಚಂ.ಸಿ. ಚಕ್ರವರ್ತಿಯವರು ತಮ್ಮ ಗೊಮ್ಮಟಸಾರದ ಸತ್ತ್ವಸ್ಥಾನ ಅಧಿಕಾರದಲ್ಲಿ ತಮ್ಮದಾಗಿಸಿಕೊಂಡಿರುವರೆಂದು ಮಾನ್ಯ ಜುಗುಲ್ ಕಿಶೋರ್ ಮುಖ್ತಾರ್ ಅವರು ಹೇಳಿದ್ದಾರೆ.[೨೯] ಶ್ರೀಕನಕ ನಂದಿಯವರು ಮತ್ತು ನೇ.ಮಿ.ಚಂ.ಸಿ. ಚಕ್ರವರ್ತಿಯವರಿಬ್ಬರೂ ಇಂದ್ರನಂದಿ ಗುರುವಿನ ಶಿಷ್ಯರಾದ್ದರಾಗಿ, ಇವರೀರ್ವರು ಪರಸ್ಪರ ಭ್ರಾತೃಗುರು ಸಂಬಂಧ ಹೊಂದಿದ್ದಾರೆ ಬಹುದಾಗಿದೆ.

ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ–ಧವಲಾ ಮತ್ತು ಜಯಧವಲಾ ಸಿದ್ಧಾಂತ ವ್ಯಾಖ್ಯಾನಗಳ ರಚನೆಯಾದ ಬಳಿಕ ಅವುಗಳ ವಿಶಿಷ್ಯ ಅಧ್ಯಯನದ ಪೂರ್ವಕ 'ಸಿದ್ಧಾಂತ ಚಕ್ರವ್ರ್ತಿ' ಎಂಬ ಖ್ಯಾತಿಯ ಹೆಸರು ಹೊಂದಿದವರಲ್ಲಿ. ಆ ಹೆಸರಿನ ಸಾರ್ಥಕತೆಯ ಸಿದ್ದಿ ಪಡೆದವರೆಂದರೆ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರು. ಜೈನ ಜನಾಂಗಕ್ಕೆ ಮಾತ್ರವಲ್ಲ. ಕೈನೇತರ ವಿದ್ವಾಂಸರಿಗೂ ಇವರ

ಹೆಸರಿನ ಪರಿಚಯವಿದೆ. ಇದರ ಕಾರಣ ' ಗೊಮ್ಮಟ ' ವಿಖ್ಯಾತಿ ಹೊಂದಿದ ಇವರ ಪ್ರಸಿದ್ಧ ಕೃತಿ ಗೊಮ್ಮಟ ಸರ. ಇದನ್ನು ಇವರು 'ಗೊಮ್ಮಟಸಂಗ್ರಹ' 'ಗೊಮ್ಮಟ ಸಂಗಹ ಸುತ್ತ' 'ಗೊಮ್ಮಟಸುತ್ತ' ಎಂದು ಹೆಸರಿಸಿದ್ದಾರೆ.[೩] ಇದು ಜೀವಕಾಂಡ ಮತ್ತು ಕರ್ಮಕಾಂಡ ಎಂಬ ಎರಡು ಪ್ರಧಾನ ವಿಭಾಗಗಳುಳ್ಳದ್ದಾಗಿದೆ. ಇದಲ್ಲದೆ, ಲಬ್ಧಿಸಾರ, ಕ್ಷಪಣಸಾರ ಮತ್ತು ತಿಲೋಯಸಾರಗಳೂ ಇವರಿಂದ ರಚಿತವಗಿವೆ. ಗೊಮ್ಮಟಸಾರ ಜೀವಕಾಂಡವು ಷಟ್ ಖಂಡಾಗಮದ ಮೊದಲ ಐದು ಖಂಡಗಳ ಮತ್ತು ಧವಲಾಟೀಕೆಯ ಸಾರ ಸಂಗ್ರಹವಾಗಿದೆ. ಅಲ್ಲದೆ ದಿಗಂಬರಪಂಥದ ಪಂಚಸಂಗ್ರಹದ ಅನೇಕ ಗಾಹೆಗಳೂ ಇದರಲ್ಲಿ ಸಮಾವಿಷ್ಟವಾಗಿವೆ.[೪೨] ಕರ್ಮಕಾಂಡವು ಷಟ್ ಖಂಡಾಗಮದ ಆರನೇ ಖಂಡ ಮಹಾಬಂಧದ ಸಾರ ಸಂಗ್ರಹವಾಗಿದೆ. ಜೀವಕಾಂಡದ ಪ್ರಾರಂಭದ ಗಾಹೆಯಲ್ಲಿ 'ಜೀವಸ್ಸ ಪರೂವಣಂ ವೊಚ್ಛಂ' ಎಂದು ಹೇಳಿದ್ದಾರೆ. ಹೀಗೆಯೇ ಕರ್ಮಕಾಂಡದ ಪ್ರಾರಂಭದ ಗಾಹೆಯಲ್ಲಿ 'ಪಯಡಿ ಸಮು ಕ್ಕಿತ್ತ್ರಣಂ ವೊಚ್ಛಂ' ಎಂದು ಹೇಳಿದ್ದಾರೆ. ಮಹಾಬಂಧವು (ಕರ್ಮದ ) ಪ್ರಕೃತಿ ಬಂಧ ಸ್ವರೂಪ ಪ್ರತಿಪಾದನೆಯಿಂದ ಆರಂಭಾವಾಗುವುದು. ಲಬ್ಧಿಸಾರ ಹಾಗೂ ಕ್ಷಪಣ ಸಾರಗಳು ಕಸಾಯಪಾಹುಡ ಮತ್ತು ಅದರ ಟೀಕೆ ಜಯಧವಲಾದ ಸಾರಸಂಗ್ರಹಗಳಾಗಿವೆ.[೪] ತಿಲೋಯಸಾರವು ತಿಲೋಯ ಪಣ್ಣತ್ತಿ ಮತ್ತಿತರ ಲೋಕ ಸ್ವರೂಪ ಪ್ರರೂಪಕ ಕೃತಿಗಳ ಸಾರಸಂಗ್ರಹವಾಗಿದೆ.

ಗೊಮ್ಮಟಸಾರವು ಷಟ್ ಖಂಡಾಗಮ ಮತ್ತು ಧವಲಾಟೀಕೆಯ ಸಾರ ಸಂಗ್ರಹವಗಿದೆ ಎಂಬುದರಲ್ಲಿ ಯಾವ ವಿವಾದವೂ ಇಲ್ಲ. ಸ್ವತಃ ಇದರ ರಚನಾಕಾರರಾದ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರು ಈ ಬಗ್ಗೆ– 'ಚಕ್ರ(ಆಯುಧ)ದ ಮೂಲಕ ಚಕ್ರವರ್ತಿಯು ನಿರ್ವಿಘ್ನವಾಗಿ ಷಟ್ ಖಂಡವನ್ನು ಸಾಧಿಸಿದಂತೆ ನಾನು ಮತಿ(ಬುದ್ಧಿ) ರೂಪದ ಚಕ್ರದಿಂದ (ಜೀವಟ್ಠಾಣ್, ಖುದ್ದಾಬಂಧ, ಬ್ಥಸಾಮಿತ್ತವಿಚಯ, ವೇದನಾ, ವಗ್ಗಣಾ ಮತ್ತು ಮಹಾಬಂಧ ಎಂಬ) ಷಟ್ ಖಂಡವನ್ನು ಯಶಸ್ವಿಯಗಿ ಸಾಧಿಸಿರುವೆನು ಎಂದು ಹೇಳಿದ್ದಾರೆ. ಇದರಿಂದ (ಗೊಮ್ಮಟ, ಸಂಗಹ ಸುತ್ತ್) ಗೊಮ್ಮಟ ಸಾರವು ಷಟ್ ಖಂಡ (ಸುತ್ತ) ಆಗಮದ ಸಂಗ್ರಹವಾಗಿದೆ ಎಂದು ಸ್ಪಷ್ಟವಾಗುವುದು. ನೇಮಿಚಂದ್ರ ಸಿ. ಚ. ಅವರು ತಮ್ಮ ಇತರ ಕೃತಿಗಳಾದ ಲಬ್ಧಿಸಾರ, ಕ್ಷಪಣಸಾರ ಮತ್ತು ತಿಲೋಯಸಾರ ಕೃತಿಗಳನ್ನು ಅವುಗಳಲ್ಲಿ ನಿರೂಪಿತವಿರುವ ವಿಷಯದಾಧಾರ ದಿಂದ ಹೆಸರಿಸಿದ್ದಾರೆ. ಆದರೆ 'ಗೊಮ್ಮಟಸಾರ' ಎಂಬ

ಹೆಸರು ಮಾತ್ರ ಈ ಪ್ರಕಾರದ್ದಾಗಿರದೆ ಸಮಸ್ಯಾತ್ಮಕವಾದುದಾಗಿದೆ. ಷಟ್ ಖಂಡಾಗಮದ ಸಾರವಾಗಿರುವುದರಿಂದ ಇದನ್ನು 'ಷಟ ಖಂಡಾಗಮಸಾರ' ಎಂದೋ ಅಥವಾ ಇಂತಹ ರೀತಿಯ ಅನ್ವರ್ಥವಾದ ಹೆಸರಿಡದೆ 'ಗೊಮ್ಮಟಸಾರ' ಎಂದು ಹೆಸರಿಸಿರುವರೇಕೆ ಎಂಬ ಪ್ರಶ್ನೆಗೆಡೆಯಾಗಿ ಸಮಸ್ಯೆಯುಂಟಾಗಿದೆ. ಇಡರ ಬಗ್ಗೆ ವಿದ್ವಾಂಸರು ವಿಭಿನ್ನರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಅಭಿಪ್ರಾಯಗಳಲ್ಲಿ ಕೊನೆಯದಾಗಿ ಮನ್ಯ ಡಾ.ಎ.ಎನ್. ಉಪಾಧ್ಯೆ ಅವರ ಅಭಿಪ್ರಾಯವು ವಿಶೇಷ ಮಾನ್ಯತೆ ಪಡೆದು ನಿಂತಿದೆ. ಈ ಮಾನ್ಯರ ಅಭಿಪ್ರಾಯದ ಬಗ್ಗೆ ಖ್ಯಾತ ಜೈನ ಇತಿಹಾಸ ಸಂಶೋಧಕರಾದ ಮಾನ್ಯ ಡಾ.ಜ್ಯೋತೀ ಪ್ರಸಾದ್ ಜೈನ್ ಅವರು "ಇದೇನೇ, ಡಾ.ಎ.ಎನ್. ಉಪಾಧ್ಯೆ ಅವ್ರು ಈ ಎಲ್ಲ (ಹಿಂದಿನ) ತರ್ಕಗಳನ್ನು, ಸಂಭವ್ಯತೆಗಳನ್ನು ಮತ್ತು ಊಹೆಗಳನ್ನು ತಪ್ಪುಕಲ್ಪನೆಗಳೆಂದು ಸಮರ್ಥ ರೀತಿಯಿಂದ ನಿರೂಪಿಸಿದರು, ಹಾಗೂ 'ಗೊಮ್ಮಟ' ಪದವು ಸಂಸ್ಕೃತ ಅಥವಾ ಪ್ರಾಕೃತ ಭಾಷಾ ಮೂಲಗಳಿಂದ ನಿಷ್ಪನ್ನವಾಗಿರದೆ, ಕನ್ನಡ ತೆಲುಗು, ಕೊಂಡ್ಕಣಿ ಮತ್ತು ಮರಾಠಿ ಭಾಷೆಗಳಲ್ಲಿ, ಸ್ವಲ್ಪ ಮಾತ್ರದ ರೂಪಾಂತರ ದೊಡನೆ, ಸಾಧಾರಣವಾಗಿ, 'ಒಳ್ಳೆಯ (ಚೆನ್ನಾದ) ಉತ್ತಮವಾದ, ಕಣ್ಣಿಗೆ ಆನಂದ ಕೊಡುವ, ಹಿತೇಚ್ಛು ಅಥವಾ ಹಿತಕಾರಿ' ಎಂಬರ್ಥದ ಸ್ಥಳೀಯ ಪದವಾಗಿದೆ ಎಂದು ನಿರ್ಧರಿಸಿದ್ದಾರೆ. ಇದರಂತೆ ಈ ಪದವು ಚಾಮುಂಡರಾಯನ ಅಚ್ಚುಮೆಚ್ಚಿನ ಹೆಸರಾಗಿ ಬಳಕೆಯಲ್ಲಿದ್ದು ಅದನ್ನು (ಶ್ರೇಷ್ಠವ್ಯಕ್ತಿಯಾಧ) ಅವನಿಗೆ ಸಂಬಂಧಿಸಿದ ಅನೇಕ ಸಂಗತಿಗಳೊಡನೆ ಅನ್ವಯಗೊಳಿಸಿರಬೇಕು ಎಂದು ಅವರು ನಿರ್ಣಯಿಸಿದ್ದಾರೆ. ಮಾನ್ಯ ಉಪಾಧ್ಯೆಯವರೂ ತಮ್ಮ ವಾದವನ್ನು ಸಮಕಾಲೀನ ಸಾಕ್ಷ್ಯಾಧಾರಗಳಿಂದ ಸಮರ್ಥನೆಗೊಳಿಸಲಾಗದಿದ್ದರೂ, ಅವರ ಈ ಅಭಿವತವು ಹೆಚ್ಚು ಸಂಭವನೀಯವಾದುದಾಗಿದೆ. 'ಗೊಮ್ಮಟ' ಪದವನ್ನು ಬಳಕೆಗೆ ತಂದವರಲ್ಲಿ ಮೊದಲಿಗರಾದ ನೇಮಿ ಚಂದ್ರರು ಪ್ರಾಯಶಃ(ಚಾಮುಂಡ) ರಾಯನು ಹುಟ್ಟಿ ಬೆಳದ ಸ್ಥಳದ ಸುತ್ತು ಮುತ್ತಲಿನ ಸ್ಥಳದವರಾಗಿದ್ದು ಚಿಕ್ಕಂದಿನಿಂದಲೂ ಅವನ ಪರಿಚಯವುಳ್ಳವರಾಗಿದ್ದಿರಬೇಕೆಂದು ನಮಗೆನಿಸುತ್ತದೆ. ಇವರಿಬ್ಬರೂ ಪರಸ್ಪರ ಅತ್ಯಂತ ನಿಕಟವರ್ತಿಯಾದ ಪರಿಚಯವುಳ್ಳವರಾಗಿದ್ದರೆಂದು ಕಂಡುಬರುತ್ತದೆ. ಇವರಿಬ್ಬರು ಪರಸ್ಪರ ಎಷ್ಟು ಸಂನಿಕೃಷ್ಟ ಪರಿಚಯವುಳ್ಳವರಾಗಿದ್ದರೆಂದರೆ, ಇವರಿಬ್ಬರಲ್ಲಿ ಒಬ್ಬರು ಅಸಾಧಾರಣ

ಪಾಂಡಿತ್ಯ ಸಂಪನ್ನನಾದ ಮುನಿಯಾಗಿಯೂ ಮತ್ತು ಇನ್ನೊಬ್ಬನು ಅಸಾಧಾರಣವಾದ ರಾಜ ಸನ್ಮಾನ ಪಡೆದ ಮಹಾನ್ ವ್ಯಕ್ತಿಯಾಗಿ ಪರಿವರ್ಧನೆಹೊಂದಿದ ಅನಂತರದಲ್ಲಿಯೂ ಆ ಮೊದಲಿನವರು(ನೇಮಿಚಂದ್ರರು) ತಮ್ಮ ಗೆಳೆಯನೂ ಆನಂತರದಲ್ಲಿ ಶಿಷ್ಯನೂ, ಮತ್ತು ಪೊಷಕನೂ ಆದ ಆ ಎರಡನೆಯವನನ್ನು ( ಚಾಮುಂಡರಾಯನನ್ನು) ಗೆಳೆತನದ ಸಲಿಗೆ ಹಾಗೂ ಅಭ್ಯಾಸಬಲದಿಂದ ಮೊದಲಿನ ಅಚ್ಚುಮೆಚ್ಚಿನ (ಗೊಮ್ಮಟ ಎಂಬ) ಹೆಸರಿನಿಂದಲೇ ಕರೆಯುವುದನ್ನು ಮುಂದುವರಿಸಿದರು. ಅವನನ್ನು ನೇಮಿಚಂದ್ರರು ಎಲ್ಲಿಯೇ ಆಗಲಿ ಅವನ ('ಚಾಮುಂಡರಾಯ') ಎಂಬ ಅಧಿಕಾರದ ಪ್ರಸಿದ್ಧ ಹೆಸರಿ ನಿಂದ ನಿರ್ದೇಶಿಸದೆ ಗೊಮ್ಮಯ, (ಗೊಮ್ಮಟರಾಜ) ಗೊಮ್ಮಟರಾಯ ಎಂಬುದಾಗಿ ನಿರ್ದೇಶಿಸಿರುವುದು ಅರ್ಥಗರ್ಭಿತವಗಿದೆ ಎಂಬುದನ್ನು ತಳ್ಳಿಹಾಕುವಂತಿಲ್ಲ. ಇಷ್ಟು ಮಾತ್ರವಲ್ಲ; ನೇಮಿಚಂದ್ರರು ಚಾಮುಂಡರಾಯ ಬಸದಿಯಲ್ಲಿ ಪ್ರತಿಷ್ಠಿತವಾಗಿದ್ದ, ತಮಗೆ ಹಾಗೂ ಚಾಮುಂಡರಾಯನಿಗೆ ವಿಶೇಷ ಪೂಜ್ಯತೆಯವನಾದ, ಭಗವಾನ್ ನೇಮಿನಾಥನ ಬಿಂಬವನ್ನು 'ಗೊಮ್ಮಟ ಜಿನ' ಅಥವಾ ಗೊಮ್ಮಟ ಜಿನೇಂದ್ರ ಎಂದು ಹೆಸರಿಸಿರುವುದಲ್ಲದೆ ಈ ಬಸದಿ ಇರುವ ( ಚಂದ್ರಗಿರಿ) ಚೈಕ್ಕಬೆಟ್ಟವನ್ನು 'ಗೊಮ್ಮಟಗಿರಿ' ಎಂದು ಮತ್ತು ಬಾಹುಬಲಿ (ಗೊಮ್ಮಟ) ಮೂರ್ತಿಯ ನಿರ್ಮಾಣಕಾರ್ಯವನ್ನು ಯಾವ ಬಂಡೆಯ ಮೇಲಿದ್ದು ಪರಿವೀಕ್ಷಣೆಮಾಡುತ್ತಿದ್ದನೋ ಆ ಬಂಡೆಯನ್ನು 'ಗೊಮ್ಮಟ ಶಿಲೆ' ಎಂದು, ಮತ್ತು ಗೊಮ್ಮಟರಾಯನ ಹಿತದ ಉದ್ದೇಶದಿಂದ ರಚಿಸಲಾದ 'ಗೊಮ್ಮಟ ಸಾರ' ಎಂಬ ಹೆಸರಿನಿಂದ ಪ್ರಸಿದ್ಧವಿರುವ ಕೃತಿಯನ್ನು ಗೊಮ್ಮಟ ಸುತ್ತ 'ಗೊಮ್ಮಟ ಸಂಗ್ರಹ' ಅಥವಾ 'ಗೊಮ್ಮಟ ಸಂಗ್ರಹ ಸೂತ್ರ' ಎಂದು ಹೆಸರಿಸಿದ್ದಾರೆ. ಆದ್ದರಿಂದ ಚಾಮುಂಡರಾಯನು ತನ್ನ ಚಿಕ್ಕ ವಯಸ್ಸಿನಿಂದಲೂ ಔದಾರ್ಯ ಪ್ರಕೃತಿಯವನಾಗಿದ್ದು ರೂಪಸಂಪನ್ನನೂ, ಉದಾತ್ತನೂ ಸದಾಚಾರಶೀಲನೂ ಅಗಿದ್ದನಾಗಿ, ಅವನಿಗೆ ಮುದ್ದಿನದಾದ ಅಥವಾ ಮೆಚ್ಚಿಗೆಯ ಮನೆ ಬಳಕೆಯ 'ಗೊಮ್ಮಟ' ಎಂಬ ಹೆಸರಿದ್ದಿತೆಂದು ಸ್ಪಷ್ಟವಾಗುವುದು. ಇಷ್ಟು ಮಾತ್ರವಲ್ಲದೆ, ತನ್ನ ಸ್ನೇಹಿತ ಹಾಗೂ ಪೋಷಕನ ಈ ಗೊಮ್ಮಟ ಎಂಬ ಹೆಸರನ್ನು ಹೊರ ಜಗತ್ತಿಗೆ, ಮತ್ತು ಭವಿಷ್ಯ ಸಂತತಿಗೆ ಪ್ರಕಾಶಪಡಿಸಿ ಪ್ರಚುರಗೊಳಿಸಿದವರೆಂದರೆ ನೇಮಿಚಂದ್ರರೇ ಅಹುದು. ಈ ಬಳಿಕ ಜಗತ್ತು ಗೊಮ್ಮಟರಾಯನಿಂದ ಪ್ರತಿಷ್ಠಿತವಾದ (ಅವನ ಆರಾಧ್ಯ ಭಗವಂತನ) ಅಪ್ರತಿಮ ಪ್ರತಿಮೆಯನ್ನು 'ಗೊಮ್ಮಟೇಶ್ವರ' ಎಂದು

ಕ್ರೈಯಲಾರಂಭಿಸಿದ್ದಲ್ಲಿ ಅಚ್ಚರಿ ಪಡುವಂತಹುದೇನಿಲ್ಲ. ನೇಮಿಚಂದ್ರರು, ಈ ಬಾಹುಬಲಿಮೂರ್ತಿಯನ್ನು 'ಕುಕ್ಕುಟಜಿನ್' ಅಥ್ವಾ 'ದಕ್ಷಿಣ ಕುಕ್ಕುಟಜಿನ್' ಎಂದು ಮಾತ್ರ ಹೆಸರಿಸಿ 'ಗೊಮ್ಮಟ' ಎಂಬುದಾಗಿ ಹೆಸರಿಸಿಯೇ ಇರಲಿಲ್ಲವಾದರೂ, ಈ (ಗೊಮ್ಮಟ ಎಂಬ) ಹೆಸರು ಈ ಮೂರ್ತಿಯ ಹೆಸರಾಗಿ ಬಳಕೆಯಲ್ಲಿ ಅನಂತರ ಕಾಲದಲ್ಲಿ ಬಂದಿತಲ್ಲದೆ, ಅವರಿಂದ ( ಈ ಹೆಸರು) ಇತರ ಸಂದರ್ಭಗಳಿಗೆ ಅನ್ವಿತವಾಗಿ ಬಳಸಿದ್ಧವುಗಳಲ್ಲಿ ಗೊಮ್ಮಟಸಾರ ಕೃತಿಯೊಂದರ ಹೊರತಾಗಿ, ಮಿಕ್ಕೆಲ್ಲವೂ ಮರೆವಿಗೆ ಒಳಗಾಗಿಬೆ ಎಂಬುದು ವಿಚಿತ್ರ ಸ್ಮಗತಿಯಾಗಿದೆ. ನಿಜವೆಂದರೆ, ಈ ಮೂರ್ತಿಯು ಕನಿಷ್ಠಪಕ್ಷ ೧೧ನೇ ಶತಮಾನದ ಕೊನೆಯವರೆಗೆ ಈ (ಗೊಮ್ಮಟಎಂಬ) ಹೆಸರನ್ನು ಹೊಂದಿರಲಿಲ್ಲ–ರನ್ನನು ತನ್ನ ಅಜಿತನಾಥ ಪುರಾಣದಲ್ಲಿ (ಕ್ರಿ.ಶ. ೯೯೩) ಖ್ಯಾತಿವಂಹೆ, ಧರ್ಮಪ್ರಾಯಣೆ, ಉದಾತ್ತಗುಣಸಂಪನ್ನೆ ಅತ್ತಿಮಬ್ಬೆಯು ಶ್ರವಣ ಬೆಳೆಗುಳದ 'ಕುಕ್ಕುಟ ಜಿನ'ನ ದರ್ಶನಾರ್ಥಯಾತ್ರೆ ಕೈಗೊಂಡ ಪ್ರಸಂಗವನ್ನು ಹೇಳಿದ್ದಾನೆ."[೬]

ಈ ಮೇಲೆ ಹೆಳಿರುವ ಕೆಲವು ಅಂಶಗಳು ಪರ್ಯಾಲೋಚನಾರ್ಹವಗಿವೆ. ೧.ಮನ್ಯ ಡಾ.ಎ. ಎನ್. ಉಪಾಧ್ಯೆಯವರು 'ಗೊಮ್ಮಟ' ಶಬ್ದದ ಮೂಲವನ್ನು ಕುರಿತು ಅತ್ಯಂತ ಸಮರ್ಥಕ ರೀತಿಯ್ಹಾದ ವಿವರಣೆ ನೀಡಿದ್ದಾರೆ. ಆದರೆ ಇದು ಮುದ್ದಿನಿಂದ ಅಥವಾ ಮೆಚ್ಚಿಗೆಯಿಂದ ಇರಿಸಿದ ಚಾಮುಂಡರಾಯನ ಅಡ್ಡ ಹೆಸರಾಗಿ ಬಳಕೆಯಲ್ಲಿದ್ದಿತೆಂಬುದಕ್ಕೆ ಸಾಕ್ಷೀಯಾದ ಯಾವುದೇ ಆಧಾರವೂ ಇಲ್ಲವಾಗಿರುವುದರಿಂದ ನಿರಾಧಾರವಾದ ಊಹೆ ಮಾತ್ರವಾಗಿದೆ.

ಚಾಮುಂಡರಾಯನು ತನ್ನ ತ್ರಿಷಷ್ಟಿ ಪುತಿಬದ್ಧ ಪುರಾಣ (ಚಾವುಂಡ ರಾಯಪುರಾಣ)ದ ಅಂತಿಮ ಪ್ರಶಸ್ತಿಯಲ್ಲಿ ತನ್ನ ಬಹುಮಾನ ಅಥವಾ ಉಪಾಧಿ ಹೆಸರುಗಳನ್ನು ಹೇಳಿದ್ದಾನೆ. ಇವುಗಳನ್ನು ಕ್ಷಾತ್ರ–ವಿರಗುಣ ಸಂಬಂಧಿ ಮತ್ತು ಧಾರ್ಮಿಕ ಸಂಬಂಧಿ ಎಂದು ಎರಡು ಪ್ರಕಾರದಿಂದ ನೋಡಬಹುದು. ವೀರ ಮಾರ್ತಾಂಡ, ಸಮರಧುರಂಧರ, ರಣರಂಗಸಿಂಗ, ವೈರಿಕುಳಕಾಳದಂಡ, ಅಸಹಾಯ ವಿಕ್ರಮ, (ಭುಜವಿಕ್ರಮ?) ಸಮರಪರಶುರಾಮ, ಪ್ರತಿಪಕ್ಷರಾಕ್ಷಸ, ಭಟಮಾರಿ, ಸುಭಟ ಚೂಡಾಮಣಿ– ಇವು ವೀರಗುಣ ಸಂಬಂಧಿ ಪ್ರಶಸ್ತಿ ಹೆಸರುಗಳು. ಸಮ್ಯಕ್ತ್ವ ರತ್ನಾಕರ, ಸತ್ಯಯುಧಿಷ್ಠಿರ, ಶೌಚಾಭರಣ, ಗುಣರತ್ನಭೂಷಣ, ಗುಣವಂಕಾವ, ಎಂತು ಮೊಳ್ಳಿದನ್–ಇವು ಧಾರ್ಮಿಕ

ಗುಣಸಂಬಂಧಿ ಪ್ರಶಸ್ತಿ ಹೆಸರುಗಳು. ಇವಲ್ಲದೆ ಕವಿರತ್ನಶೇಖರ ಎಂಬ ಬಿರುದೂ ಇದ್ದಿಹು. 'ವೀರಮಾರ್ತಾಂಡ' ಎಂಬ ಬಿರುದಿನ ಹೆಸರಿನೊಡನೆ ನಾಲ್ಕು ಪದ್ಯಗಳು ಕೊನೆಗೊಳ್ಳುತ್ತವೆಯಾಗಿ ಇದು ಇವನಿಗೆ ಹೆಚ್ಚು ಪ್ರೀತಿಯ ಬಿರುದಾಗಿದ್ದಿತೆಂದು ತಿಳಿಯಬಹುದಾಗಿದೆ. ಇವನನ್ನು 'ಅಣ್ಣ' ಎಂದು ಕರೆಯುವ ರೂಢಿಯೂ ಇದ್ದಿತೆಂದು ಕಂಡುಬರುತ್ತದೆ. ಪುರಾಣದ ಕೊನೆಯ ಐದು ಪದ್ಯಗಳಲ್ಲಿ ಇವನನ್ನು 'ಅಣ್ಣ' ಎಂದು ನಿರ್ದೇಶಿಸಿದೆ. ಪುರಾಣದ ಇಪ್ಪತ್ತನಾಲ್ಕು ತೀರ್ಥಂಕರರ ಕಥಾವಿಭಾಗಗಳ ಅಂತ್ಯಪುಷ್ಪಿಕೆಗಳಲ್ಲಿ 'ಚಾಮುಂಡರಾಯ ವಿರಚಿಹ ಮಪ್ಪ' ಎಂದಿದೆಯಾದ್ದರಿಂದ ರೂಢಿಗಹವಾಗಿ 'ಚಾವುಂಡರಾಯ' ಎಂಬ ಹೆಸರು ಹೆಚ್ಚು ಪ್ರಚಲಿತವಿದ್ದಿತೆಂದು ತಿಳಿಯಬೇಕಾಗುವುದು. ಇದಲ್ಲದೆ ಈ ಹೆಸರಿನ ಅಂತ್ಯ ಪದವಾದ ರಾಯ' ಎಂಬಷ್ಟರಿಂದಲೂ ಇವನನ್ನು ಹೆಸರಿಸಿರುವ ರೂಢಿಇದ್ದಿತೆಂದು ಹೇಳಬಹುದಾಗಿದೆ. ಈ ರೀತಿಯಿಂದ ಈ ಎಲ್ಲ ಬಿರುದುಗಳ ಮತ್ತು ಹೆಸರುಗಳ ಉಲ್ಲೇಖವನ್ನು ಈ ಪುರಾಣದಲ್ಲಿ ಕಾಣಬಹುದಾದರೂ ಇವನ ಹಿರಿಯರು ಮುದ್ದಿ ನಿಂದ ಅಥವಾ ಮೆಚ್ಚಿಗೆಯಿಂದ ಕರೆದರೆಂದು ಹೇಳಲಾಗಿರುವ 'ಗೊಮ್ಮಟ' ಎಂಬ ಹೆಸರೊಂದು ಮಾತ್ರ ಉಲ್ಲೇಖಗೊಂಡಿಲ್ಲ ಎಂಬುದು ಪ್ರಸ್ತುತ ಸಂದರ್ಭದಲ್ಲಿ ಅವಶ್ಯವಾಗಿ ಗಮನಕ್ಕೆ ತಂದುಕೊಳ್ಳುವಂತಹುದಾಗಿದೆ. ಇದರಿಂದ ಇವನಿಗೆ ಚಿಕ್ಕಂದಿನಿಂದಲೂ ಮುದ್ದಿನ 'ಗೊಮ್ಮಟ' ಎಂಬ ಹೆಸರಿದ್ದಿತೆಂಬುದರ ಸಂಭಾವ್ಯತೆಯು ಅಸಂಭವವೆನಿಸುವುದು.

೨. ಮಾನ್ಯ ಡಾ. ಜ್ಯೋತಿ ಪ್ರಸಾದ್ ಜೈನ್ ಅವರು, ಈ ಹಿಂದೆ ಉಲ್ಲೇಖಿಸಿರುವಂತೆ, ಚಾಮುಂಡರಾಯ ಮತ್ತು ನೇಮಿಚಂದ್ರ (ಸಿ.ಚ) ಅವರು ಚಿಕ್ಕವಯಸ್ಸಿನಿಂದಲೂ ಪರಸ್ಪರ ಅತಿನಿಕಟವಾದ ಪರಿಚಯವುಳ್ಳವರಾಗಿದ್ದರೆಂದು, ಇದರಿಂದಾಗಿ ನೇಮಿ ಚಂದ್ರ (ಸಿ.ಚ) ಅವರಿಗೆ ಚಾಮುಂಡರಾಯನ ಮುದ್ದಿನ 'ಗೊಮ್ಮಟ' ಎಂಬ ಹೆಸರು ಗೊತ್ತಿದ್ದಿತೆಂದು, ಅವನನ್ನು ಗೊಮ್ಮಟಸಾರದಲ್ಲಿ ಇದೇ ಹೆಸರಿನಿ;ಂದ ನಿರ್ದೇಶಿಸಿರುವರೆಂದು ಹೇಳಿದ್ದಾರೆ. ಇವರ ಈ ಹೇಳಿಕೆಯನ್ನು ಸಮರ್ಥಿಸುವ ಯಾವ ಆಧಾರವೂ ಇಲ್ಲವಾಗಿರುವುದರಿಂದ ಹಾಗೂ ಇದರ ವಿರುದ್ಧವಾಗಿ ಸಮರ್ಥನೆ ಮಾಡಬಹುದಾದ ಆಧಾರವಿರುವುದರಿಂದ ಇದು ಕೇವಲ ಊಹೆ ಮಾತ್ರವಾಗಿ ನಿಲ್ಲುತ್ತದೆ. ಚಾಮುಂಡರಾಯನು ತನ್ನ ಪುರಾಣದಲ್ಲಿ ತನ್ನ ಗುರುವಾದ ಅಜಿತಸೇನಾಚಾರ್ಯರ ಹೆಸರನ್ನು

ಬಹುಭಕ್ತಿಭಾವದಿಂದ ಹೇಳಿರುವನಲ್ಲದೆ, ಧರ್ಮಸೇನಾದಿ ನಯಸೇನಪರ್ಯಂತರಾದ, ಗುರು ಅನುಕ್ರಮವನ್ನೂ ಸ್ತುತಿಪೂರ್ವಕ ಪ್ರಸ್ತಾವಮಾಡಿದ್ದಾನೆ.[2] ಆದರೆ ತನಗಾಗಿ ದಿಗಂಬರ ಪಂಥದ ಮಹೋನ್ನತ ಷಟ್ ಖಂಡಾಗಮ–ಸಿದ್ದಾಂತವನ್ನು ಸ್ಮಗ್ರಹಿಸಿ ಕೃತಿ ರಚನೆ ಮಾಡಿ ಭೋಧಿಸಿದ ನೇಮಿಚಂದ್ರಾಚಾರ್ಯರ ನಿಕಟವರ್ತಿಯಾದ ಪರಿಚಯವು ಮುಂಚಿತವಾಗಿಯೇ ಅವನಿಗಿದ್ದಾರೂ ಅವರನ್ನು ತನ್ನ ಪುರಾಣದಲ್ಲಿ ಹೆಸರಿಸಿಯೇ ಇಲ್ಲವೆಂಬುದು ವಿಚಿತ್ರವೆನಿಸುವುದಲ್ಲದೆ. ಚಿಕ್ಕಂದಿನಿಂದಲೂ ಇವರೀರ್ವರು ಪರಸ್ಪರ ಪರಿಚಯ ಹೊಂದಿದ್ದರೆಂಬುದರ ಅಸಂಭಾವ್ಯತೆಯನ್ನು ಎತ್ತಿತೋರುವುದು. ಇದರಂತೆ, ಪ್ರಾಯಿಕವಾಗಿ ಚಾಮುಂಡರಾಯನಿಗೆ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರ ನಿಕಟತರವಾದ ಪರಿಚಾಯವು ಚಾಮುಂಡರಾಯಪುರಾಣದ ರಚನೆಯಾದ ಬಳಿಕವೇ ಆಗಿದೆಯೆಂದು ಹೇಳಬಹುದು. ಆದ್ದರಿಂದ ಚಿಕ್ಕಂದಿನ ನಿಕಟಪರಿಚಯದ ವಶವಾಘಿ ನೇಮಿಚಂದ್ರಾಚಾರ್ಯರು ಚಾಮುಂಡರಾಯನನ್ನು ಎಲ್ಲೆಡೆಯೂ ಅವನ ಮುದ್ದಿನ ಮನೆಬಳಕೆಯ 'ಗೊಮ್ಮಟ' ಎಂಬ ಹೆಸರಿನಿಂದ ನಿರ್ದೇಶಿಸಿರುವರೆಂಬುದೌ ಸರ್ವಥಾ ನಿರಾಧಾರವಾದ ಊಹೆ ಮಾತ್ರವಾಗಿದೆ. ಈ ಎಲ್ಲ ಕಾರಣಗಳಿಂದ ಚಾವುಂಡಾರಾಯನಿಗೆ ಮನೆ ಬಳಕೆಯದಾಗಿದ್ದ 'ಗೊಮ್ಮಟ' ಎಂಬ ಅಡ್ಡ ಹೆಸರಿದ್ದಿತೆಂಬುದರ ಸಮರ್ಥನೆಯಾಗದೆ ನಿರಾಧಾರವಾಧ ಊಹೆ ಮಾತ್ರವಾಗಿ ಉಳಿಯುವುದು. ಮಾನ್ಯ ಉಪಾಧ್ಯೆಯವರು, ಗೊಮ್ಮಟ ಪದವು ಕನ್ನಡ ಮುಂತಾದ ಭಾಷೆಗಳಲ್ಲಿ ಸ್ವಲ್ಪ ಮಾತ್ರದ ರೂಪ ವ್ಯತ್ಯಾಸದೊಡನೆ'ಚಿನ್ನ' ಎಂದು ಮುಂತಾದ ಅರ್ಥಗಳಲ್ಲಿ ಬಳಕೆಯಲ್ಲಿದೆ ಎಂದು ಹೇಳಿರುವುದು ಅರ್ಥವತ್ತಾಗಿದೆ. ಪ್ರಾಕೃತ ಭಾಷೆಯಲ್ಲಿ ಸಂಸ್ಕೃತ. ಮೂಲದವುಗಳಲ್ಲದ ದೇಸೀ ಮೂಲದ ಅನೇಕ ಪದಗಳಿವೆಯೆಂಬುದು ಸುವಿದಿತ. ಇದರಂತೆ ಪ್ರಸ್ತುತ 'ಗೊಮ್ಮಟ' ಶಬ್ದವು ಕನ್ನಡ ಮೂಲದ್ದಾಗಿದ್ದು ಪ್ರಾಕೃತರೂಪದಲ್ಲಿ ಬಳಕೆ ಹೊಂದಿದೆ ಎಂದು ಹೇಳಬಹುದಾಗಿದೆ. ಕನ್ನಡದಲ್ಲಿ 'ಗುಮ್ಮಟ' ಎಂಬ ಶಬ್ದವು ಗೋಪುರ ಎಂಬರ್ಥದಿಂದ ಬಳಕೆಯಲ್ಲಿದೆ. ಗುಂ ಮಟವು ಅರ್ಧ ಗೋಲಾಕಾರವುಳ್ಳದ್ದಾಗಿದ್ದು ಸಾಧಾರಣವಾಗಿ ದೇವಸ್ಥಾನದ ಗರ್ಭಗುಡಿಯ ಮೇಲ್ಭಾಗದಲ್ಲಿ ರಚನೆ ಹೊಂದಿರುತ್ತದೆ. ಇದರ ಕೆಳ ಪ್ರದೇಶದಲ್ಲಿ ನೇರವಾಗಿ ದೇವರ ವಿಗ್ರಹವಿರುವುದಾರಿಂದ ಆ ಸ್ಥಳದಲ್ಲಿ ಯಾರಾಗಲಿ ಕಾಲನ್ನಿರಿಸಬಾರದೆಂಬ ಉದ್ದೇಶ ದಿಂದ ಪ್ರಾಯಿಕವಾಗಿ ಇದರ ರಚನೆ ರೂಢಿಗೆ

ಬಂದಿರಬಹುದಾಗಿದೆ. ಈ ರೀತಿಯಿಂದ ಈ ಗೋಪುರ ಶಬ್ದವು ಉನ್ನತ ಪವಿತ್ರ, ಶ್ರೇಷ್ಠ ಮುಂತಾದ ಅರ್ಥ ವಿಶೇಷಗಳನ್ನೊಳಗೊಂಡಿದೆ. ಸಂಸ್ಕೃತದಲ್ಲಿ ಭಾವಾರ್ಥದಿಂದ ಅಥವಾ ಲಕ್ಷಣಾರ್ಥದಿಂದ ಪುರುಷ ಶಬ್ದವು 'ಪೌರುಷ' ಎಂಬ ರೂಪ ಹೊಂದಿದಂತೆ ಪ್ರಾಕೃತ ಭಾಷಾ ರೂಪ ದಿಂದ 'ಗುಂಮಟ'ವು 'ಗೊಂಮಟ' ಅಥವಾ 'ಗೊಮ್ಮಟ' ಎಂಬ ರೂಪ ಹೊಂದಿದೆ. ಈ ಶಬ್ದವು ಸುಂದರ, ಶ್ರೇಷ್ಠ, ಭವ್ಯ, ಉದಾತ್ತ, ಉತ್ತಮ, ಉತ್ಕೃಷ್ಟ, ಕಳಶಪ್ರಾಯ ಎಂದು ಮುಂತಾದ ಸೊಬಗಿನ ಅಥವಾ ಪಾವಿತ್ರ್ಯದ ಅರ್ಥ ಹೊಂದಿದೆ. ಈ ಅರ್ಥದಲ್ಲಿ ಶ್ರವಣಬೆಳಗುಳದ ಒಂದೆರಡು ಶಾಸನಗಳಲ್ಲಿ ಈ ಶಬ್ದದ ಪ್ರಯೋಗವಾಗಿರುವುದನ್ನು ಕಾಣಬಹುದು[೮] : 'ಗೊಮ್ಮಟದೇವ ನಿನ್ನತರಿಸಂದಳವಾರ್ಯರ್ಜನ್ಕಕ್ಕೆಗೊಂ ಮಟಂ,' ಗೊಮ್ಮಟಮೆನೆ ಮುನಿ ಸಮುದಾಯಂ ಮನದೊಳ್ಮೆಚ್ಚಿ' ಮತ್ತು ಗೊಮ್ಮಟ ಪುರಭೂಷಣಮಿದು ಗೊಮ್ಮಟಮಾಯ್ತೆನೆ' ಎಂಬ ಈ ಮಾಕ್ಯಗಳಲ್ಲಿ 'ಗೊಂಮಟಂ ಮತ್ತು ಗೊಮ್ಮಟಮಾಯ್ತೆನೆ' ಎಂಬ ಪದಗಳು ಈ ಮೇಲೆ ಹೇಳಿದ ಅರ್ಥದೊಡನೆ ಪ್ರಯುಕ್ತವಾಗಿರುವುದು ಸ್ಪಷ್ಟವಿದೆ ಇಷ್ಟು ಮಾತ್ರವಲ್ಲ; ಸ್ವತಃ ನೇಮಿಚಂದ್ರ, ಸಿ.ಚ. ಅವರೇ 'ಗೊಮ್ಮಟ ಸಂಗಹ ಸುತ್ತಂ ಗೊಮ್ಮಟ ದೇವೇಣ ಗೊಮ್ಮಟಂ ರ ಇಯಂ' ಗಾಹೆಯಲ್ಲಿ 'ಗೊಮ್ಮಟಂ' ಪದವನ್ನು ಸುಂದರ ಅಥವಾ ಭವ್ಯ ಎಂಬ ಅರ್ಥದಲ್ಲಿ ಪ್ರಯೋಗಿಸಿದ್ದಾರೆ. ದಿಗಂಬರ ಆಮ್ನಾಯದಲ್ಲಿ ಷಟ್ ಖಂಡಾಗಮಕ್ಕೆ ಸರ್ವೋತ್ಕೃಷ್ಟ ಸ್ಥಾನವಿದೆ. ಆದ್ದರಿಂದ ಲಕ್ಷಣಾರ್ಥದಿಂದ ಇದನ್ನು 'ಗೊಮ್ಮಟ' ಪದದಿಂದ ಸೂಚಿಸಿ ಅದರ ಸಾರವೆನಿಸಿರುವ ತಮ್ಮ ಕೃತಿಯನ್ನು 'ಗೊಮ್ಮಟ ಸಂಗಹ' 'ಗೊಮ್ಮಟ ಸಂಗಹ ಸುತ್ತ', 'ಗೊಮ್ಮಟ್ ಸುತ್ತ' (ಕ. ಕಾಂಫ್ಲ. ೮೧೧, ೯೬೫,೯೭೨) ಎಂದು ಹೆಸರಿಸಿರುವರೆಂದು ತಿಳಿಯಬಹುದಾಗಿದೆ.

ಇದೇ ರೀತಿಯದಾದ ಲಕ್ಷಣಾರ್ಥದಿಂದ ವೀರಸೇನಾಚಾರ್ಯರು ಷಟ್ ಖಂಡಾಗಮದ ತಮ್ಮ ಟೀಕೆಯನ್ನು 'ಧವಲಾ' ಎಂಬುದಾಗಿ ಹೆಸರಿಸಿರುವುದನ್ನು ಪ್ರಸ್ತುತ ಪ್ರಸಂಗದಲ್ಲಿ ಗಮನಿಸಬೇಕಾಗಿದೆ. ಚಾಮುಂಡರಾಯನ ಧೀರೋದಾತ್ತ ಧರ್ಮನಿಷ್ಠ ಶ್ರೇಷ್ಠ ವ್ಯಕ್ತಿತ್ವದ ಮೆಚ್ಚುಗೆಯ ಕಾರಣದಿಂದ ಅವನನ್ನು ನೇಮಿಚಂದ್ರಾಚಾರ್ಯರು 'ಗೊಮ್ಮಟ' ಅಥವಾ 'ಗೊಮ್ಮಟ ರಾಯ' ಎಂದು ಹೆಸರಿಸಿದ್ದಾರೆ.[೯] ಹೀಗೆಯೇ 'ಗೊಮ್ಮಟ ಸಂಗಹ ಸುತ್ತ' ಮಹಾನ್ ಕೃತಿಯ ರಚನಾಕಾರರಾದ ತಮ್ಮನ್ನು

’ಗೊಮ್ಮಟ ದೇವ’[೧೦] ಎಂದು ಚಾಮುಂಡರಾಯನ ವಿಶೇಷ ಆರಾಧನೆಯ ದೈವ ನೇಮಿತೀರ್ಥಂಕರನನ್ನು, ‘ಗೊಮ್ಮಟಜಿಣಿಂದ ಚಂದಂ’[೧೧] ಎಂದು ಮತ್ತು ಅವನಿಂದ ಪ್ರತಿಷ್ಠಿತವಾದ ಬಾಹುಬಲಿ ಮೂರ್ತಿಯನ್ನು ‘ಗೊಮ್ಮಟ್ ಜಿನ’[೧೨] ಎಂದು ಮತ್ತು ಗೊಮ್ಮಟ ಜಿನನಿರುವ ಗಿರಿಯನ್ನು ‘ಗೊಮ್ಮಟ ಸಿಹರ’[೧೨] ಎಂದು ಹೆಸರಿಸಿದ್ದಾರೆ.

ಪ್ರಸ್ತುತ ಪ್ರಸಂಗದಲ್ಲಿ ಹಿಂದೆ ಮಾನ್ಯ ಡಾ. ಜ್ಯೋತಿ ಪ್ರಸಾದ್ ಜೈನ್ ರವರ ಹೇಳಿಕೆಯನ್ನು ಉಲ್ಲೇಖಿಸಿರುವ, "ಆಚಾರ್ಯ ನೇಮಿಚಂದ್ರರು, ತಮ್ಮ ಗೆಳೆಯ ಮತ್ತು ಪೋಷಕನಾದ ಚಾಮುಂಡರಾಯನ ಮನೆಬಳಕೆಯ ‘ಗೊಮ್ಮಟ’ ಎಂಬ ಹೆಸರನ್ನು ಹೊರಜಗತ್ತಿಗೆ ಹಾಗೂ ಮುಂದಿನ ಪೀಳಿಗೆಗೆ ಪ್ರಚುರಗೊಳಿಸಿದರು. ಈ ಹೊರಜಗತ್ತು ಮತ್ತು ಮುಂದಿನ ಪೀಳೀಗೆಯವರು ( ಚಾಮುಂಡರಾಯ) ಗೊಮಟ ರಾಯನಿಂದ ಪ್ರತಿಷ್ಠಿತವಾಗಿದ್ದ ಅಪ್ರತಿಮ ಮೂರ್ತಿಯನ್ನು ‘ಗೊಮ್ಮಟೇಶ್ವರ’(ಗೊಮ್ಮಟನ ಸ್ವಾಮಿ) ಎಂದು ಕರೆಯಲಾರಂಭಿಸಿದರು. ನೇಮಿಚಂದ್ರರು ಬಾಹುಬಲಿಯ ಮೂರ್ತಿಯನ್ನು ‘ಕುಕ್ಕಟ ಜಿನ” ಅಥವಾ ‘ದಕ್ಷಿಣ ಕುಕ್ಕಟ ಜಿನ’ ಎಂದು ಮಾತ್ರ ನಿರ್ದೇಶಿಸಿದರಲ್ಲದೆ ‘ಗೊಮ್ಮಟ’ ಎಂಬುದಾಗಿ ನಿರ್ದೇಶಿಸಿಯೇ ಇಲ್ಲ. ನೇಮಿಚಂದ್ರರು, ತಮ್ಮ ಹಾಗೂ ಚಾಮುಂಡರಾಯನ ವಿಶೇಷ ಪೂಜನೀಯ ದೈವವದ, ( ಚಿಕ್ಕ ಬೆಟ್ಟದ ಮೇಲೆ) ಚಾಮುಂಡರಾಯ ಬಸದಿಯಲ್ಲಿ ಪ್ರತಿಷ್ಠಿತವಾದ ನೇಮಿನಾಥ ಸ್ವಾಮಿಯ ಪ್ರತಿಮೆಯನ್ನು ‘ಗೊಮ್ಮಟ ಜಿನ’ ಅಥವಾ ‘ಗೊಮ್ಮಟ ಜಿನ ಚಂದ್ರ’ ಎಂಬುದಾಗಿ, ಮತ್ತುಈ ಬಸದಿ ಇವರು (ಚ್ಚಿಕ್ಕ) ಬೆಟ್ಟವನ್ನು ‘ಗೊಮ್ಮಟಗಿರಿ’ ಎಂದು ಹಾಗೂ ಬಾಹುಬಲಿ ಮೂರ್ತಿನಿರ್ಮಿತಿಗಾಗಿ ಉಪಯೋಗಿಸಿದ ಬಂಡೆಯನ್ನು ‘ಗೊಮ್ಮಟ ಶಿಲೆ’ ಎಂದು ಕರೆದಿದ್ದಾರೆ,” ಎಂಬುದನ್ನು ಗಮನಿಸಬೇಕಾಗಿದೆ.

ಮಾನ್ಯ ಡಾ. ಜ್ಯೋತೀ ಪ್ರಸಾದ್ ಅವರ ಈ ಮೇಲಿನ ಅಭಿಪ್ರಾಯಗಳನ್ನು ಪರ್ಯಾಲೋಚನೆ ಮಾಡಬೇಕಾದ ಅಗತ್ಯವಿದೆ ; ‘ಗೊಮ್ಮಟ’ ಪದದ ಬಳಕೆಯು ಮೊದಲಬಾರಿಗೆ ಗೊಮ್ಮಟಸಾರದಲ್ಲಿ ಪ್ರಯುಕ್ತವಾಗಿದೆ, ಇದಕ್ಕಿಂತ ಪೂರ್ವಭಾವಿಯಾಗಿ ಪ್ರಯುಕ್ತವಾಗಿರುವ ದಾಖಲಾತಿಗಳಿಲ್ಲ. ಈ ಪದವು ಪ್ರಾಕೃತದಲ್ಲಿ ಮನ್ಮಥ ಎಂಬ ಅರ್ಥ ಹೊಂದಿದೆ ಮತ್ತು ಬಾಹುಬಲಿ ಸ್ವಾಮಿಯ ಪ್ರಥಮ ಮನ್ಮಥ ನಗಿರುವನಾದ್ದರಿಂದ ಬಾಹುಬಲಿ ಸ್ವಾಮಿಯ ಸೂಚಕವಾಗಿ ಈ

ಪದವನ್ನು ನೇಮಿ ಚಂದ್ರಾಚಾರ್ಯರು ಪ್ರಯೋಗಿಸಿರುವರೆಂದು ಮತ್ತು ಆ ಮೂರ್ತಿಯನ್ನು ಮಾಡಿಸಿದ ಚಾಮುಂಡರಾಯನನ್ನೂ, 'ಗೊಮ್ಮಟ' ಎಂದು ಹೆಸರಿಸಿ ಅವನಿಗಾಗಿ ರಚಿಸಿದ ಕೃತಿಯನ್ನು ನೇಮಿಚಂದ್ರರು 'ಗೊಮ್ಮಟಸಾರ' ಎಂದು ಹೆಸರಿಸಿರುವರೆಂಬ ಒಂದು ಅಭಿಪ್ರಾಯಮೂ ಇದೆ. ಹಾಗೂ ಹಿಂದೆ ಹೇಳಿರುವಂತೆ, 'ಬಾಹುಬಲಿ' ಸ್ವಾಮಿಯ ಮೂರ್ತಿಯನು ನಿರ್ಮಾಪಣ ಮಾಡಿಸಿದ ಚಾಮುಂಡರಾಯನಿಗೆ ಚಿಕ್ಕಂದಿನಿಂದಲೂ ಅಚ್ಚುಮೆಚ್ಚಿನ ಅಡ್ಡಹೆಸರಾಥಿ 'ಗೊಮ್ಮಟ' ಎಂಬ ಹೆಸರಿದ್ದಿತಾಗಿ, ಅವನಿಗಾಗಿ ರಚಿತವಾದ ತಮ್ಮ ಕೃತಿಯನ್ನು ನೇಮಿಚಂದ್ರರು 'ಗೊಮ್ಮಟಸಾರ' ಎಂದು ಹೆಸರಿಸಿರುವರೆಂಬ ಅಭಿಪ್ರಾಯಗಳಿರುವುದು ತಿಳಿದ ಸಂಗತಿಯಾಗಿದೆ. ಈ ರೀತಿಯಾಗಿ ಚಾಮುಂಡರಾಯನಿಗೆ ನೂತನವಾಗಿ ಕರೆಯಲಾದ ಇಲ್ಲವೆ, ಅಡ್ಡ ಹೆಸರಾಗಿದ್ದ 'ಗೊಮ್ಮಟಸಾರ ( ಗೊಮ್ಮಟ ಸಂಗಹ ಸುತ್ತ, ಗೊಮ್ಮಟಸುತ್ತ) ಎಂದು ಹೆಸರಿಸಿದೆ ಎಂದಾದಲ್ಲಿ ಇದರ ಅರ್ಥವನ್ನು ಗೊಮ್ಮಟನಿಗಾಗಿ ರಚಿಸಿದ ಸಾರ ಎಂದರ್ಥವಾಗುವುದು. ಅದರೆ ಈ ಅರ್ಥದಲ್ಲಿ 'ಯಾವುದರ ಸಾರ' ಎಂಬ ಪ್ರಶ್ನೆಗೆ ಉತ್ತರ ದೊರೆಯುವುದಿಲ್ಲ. ಇದರ ಬದಲಾಗಿ ಹಿಂದೆ ವಿವರಿಸಿರುವಂತೆ 'ಗೊಮ್ಮಟ' ಪದವು ದಿಗಂಬರ ಆಮ್ನಾಯದ ಸರ್ವೋತ್ತಮವಾದ ಷಟ್ಖಂಡಾಗಮದ ಸೂಚಕವಾಗಿದೆ ಎಂದು ಗ್ರಹಿಸಿದಲ್ಲಿ ಗೊಮ್ಮಟಸಾರವು ಷಟ್ಖಂಡಾಗಮದ ಸಾರವಾಗಿದೆ ಎಂದು ಸಮುಚಿತಾರ್ಥವುಳ್ಳದ್ದಾಗುವುದು. ಇದಲ್ಲದೆ ಈ ಕೃತಿಯು ಷಟ್ಖಂಡಾಗಮದ ಮೂಲದ್ದಾಗಿದೆ ಎಂಬುದನ್ನು ಪರ್ಯಾಯರೂಪದಿಂದ ಸ್ವತಃ ನೇಮಿಚಂದ್ರ ಸಿ. ಚ. ಅವರೇ ಸೂಚಿಸಿರುವುದನ್ನು ಈ ಮುಂದಿನ ಗಾಹೆಯಿಂದ ಕಾಣಬಹುದು.

> ಸಿದ್ಧಂತುದಯತಡುಗ್ಗಯಣುಮ್ಮಲ ವರಣೇಮಿಚಂದ್ರ ಕರಕಲಿಯಾ।
>
> ಗುಣರಯಣಭೂಸಣಂಬುಹಿಮ ಇವೇಲಾ ಭರಉ ಭುವಣಯಲಂ॥

(೯೬೭–ಗೋ. ಸಾ. ಕ ಕಾಂಡ)

'ಸಿದ್ಧಾಂತರೂಪಿ ಉದಯಾಚಲತಟದಿಂದ ಉದಯಿಸಿದ–ಶ್ರೇಷ್ಠ ನೇಮಿಚಂದ್ರ ರೂಪಿ–ಚಂದ್ರನ ಕಿರಣಗಳಿಂದ ಆವೃತವಾಗಿರುವ, ಗುಣಗಳೆಂಬ ರತ್ನಗಳ ಭೂಷಣವುಳ್ಳ ( ಚಾಮುಂಡರಾಯರೂಪಿ) ಸಮುದ್ರದ ಅಲೆಗಳರೂಪದ ಬುದ್ಧಿಯು ಭುವನ ತಲವನ್ನು ತುಂಬಲಿ'

(‘ಗುಣರತ್ನ ಭೂಷಣ’ ಎಂಬುದು ಚಾಮುಂಡರಾಯನ ಪ್ರಶಸ್ತಿ ರೂಪದ ಹೆಸರಾಗಿದೆ ಎಂಬುದನ್ನು ಇಲ್ಲಿ ಗಮನಕ್ಕೆ ತಂದುಕೊಳ್ಳಬಹುದು).

ಆದ್ದರಿಂದ ‘ಗೊಮ್ಮಟಸಾರ’ದ ಗೊಮ್ಮಟ ಪದದಿಂದ ( ಧವಲಾಟೀಕಾ ಸಹಿತ) ಷಟ್ಖಂಡಾಗಮದ ಸೂಚಕವನ್ನಾಗಿ ಗ್ರಹಿಸುವುದು ಸೂಕ್ತವಿದೆ. ಹೀಗೆಯೇ ಗೊಂಮಟ ಜಿಣ, ಗೊಂಮ್ಮ ದೇವ (= ನೇಮಿಚಂದ್ರಾಚಾರ್ಯ), ಗೊಂಮಟರಾಯ, ಗೊಂಮಟಸಿಹರ ಎಂಬ ಹೆಸರುಗಳಲ್ಲಿಯೂ ಗೊಂಮಟ ಪದವನ್ನು ಹಿಂದೆ ಹೇಳೀರುವಂತೆ, ಉತ್ಕೃಷ್ಟ, ಶ್ರೇಷ್ಠ, ಸುಂದರ, ಕಳಶಪ್ರಾಯಗಳಿಗೆ ಸದೃಶವಾಥ ಅರ್ಥದೊಡನೆ ಗ್ರಹಿಸುವುದು ಸಮುಚಿತವಿದೆ.

ಈಗ ಮಾನ್ಯ ಡಾ. ಜ್ಯೋತಿ ಪ್ರಸಾದ್ ಜೈನ್ ಅವರ ಅಭಿಪ್ರಾಯದ ಮತ್ತೆ ಕೆಲವಂಶಗಳ ಪರ್ಯಾಲೋಚನೆ ಮಾಡಬೇಕಾಗಿದೆ. ‘ಗೊಮ್ಮಟಜಿಣೋ’ ‘ಗೊಮ್ಮಟಸಿಹರುವರಿ’ ಎಂಬುವುಗಳಿಗೆ ಚಂದ್ರಗಿರಿಯ (ಚಿಕ್ಕ ಬೆಟ್ಟದ) ಮೇಲೆ ಚಾಮುಂಡ ರಾಯನು ಕಟ್ಟಿಸಿದ ಬಸದಿಯ ಒಂದು ಹಸ್ತಪ್ರಮಾಣದ ಇಂದ್ರ ನೀಲಮಣಿಯ ನೇಮಿನಾಥ ಪ್ರತಿಮೆ ಎಂದು[೧೩] ಮತ್ತು ‘ಗೊಮ್ಮಟ ಸಿಹರ’ ಎಂದರೆ ಗೊಮ್ಮಟಗಿರಿ– ಚಂದ್ರಗಿರಿ–ಚಿಕ್ಕಬೆಟ್ಟ ಎಂದು ಅರ್ಥೈಸಿದೆ. ಇನ್ನು ಗೊಮ್ಮಟರಾಯವಿಣಿಮ್ಮಿಯ ದಕ್ಖಿಣ ಕುಕ್ಕಡ ಜಿಣೋ ಎಂದರೆ ಚಾಮುಂಡರಾಯ ಗೊಮ್ಮಟರಾಯನಿಂದ ನಿರ್ಮಿತವಾಗಿರುವ ದಕ್ಷಿಣ ಕುಕ್ಕಟ ಜಿನ (ಬಾಹು ಬಲಿ) ಮೂರ್ತಿ ಎಂದರ್ಥ ಎಂಬ ಅಭಿಪ್ರಾಯವಿದೆ. ಬೆಳಗುಳದ ಚಿಕ್ಕ ಬೆಟ್ಟವನ್ನು ನೇಮಿಚಂದ್ರಾಚಾರ್ಯರು ‘ಗೊಮ್ಮಟ ಸಿಹರ’ ಎಂದರೆ ಗೊಮ್ಮಟಗಿರಿ ಎಂದು ಹೆಸರಿಸಿದ್ದಲ್ಲಿ ಅದು ಆ ಬೆಟ್ಟದ ಹೆಸರಾಗಿ ಎಂದಿಗಾಗಲಿ ಪ್ರಚಾರಕ್ಕೆ ಬಂದೇ ಇಲ್ಲ. ಮತ್ತಾವ ಎಡೆಯಲ್ಲಾಗಲಿ ಅಥವಾ ಪರಂಪರೆಯ ಅನುಶ್ರುತಿಯಲ್ಲಾಗಲಿ ಈ ಬೆಟ್ಟವನ್ನು ‘ಗೊಮ್ಮಟಗಿರಿ’ ಎಂದು ಹೆಸರಿಸಿಯೇ ಇಲ್ಲ ಚಾಮುಂಡರಾಯನು ಈ ಬೆಟ್ಟದ ಮೇಲೆ ಬಸದಿಯನ್ನು ನಿರ್ಮಿ ಸಿದ ಸಮಯಕ್ಕೆ ಮುನ್ನೂರು ನಾನೂರು ವರ್ಷಗಳ ಹಿಂದಿನಿಂದಲೂ ಇದಕ್ಕೆ ಕಳ್ಬಪ್ಪು ಅಥವಾ ಕಳ್ಬಪ್ಪು ಕಟಪ್ರಗಿರಿ ಅಥವಾ ಕಟವಪ್ರ ಎಂಬ ಹೆಸರಿದ್ದೇ ಇದ್ದಿತು. ಇದಲ್ಲದೆ. ‘ವೆಳ್ಗೊಳ ಅದ್ರಿ’ ಎಂಬುದಾಗಿಯೂ  ಇದನ್ನು ಅದಾಗಲೆ ಹೆಸರಿಸಲಾಗಿದ್ದಿತು.[೧೪] ಹೀಗೆ ಆ ಹೆಸರುಗಳು ಅದಾಗಲೇ ರೂಢಿಗತವಾಗಿದ್ದರೂ ಈ ಬೆಟ್ಟವನ್ನು ‘ಗೊಮ್ಮಟ ಶಿಖರ’ ಎಂದು  ಹೆಸರಿಸಿದ್ದಾರೆಂದರೆ

ಅದಕ್ಕೆ ಏನಾದರೊಂದು ವಿಶಿಷ್ಟ ಕಾರಣವಿರಬೇಕಾಗುತ್ತದೆ. ಗೊಮ್ಮಟ–ಚಾಮುಂಡರಾಯನು ಈ ಬೆಟ್ಟದ ಮೇಲೆ ನೇಮಿನಾಥ– ಗೊಮ್ಮಟ ಜಿನೇಂದ್ರನ ಬಸದಿಯನ್ನು ಕಟ್ಟಿಸಿದ್ದರಿಂದ ಈ ಬೆಟ್ಟಕ್ಕೆ ‘ಗೊಮ್ಮಟಗಿರಿ’ ಎಂಬ ಹೆಸರು ಬಂದಿದೆ ಎಂದೂ ಹೇಳುವಂತಿಲ್ಲ; ಏಕೆಂದರೆ ಈ ಬಸದಿಯು ‘ಚಾಮುಂಡರಾಯ ಬಸದಿ’ ಎಂಬ ಹೆಸರನ್ನೇ ಹೊಂದಿದೆಯಲ್ಲದೆ ‘ಗೊಮ್ಮಟ ಬಸದಿ’ ಎಂದೇ ನಲ್ಲ. ಈ ಬಸದಿಯಲ್ಲಿ ಚಾಮುಂಡರಾಯನು ಒಂದು ಹಸ್ತ ಪ್ರತಿಮೆಯ ಇಂದ್ರನೀಲಮಣಿಯ ನೇಮಿನಾಥ ಪ್ರತಿಮೆಯನ್ನಿರಿಸಿ ಪೂಜಿಸುತ್ತಿದ್ದನೆಂಬ ಅನುಶ್ರುತಿ ಇದೆ. ಪ್ರಾಯಶಃ ಚಾಮುಂಡರಾಯನು ನಿತ್ಯ ಪೂಜೆಗಾಗಿ ತನ್ನ ಮನೆಯಲ್ಲಿರಿಸಿ ಕೊಂಡಿದ್ದ ಈ ಪ್ರತಿಮೆಯನ್ನು, ತಾನು ಕುಕ್ಕಟೇಶ್ವರ (ಬಾಹುಬಲಿ) ಮೂರ್ತಿಯ ದರ್ಶನಾರ್ಥವಾಗಿ ಪೌದನಪುರಕ್ಕೆ ಪಯಣ ಹೊರಟಾಗ, ತನ್ನ ಜೊತೆಯಲ್ಲಿ ತಂದಿದ್ದಾನೆ. ಕುಕ್ಕುಟೇಶ್ವರನ ದರ್ಶನ ಅಸಾಧ್ಯವೆಂದು ತಿಳಿದು, ಶ್ರವಣ ಬೆಳಗುಳದಲ್ಲಿ ಚಿಕ್ಕಬೆಟ್ಟದ ಮೇಲೆ ಬಿಡಾರ ಹೂಡಿ ನಿತ್ಯವೂ ಪ್ರತಿಮೆಯನ್ನು ಪೂಜಿಸುತ್ತಿದ್ದು ಬಸದಿ ಕಟ್ಟಿಸಿದ ಅನಂತರ[೧೪] ಅಲ್ಲಿರಿಸಿ ಪೂಜಿಸುತ್ತಿದ್ದಿರಬೇಕು. ಇವರು ನೇಮಿನಾಥನ ಶಿಲಾಮಯ ಪ್ರತಿಮೆ ಮಾಡಿಸಿದ ಬಗ್ಗೆ ಶಾಸನದ ಇಲ್ಲವೆ ಅನುಶ್ರುತಿಯ ಆಧಾರವಿಲ್ಲ. ಈ ಬಸದಿಯಲ್ಲಿ ಈಗ ಗಂಗ ಸೇನಾಪತಿಯ ಮಗ ಏಚಣನಿಂದ ಪ್ರತಿಷ್ಠಿತವಾದ ಮೂರ್ತಿ ಇದೆ. ಚಾಮುಂಡರಾಯನ ನಿತ್ಯಪೂಜೆಯ ಇಂದ್ರನೀಲಮಣೀಯ ನೇಮಿನಾಥ ಪ್ರತಿಮೆಯನ್ನೇ ನೇಮಿಚಂದ್ರಾಚಾರ್ಯರು ‘ಗೊಮ್ಮಟ ಜಿನ’ ಅಥವಾ ‘ಗೊಮ್ಮಟ ಜಿಣಿಂದ ಚಂದ’[೧೫], ಎಂದು ಹೆಸರಿಸಿರಬಹುದು. ಆದರೆ ಇದಿಷ್ಟರಿಂದಲೇ ಚಿಕ್ಕಬೆಟ್ಟವನ್ನು ನೇಮಿಚಂದ್ರಾಚಾರ್ಯರು ‘ಗೊಮ್ಮಟಸಿಹರ’ ಅಥವಾ ‘ಗೊಮ್ಮಟ ಗಿರಿ’ ಎಂಬ ಹೆಸರಿನಿಂದ ಕರೆದಿರುವರೆಂಬುದನ್ನು ಇತರ ಆಧಾರಗಳಿಂದ ಸಮರ್ಥಿತವಗದೆ, ಒಪ್ಪಲಾಗುವುದಿಲ್ಲ.

ಶ್ರವಣ ಬೆಳಗುಳದ ಚಿಕ್ಕ ಬೆಟ್ಟವು, ಅಲ್ಲಿ ಚಾಮುಂಡರಾಯನು ಬೀಡು ಬಿಟ್ಟ ಸಮಯಕ್ಕಿಂತ ಅನೇಕ ಶತಮಾನಗಳಷ್ಟು ಹಿಂದಿನ ಕಾಲದಿಂದಲೇ, ತನ್ನದೇ ಆದ ಹೆಸರನ್ನು ಹೊಂದಿದ್ದು, ಕನಿಷ್ಠ ಮಿತಿಯಿಂದ ಅದರ ಮೇಲೆ ಚಂದ್ರಗುಪ್ತ ಬಸದಿ ಯೊಂದಾದರೂ ಇದ್ದಿತೆಂಬುದರಲ್ಲಿ ವಿವಾದವಿಲ್ಲ. ಆದರೆ ದೊಡ್ಡ ಬೆಟ್ಟಕ್ಕೆ ಪ್ರಾಶಸ್ತ್ಯ ಬಂದುದು ಅಲ್ಲಿ ಬಾಹುಬಲಿ ಮೂರ್ತಿ–ದಕ್ಷಿಣ ಕುಕ್ಕುಟೇಶ್ವರ– ಗೊಮ್ಮಟ ಜಿನನ ಪ್ರತಿಷ್ಠಾಪನೆಯಾದ ಅನಂತರದಲ್ಲಿಯೇ ಎಂಬುದರ ಬಗ್ಗೆಯೂ ವಿವಾದಕ್ಕೆಡೆಯಿಲ್ಲ.

ಇದರಿಂದ ಬಾಹುಬಲಿ– ಗೊಮ್ಮಟಜಿನನ ಪ್ರತಿಷ್ಠಾಪನೆಯಾದ ಬಳಿಕ ನೇಮಿಚಂದ್ರಾ ಚಾರ್ಯರು ಈ ಬೆಟ್ಟವನ್ನು 'ಗೊಮ್ಮಟಸಿಹರ' ಅಥವಾ 'ಗೊಮ್ಮಟಗಿರಿ' ಎಂದು ಹೆಸರಿಸಿರಬಹುದೆ? ಎಂಬ ವಿಚಾರಕ್ಕೆಡೆಯಾಗುವುದು:

ದೊಡ್ಡ ಬೆಟ್ಟದ ಮೇಲೆ ಬಾಹುಬಲಿ ಮೂರ್ತಿ ಪ್ರತಿಷ್ಠಾನೆಯಾದ ಅನಂತರದ ೧೫೦ ವರ್ಷಗಳ ಸುಮಾರಿನಲ್ಲಿ ಬಾಹುಬಲಿ ಮೂರ್ತಿಯ ಸ್ತುತಿ ಸಂಕೀರ್ತನವನ್ನೊಳಗೊಂಡ ಕವಿತಾ ಪೂರ್ಣಶಾಸನವು (ಸಂ. ೩೩೬ /೨೩೪/೮೫) ಪ್ರಸಿದ್ದ ಕವಿ ಬೊಪ್ಪಣ ಸುಜನೋತ್ತಂಸನಿಂದ ಸ್ಥಾಪಿತವಾಗಿದೆ. ಈ ಕವಿಗೆ ಬಾಹುಬಲಿ ಮೂರ್ತಿ ಪ್ರತಿಷ್ಠಾಪನೆಯ ಐತಿಹಾಸಿಕ ಸಂಗತಿಗಳು ವಿಶೇಷ ರೀತಿಯಿಂದ ತಿಳಿದಿದ್ದುವೆಂದು ಶಾಸನದ ಅವಲೋಕನದಿಂದ ಸ್ಪಷ್ಟವಾಗುವುದು: ಭರತ ಚಕ್ರವರ್ತಿಯು ಪೌದನಪುರದಲ್ಲಿ ೫೨೫ ಬಿಲ್ಲಿನಳತೆಯ ರತ್ನಖಚಿತ ಮೂರ್ತಿಯನ್ನು ಸ್ಥಾಪಿಸಿದ ಸಂಗತಿ, ಆ ಮೂರ್ತಿಯ ಸುತ್ತುಮುತ್ತಿನಲ್ಲಿ ಕಾಲಾನಂತರದಲ್ಲಿ ಭಯಂಕರವಾದ ಕುಕ್ಕುಟ ಸರ್ಪಗಳು ಸಂಚರಿಸಲಾರಂಭಿಸಿದುದರಿಂದ ಆ ಮೂರ್ತಿಗೆ ಕುಕ್ಕುಟೇಶ್ವರ ಎಂಬ ಹೆಸರಾದುದು ಮತ್ತು ಆ ಸ್ಥಾನವು ಸಾಮಾನ್ಯ ಜನರಿಗೆ ದುರ್ಗಮ ಅಥವಾ ಅಗಮ್ಯವಾದ ಸಂಗತಿ, ಈ ಮಹಾನ್ ಮೂರ್ತಿಯ ದರ್ಶನಾರ್ಥವಾಗಿ ಯಾತ್ರೆ ಕೈಗೊಂಡ ಚಾಮುಂಡರಾಯನು ಆರ್ಯಜನರಿಂದ ಆ ಸ್ಥಳಉ ದುರ್ಗಮವಾಗಿರುವ ಸಂಗತಿಯನ್ನು ತಿಳಿದು ಆ ಮೂರ್ತಿಯ ಪ್ರತೀಕವಾದ ಭವ್ಯ ಮೂರ್ತಿಯನ್ನು ಶ್ರವಣ ಬೆಳಗುಳದಲ್ಲಿ ಪ್ರತಿಷ್ಠಾಪನೆ ಮಡಿದುದು ಮತ್ತು ಈ ಮೂರ್ತಿಯು ದಕ್ಷಿಣ ಕುಕ್ಕುಟೇಶ ಎಂಬ ಹೆಸರು ಹೊಂದಿದ್ದಿ, ಚಾಮುಂಡರಾಯನು 'ಗೊಂಮಟ' ಎಂದು ವಿಶ್ರುತನಾದ್ದುದು – ಈ ಎಲ್ಲ ಸಂಗತಿಗಳನ್ನೂ ಕವಿಯು ಶಾಸನದಲ್ಲಿ ಹೇಳಿದ್ದಾನೆ. ನಿಜವೆಂದರೆ, ನೇಮಿಚಂದ್ರಾಚಾರ್ಯರು ಈ ಬಾಹುಬಲಿ ಸ್ವಾಮಿ ಮೂರ್ತಿಯನ್ನು 'ದಕ್ಷಿಣ ಕುಕ್ಕುಟ ಜಿಣ' ಎಂದು ಹೆಸರಿಸಿರುವುದರ ಹಿನ್ನೆಲೆಯ ಐತಿಹ್ಯಕ್ಕೆ ಈ ಶಾಸನವು ಪ್ರಾಚೀನತಮ ಆಧಾರವಾಗಿದೆ. ಮೂರ್ತಿಯ ಈ 'ದಕ್ಷಿಣ ಕುಕ್ಕುಟ ಜಿಣ' ಎಂಬ ಹೆಸರಿಗೆ ಗೊಂಮಟಸಾರವೇ ಪ್ರಾಚೀನತಮ ಆಧಾರವಾಗಿದ್ದು ಅನ್ಯತ್ರ ಅಷ್ಟಾಗಿ ಈ ಹೆಸರಿನ ಪ್ರಚಾರವಿಲ್ಲ. ಆದ್ದರಿಂದ ಈ ಶಾಸನದ ಕವಿಗೆ, ನೇಮಿಚಂದ್ರಾಚಾರ್ಯರು ಗೊಂಮಟಸಾರದಲ್ಲಿ ಈ ಮೂರ್ತಿಯನ್ನು 'ದಕ್ಖಿಣ ಕುಕ್ಕುಟ ಜಿನ' ಎಂದು ಹೆಸರಿ ಸಿರುವುದೂ ತಿಳಿದಿದೆ ಎಂಬುದರಲ್ಲಿ

ಸಂದೇಹವಿಲ್ಲ. ಚಾಮುಂಡರಾಯನನ್ನು 'ಗೊಂಮಟ' ಎಂದು ಹೆಸರಿಸುವ ಆಧಾರಗಳಲ್ಲಿ, ಗೊಂಮಟಸಾರದ ಹೊರತಾಗಿ ಪ್ರಾಯಶಃ ಈ ಶಾಸನವೇ ಪ್ರಾಚೀನತಮವಾದುದಾಗಿದೆ. ಈ 'ಗೊಂಮಟ' ಪದವನ್ನು ಶ್ರೇಷ್ಠ ವ್ಯಕ್ತಿತ್ವದ ಸೂಚಕವಾಗಿ ಈ ಶಾಸನದಲ್ಲಿ ಬಳಸಲಾಗುರುವುದನ್ನು ಹಿಂದೆ ಹೇಳಿದೆ. ಈ ಮೂರ್ತಿಯನ್ನು ಗೊಮ್ಮಟೇಶ್ವರ, ಗೊಮ್ಮಟೇಶ್ವರ ಜಿನಶ್ರೀ ಮೂರ್ತಿ, ಗೊಮ್ಮಟೇಶ, ಗೊಮ್ಮಟೇಶ ಜಿನ, ಗೊಮ್ಮಟ ಜಿನಾಧೀಶ, ಗೊಮ್ಮಟನಾಥ, ಗೊಮ್ಮಟದೇವ, ಗೊಮ್ಮಟಜಿನ– ಎಂದು ಈ ಶಾಸನದಲ್ಲಿ ಹಲವು ಬಾರಿ ಹೆಸರಿಸಿದೆ. ಆದರೆ (ಚಾಮುಂಡರಾಯ) ಗೊಂಮಟನು ಪ್ರತಿಷ್ಠಾಪನೆ ಮಾಡಿದುದರಿಂದ ಈ ಮೂರ್ತಿಗೆ ಗೊಂಮಟಜಿನ ಮುಂತಾದ ಹೆಸರುಗಳು ಪ್ರಚಾರಕ್ಕೆ ಬಂದಿವೆಯೆಂಬ ಸೂಚನೆ ಇಲ್ಲಿ ದೊರೆಯುವುದೊಲ್ಲ. ಇದರ ವಿರುದ್ಧವಾಗಿ 'ಗೊಂಮಟೇಶ್ವರ ಜಿನ ಶ್ರೀ ರೂಪಮಾತ್ಮೋಪಮಂ' ಎಂಬುವೇ ಮುಂತಾದ ಉಕ್ತಿಗಳಿಂದ 'ಭವ್ಯ, ದಿವ್ಯ, ಅನುಪಮ, ಸುಂದರ' ಎಂಬ ಲಕ್ಷಣಾರ್ಥದಿಂದ ಈ ಹೆಸರು ರೂಢಿಗತವಾಗಿದೆ ಎಂಬ ಸೂಚನೆ ದೊರೆಯುತ್ತದೆ ರನ್ನನು ಈ ಬಾಹುಬಲಿ ಮೂರ್ತಿಯನ್ನು 'ಕುಕ್ಕುಟ ಜಿನ' ಎಂದು ಹೆಸರಿಸಿರುವುದು ಈ ಹೆಸರಿನ ಹಿನ್ನೆಲೆಯಲ್ಲಿರುವ 'ಭರತ ಚಕ್ರೇಶ್ವರ ಪೂಜಿತ' ಎಂದು ಮುಂತಾದ ಭಾವ್ಯತೆ ದಿವ್ಯತೆಗಳ ಧ್ವನಿ ಅರ್ಥದ ವ್ಯಂಜಕತೆಗಾಗಿ ಎಂದು ತಿಳಿಯಬಹುದು. ಹೀಗಲ್ಲದೆ. ಈ ಮೂರ್ತಿಗೆ 'ಗೊಮ್ಮಟ ಎಂಬ ಹೆಸರಿರಲಿಲ್ಲ' ಎಂಬ ನಿಷೇಧಾರ್ಥವನ್ನು ಇದರಲ್ಲಿ ಕಾಣೂವುದು ಸಮುಚಿತವಲ್ಲ.

ಚಾಮುಂಡರಾಯನಿಗೆ, ಸಿದ್ಧಾಂತವನ್ನು, ಸಂಗ್ರಹವಾಗಿ ಉಪದೇಶಿಸಲೋಸಗ ನೇಮಿಚಂದ್ರಾಚಾರ್ಯರು 'ಗೊಮ್ಮಟಸಾರ'ವನ್ನು ರಚಿಸಿರುವರೆಂಬುದಂತೂ ಸತ್ಯದ ಸಂಗತಿ. ನೇಮಿಚಂದ್ರಾಚಾರ್ಯರು ತಮ್ಮ ಕೃತಿ ಗೊಮ್ಮಟಸಾರದಲ್ಲಿ ಕೆಲವೆಡೆ ತಮ್ಮ ಹೆಸರನ್ನು ಹಾಗೂ ಚಾಮುಂಡರಾಯನ ಬಿರುದಿನ ಹೆಸರನ್ನು ಗೌಣರೂಪದಿಂದ ಸೂಚಿಸಿದ್ದಾರೆ. ಈ ಸೂಚನೆ ಮತ್ತು ಅನುಶ್ರುತಿಯ ಸಮನ್ವಯಪೂರ್ವಕ ಈ ಗ್ರಂಥವು ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರಿಂದ ಚಾಮುಂಡರಾಯನಿಗಾಗಿ ರಚಿತವಾದುದಾಗಿದೆ ಎಂದು ತಿಳಿಯಬಹುದಾಗಿದೆ.

ಗೋ. ಸಾ. ಜೀ. ಕಾಂಡದ ಪ್ರಥಮ ಮಂಗಲ ಗಾಹೆಯಲ್ಲಿ 'ಜಿನೇಂದ್ರ ವರ ನೇಮಿಚಂದ್ರ' ಎಂಬ ಸಮಸ್ತಪದದ ಮೂಲಕ ನೇಮಿತೀರ್ಥಂಕರನನ್ನು ಹೆಸರಿಸಿ ಗ್ರಂಥ ಕರ್ತೃವು ನಮಸ್ಕಾರ

ಮಾಡಿದ್ದಾರೆ. ಸಾಧಾರಣವಾಗಿ ನೇಮಿತೀರ್ಥಂಕರನನ್ನು ಮೇಮಿಜಿನೇಂದ್ರ, ನೇಮಿನಾಥ, ನೇಮೀಶ್ವರ ಎಂಬ ಪರ್ಯಾಯ ನಾಮಗಳಿಂದ ಹೆಸರಿಸುವುದು ರೂಢಿಯಲ್ಲಿದೆ. ಆದರೆ ಇಲ್ಲಿ ಗ್ರಂಥಕರ್ತೃವು ತಮ್ಮ ಹೆಸರನ್ನು ಸಮನ್ವಯ ಮಾಡುವುದಕ್ಕಾಗಿ 'ನೇಮಿಚಂದ್ರ' ಎಂಬ ಪದ ಪ್ರಯೋಗ ಮಾಡಿದ್ದಾರೆ. ಈ ಹೆಸರಿನ ಮುಂದೆ ವಿಶೇಷಣ ರೂಪದಿಂದ 'ಅಕಲಂಕಂ' ಎಂಬ ಪದದ ಬಳಕೆಮಾಡಿದ್ದಾರೆ. ಚಂದ್ರನು ಕಲಂಕ ಸಹಿತನಾಗಿರುವನೆಂಬುದು ಲೋಕದಲ್ಲಿ ಪ್ರಚಲಿತವಿರುವ ಪ್ರವಾಧ. ಇದರ ವಿರುದ್ಧವಾಗಿ ನೇಮಿತೀರ್ಥಂಕರರ ನಿಷ್ಕಲಂಕತ್ವವನ್ನು ಈ ಪದ ಸೂಚಿಸುತ್ತದೆ ; ಇಷ್ಟು ಮಾತ್ರವಲ್ಲ ನೇಮಿಚಂದ್ರಾಚಾರ್ಯರು ತಮ್ಮ ಮುನಿಧರ್ಮಾಚರಣೆಯ ಅಕಲಂಕತ್ವವನ್ನೂ ಇಲ್ಲಿ ಪರ್ಯಾಯರೂಪದಿಂದ ಸೂಚಿಸಿದ್ದಾರೆ. ನಿರಂತರವಾಗಿ ಸಿದ್ಧಾಂತದ ಅಧ್ಯಯನದಲ್ಲಿ ಸ್ವಾಧ್ಯಾಯದಲ್ಲಿ ನಿರತರಾಗಿದ್ದ ಇವರ ಮುನಿಧರ್ಮದ ಆಚರಣೆ ನಿಷ್ಕಲಂಕವಗಿದೆಯೆಂದಲ್ಲಿ ಅದು ಅತಿಶಯೋಕ್ತಿಯಾಗುವುದಿಲ್ಲ. ಗಾಹೆಯ ಉತ್ತರಾರ್ಧದಲ್ಲಿ 'ಗುಣರತ್ನಭೂಷಣ' ದ ಉದಯ ಸಿದ್ದಿದಾಯಕ ಈ ಜೀವಸ್ವರೂಪದ ಪ್ರರೂಪಣೆ ಮಾಡುವುದಾಗಿ ಪ್ರತಿಜ್ಞೆ ಮಾಡಲಾಗಿದೆ. ಇಲ್ಲಿ ಚಾಮುಂಡರಾಯನ ಬಿರುದುಗಳಲ್ಲೊಂದಾದ 'ಗುಣ್ರತ್ನಭೂಷಣ' ಪ್ರತಿಜ್ಞೆ ಮಾಡಲಾಗಿದೆ. ಇಲ್ಲಿ ಚಾಮುಂಡರಾಯನ ಬಿರುದುಗಳಲ್ಲೊಂದಾದ 'ಗುಣರತ್ನಭೂಷಣ' ಎಂಬ ಬಿರುದನ್ನು ಸಮಾಯೋಜನೆ ಮಾಡಿ ಅವನ ಆತ್ಮೋನ್ನತಿ ಸಾಧಕವಾಗಿ ಜೀವಸ್ವರೂಪ ಪ್ರರೂಪಣೆ ಮಾಡಲಾಗುವುದು ಎಂಬ ಪರ್ಯಾಯಾರ್ಥ ಕಾಣಿಸಿದೆ. ಜೀ. ಕಾಂಡದ ಅಂತಿಮಗಾಹೆಯಲ್ಲಿ(೭೩೪) ಅಜಿತಸೇನ ಗುರುವಿನ ಶಿಷ್ಯನಾದ ರಾಯಗೊಮ್ಮಟನು ಜಯಶೀಲನಾಗಲೆಂಬ ಆಶೀರ್ವಚನವಿದೆ. ಇಲ್ಲಿ ಮೊದಲಬಾರಿಗೆ ಗೋ. ಸಾರದಲ್ಲಿ 'ಗೊಮ್ಮಟ' ಪದಪ್ರಯೋಗವಾಗಿದೆ. ಚಾಮುಂಡರಾಯನನ್ನು 'ರಾಯ' ಎಂಬಷ್ಟರಿಂದಲೇ ಹೆಸರಿಸುವ ರೂಢಿಯಿದ್ದಿತೆಂದು ಚಾಮುಂಡರಾಯ ಪುರಾಣದ ಹೇಳಿಕೆಯಿಂದ ವ್ಯಕ್ತವಾಗುವುದು. ಈ 'ರಾಯ' ಎಂಬ ಹೆಸರಿನೊಡನೆ 'ಗೊಮ್ಮಟ' ಪದವನ್ನು ಬಳಸಿ 'ಚಾಮುಂಡರಾಯನೇ ಗೊಮ್ಮಟ' ಎಂದು ಪರಿಚಯ ಮಾಡಿ ಕೊಟ್ಟಿರುವಂತಿದೆ. ಗೋ. ಸಾ. ಕ. ಕಾಂಡದ ಮೊದಲ ಗಾಹೆಯಲ್ಲಿರುವ 'ಗುಣರಯಣ ವಿಭೂಷಣ' ಮತ್ತು 'ಸಮ್ಮತ್ತರಯಣಣಿಲಯ' ಎಂಬ ಪದಗಳ ಮೂಲಕ ಚಾಮುಂಡರಾಯನ 'ಗುಣರತ್ನಭೂಷಣ' ಮತ್ತು 'ಸಮ್ಯಕ್ತ್ವರತ್ನಾಕರ' ಎಂಬ

ಎರಡು ಬಿರುದುಗಳ್ನ್ನು ಸೂಚಿಸಲಾಗಿದೆ. ಪುನಃ ೮೭ನೇ ಗಾಹೆಯಲ್ಲಿ 'ಅಸಹಾಯ ಪರಕ್ಕಮ'– 'ಅಸಹಾಯ ಪರಾಕ್ರಮ' ಎಂಬ ಬಿರುದಿನ ಸಮಾಯೋಜನೆಯಾಗಿದೆ. ೩೩೨ನೇ ಗಾಹೆಯಲ್ಲಿ 'ಕಹಿಯಮಿಣಂ ಬಲಮಾಹವ ಚಂದಚ್ಚಿಯ ಣೇಮಿಚಂದೇಣ' ಇದು 'ಬಲ– ಮಾಧವ ಚಂದ್ರಾರ್ಚಿತನಾದ ನೇಮಿಚಂದ್ರನಿಂದ ಹೇಳಲ್ಪಟ್ಟಿದೆ' ಎಂಬ ಉಕ್ತಿಯಿದೆ. ಇಲ್ಲಿ ಬಲ–ಮಾಹವ (ಚಂದ) ಎಂಬುದು 'ಬಲರಾಮ ಮತ್ತು ಕೃಷ್ಣರಿಂದ ಪೂಹಿತನಾದ ನೇಮಿತೀರ್ಥಂಕರನಿಂದ' ಎಂಬರ್ಥ ಕೊಡುವುದಲ್ಲದೆ, '(ಬಲದೇವ?) ಮತ್ತು ಮಾಧವಚಂದ್ರ ಎಂಬ ಶಿಷ್ಯರಿಂದ ಪೂಚಿತನಾದ ನೇಮಿಚಂದ್ರಾಚಾರ್ಯರಿಂದ' ಎಂಬರ್ಥವನ್ನೂ ಕೊಡುವುದು, ಪುನಃ ಗಾಹೆ ೩೫೬ರ ಉತ್ತರಾರ್ಧದಲ್ಲಿಯೂ ಇದೇ ಹೇಳಿಕೆ ಇದೆ. ಗಾಹೆ ೩೯೭ರಲ್ಲಿ, ಹಿಂದೆ ಹೇಳೀರುವಂತೆ, ನೇಮಿಚಂದ್ರಾಚಾರ್ಯರು ಷಟ್ ಖಂಡಾಗಮದಲ್ಲಿ ಪರಿಣತಿ ಹೊಂದಿದ ಸಂಗತಿಯ ವರ್ಣನೆಯಿಂದೆ. ಗಾಹೆ ೩೯೭ರಲ್ಲಿ ಚಾಮುಂಡರಾಯನ 'ಅಸಹಾಯ ಪರಾಕ್ರಮ' ಬಿರುದಿನ ಸಮಾಯೋಜನೆಯಾಗಿದೆ. ಗಾಹೆ ೪೦೮ರಲ್ಲಿ 'ಅಭಯನಂದಿ (ಗುರು) ನಿರ್ಮಲ ಶ್ರುತೋದಧಿಯಿಂದ ನೇಮಿಚಂದ್ರನು (ಗ್ರಂಥ ಕರ್ತೃವು) ಸುನಿರ್ಮಲನಾದನು' ಎಂದು ಹೇಳಿದೆ. ಇಲ್ಲಿ ಗ್ರಂಥಕರ್ತೃವು ತಮ್ಮ ಹೆಸರನ್ನು ಸ್ಪಷ್ಟರೀತಿಯಿಂದ ನಿರ್ದೇಶಿದ್ದಾರೆ. ಗಾಹೆ ೪೩೬ರಲ್ಲಿ ವೀರನಂದಿ ಮತ್ತು ಇಂದ್ರನಂದಿ ವತ್ಸ(ಶಿಷ್ಯ)ನಾದ ತಾನು ಅಭಯನಂದಿ ಗುರುವಿಗೆ ನಮಸ್ಕರಿಸುವುದಾಗಿ. ಹೇಳಿದ್ದಾರೆ. ಗಾಹೆ ೪೫೧ರಲ್ಲಿ 'ಸಚ್ಚಜುಹಿಟ್ಠಿರ– ಸತ್ಯ ಯುಧಿಷ್ಠಿರನಿಂದ ನಮಸ್ಕರಿಸಲ್ಪಟ್ಟ ಅಂಘ್ರಿಯುಗಲನಾದ ನೇಮಿನಾಥನನ್ನು ನಮಸ್ಕರಿಸಿ' ಎಂಬ ಉಕ್ತಿಯಿದೆ. ಇಲ್ಲಿ ಚಾಮುಂಡರಾಯನ 'ಸತ್ಯಯುಧಿಷ್ಠಿರ' ಎಂಬ ಬಿರುದು ಸಮಾಯೋಚಿತವಾಗಿರುವುದು ಸ್ಪಷ್ಟವಿದೆ. ಅಲ್ಲದೆ ಪ್ರಾಯಶಃ ಚಾಮುಂಡರಾಯನು ಪೂಜಿಸುತ್ತಿದ್ದ ನೇಮಿನಾಥ ರತ್ನಪ್ರತಿಮೆಯ ಸೂಚನೆಯೂ ಇದೆ. ಗಾಹೆ ೭೩೯ರಲ್ಲಿ ನೇಮಿಚಂದ್ರಚಾರ್ಯರ ಶಿಷ್ಯ ಮಾಧವಚಂದ್ರರ ಹೆಸರು ಸಮಾಯೋಜಿತವಾಗಿದೆ. ಗಾಹೆ ೭೮೪ ರಲ್ಲಿ 'ಸಾಗರ ಚಂದ್ರ' ಎಂಬ ಹೆಸರಿನ ಸೂಚನೆ ಇರುವಂತೆ ಕಂಡುಬರುತ್ತದೆ. ಅಥವಾ ಶ್ರುತವನ– ವಸಂತ–ಗುಣ–ಗಣಸಾಘರ ಸನ್ಮತಿ(ನೇಮಿ)ಚಂದ್ರ ಎಂಬುದರ ಸೂಚನೆಯಾಗಿರಬಹುದಾದ ಸಂಭವವಿದೆ. ಗಾಹೆ ೭೮೫ರಲ್ಲಿ ಅಭಯನಂದಿ, ಶ್ರುತಸಾಗರಪಾರಗನಾದ ಇಂದ್ರನಂದಿ ಮತ್ತು ವೀರನಂದಿ ಗುರುಗಳಿಗೆ ನಮಸ್ಕಾರ

ಹೇಳಿದೆ. ಗಾಹೆ ೮೧೧ರಲ್ಲಿ ಪುನಃ 'ಗೊಮ್ಮಟ' ಪದದ ಪ್ರಯೋಗವಾಗಿರುವುದನ್ನು ಕಾಣಬಹುದು 'ಗೊಮ್ಮಟ ಜಿಣಿಂದಚಂದಂ' ಎಂಬುದು ಪ್ರಾಯಶಃ ನೇಮಿತೀರ್ಥಂಕರನ ಸೂಚಕವಾಗಿದೆ. 'ಗೊಮ್ಮಟ–ಪಯತ್ಥ–ಸಂಜುತ್ತಂ' ಎಂಬ ಉಕ್ತಿಯಲ್ಲಿ 'ಗೊಮ್ಮಟ' ಪದವು ಶ್ರೇಷ್ಠ ಅಥವಾ ಸುಂದರ ಎಂಬರ್ಥದಲ್ಲಿ ಪ್ರಯುಕ್ತವಾಗಿದೆ. ಹೀಗೆಯೇ 'ಗೊಮ್ಮಟ ಸಂಗಹ ವಿಸಯ' ಎಂಬುದು 'ಸರ್ವೋತ್ಕೃಷ್ಟ ಸಿದ್ಧಾಂತ ಸಂಗ್ರಹ ವಿಷಯವಾದ' ಎಂಬರ್ಥದಲ್ಲಿ ಪ್ರಯುಕ್ತವಾಗಿದೆ. ಗಾಹೆ ೮೯೭ರಲ್ಲಿ ಪುನಃ ಗುಣರಯಣಭೂಷಣ' ಎಂದು ಚಾಮುಂಡರಾಯನ ಬಿರುದಿನ ಸಮಾಯೋಜನೆಯಾಗಿದೆ, ಮತ್ತು ಪುನಃ ಇಲ್ಲಿ ವೀರನಂದ್ರಿ. (ನೇಮಿ) ಚಂದ್ರ ಮತ್ತು ಇಂದ್ರನಂದಿ ಗುರುಗಳಿಗೆ ನಮಸ್ಕಾರ ಮಾಡಲಾಗಿದೆ. ಗಾಹೆ ೯೬೫ರಲ್ಲಿ 'ಗೊಮ್ಮಟ ಸಂಗಹ ಸುತ್ತಂ ಗೊಮ್ಮಟ ದೇವೇಣ ಗೊಮ್ಮಟಂ ರ ಇಯಂ'– ಗೊಮ್ಮಟ ಸಂಗ್ರಹ ಸೂತ್ರವು ಗೊಮ್ಮಟದೇವನಿಂದ (ಗೊಮ್ಮಟಂ ಜಹಾ) ಉತ್ತಮವಾಗಿ ರಚಿತವಾಗಿದೆ ಎಂದು ಹೇಳಿದೆ. ಇಲ್ಲಿ 'ಗೊಮ್ಮಟದೇವ ಎಂಬುದನ್ನು ಗೊಮ್ಮಟನ ( ಚಾಮುಂಡರಾಯನ ಗುರು) ದೇವ ಎಂಬುದಾಗಿ, ಅರ್ಥಮಾಡಿಕೊಳ್ಳಬೇಕಾಗಿದೆ. ಅಥವಾ ಹಿಂದೆ 'ಗೊಮ್ಮಟ' ಶಬ್ದವನ್ನು ನೇಮಿತೀರ್ಥಂಕರ ಸೂಚಕವಾಗಿ ಬಳಸಿರುವುದರಿಂದ ಗೊಮ್ಮಟ (ನೇಮಿತೀರ್ಥಂಕರ)ನು ಯಾರ ದೇವನಾಗಿರುವನೋ ಅವನು ಎಂಬರ್ಥದಿಂದ ಹಾಗೂ ನೇಮಿಚಂದ್ರಾಚಾರ್ಯರ ಸೂಚಕವಾಗಿಯೂ ಗ್ರಹಿಸಬೇಕಾಗಿದೆ. ಈ ಎಲ್ಲ ಅಂಶಗಳಿಂದ ಗೊಮ್ಮಟಸಾರವು ಚಾಮುಂಡರಾಯನಿಗಾಗಿ ನೇಮಿಚಂದ್ರ ಸಿದ್ಧಾಂತಚಕ್ರವರ್ತಿಯವರಿಂದ ರಚಿತವಾಗಿರುವುದೆಂದು ಸೂಚಿತವಾಗುವುದು. ಗೊಮ್ಮಟ ಎಂಬ ಹೆಸರು ಚಾಮುಂಡರಾಯನಿಗೆ ಚಿಕ್ಕಂದಿನಿಂದಲೂ ಅಡ್ಡ ಹೆಸರಾಗಿದ್ದಿತೆಂದೇನೂ ತಿಳಿಯಬೇಕಾದ ಅಗತ್ಯವಿಲ; ಜೀವಕಾಂಡದ ಕೊನೆಯ ಗಾಹೆಯಲ್ಲಿ (ಚಾಮುಂಡ)ರಾಯನಿಗೆ 'ಗೊಮ್ಮಟ' ಎಂಬ ಹೆಸರಿತ್ತಿರುವುದನ್ನು ಪ್ರಸ್ತುತ ಪ್ರಸಂಗದಲ್ಲಿ ಗಮನಕ್ಕೆ ತಂದುಕೊಳ್ಳಬೇಕಾಗಿದೆ. ಇನ್ನು, 'ಗೊಮ್ಮಟ ಸಿಹರುವರಿ ಗೊಮ್ಮಟ ಜಿಣೋಯ ಗೊಮ್ಮಟರಾಯವಿಣಿಮ್ಮಿಯ ದಕ್ಷಿಣಕುಕ್ಕುಟ ಜಿಣೋ ಜುಯವು' ಎಂಬುದನ್ನು 'ಗೊಮ್ಮಟ(ಚಾಮುಂಡ)ರಾಯನಿಂದ ನಿರ್ಮಿತನಾದ ದಕ್ಷಿಣಕುಕ್ಕುಟಜಿನ,

ಗೊಮ್ಮಟಶಿಖರ(ಶ್ರ.ಬೆ.ದೊಡ್ಡಬೆಟ್ಟದ ಶಿಖರ) ದಲ್ಲಿರುವ ಗೊಮ್ಮಟಜಿನನು ಜಯಶೀಲನಾಗಲಿ' ಎಂದರ್ಥೈಸಿಕೊಳ್ಳಬೇಕಾಗಿದೆ.

ಗೋ. ಸಾ. ಕ. ಕಾಂಡದ ೯೭೨ನೇ ಗಾಹೆಯಲ್ಲಿ ಚಾಮುಂಡರಾಯಿನಿಂದ ರಚಿತವಾದ ಗೊಮ್ಮಟಸಾರದ ದೇಸಿಯ ಉಲ್ಲೇಖವಿದೆ. ಈ ದೇಸಿಯನ್ನು ನೇಮಿಚಂದ್ರಾ ಚಾರ್ಯರು 'ವೀರಮತ್ತಂಡೀ' ಎಂದು ಹೆಸರಿಸಿದ್ದಾರೆ. ಈ ಗಾಹೆ ದೋಷಪೂರ್ಣವಾಗಿರುವುದರಿಂದ ಅರ್ಥವು ಸ್ಪಷ್ಟವಿಲ್ಲ ಎಂದು ಹೇಳಲಾಗಿದೆ. ಇದು ನಿಜ; ಆದರೆ ಇದು ಚಾಮುಂಡರಾಯನಿಂದ ರಚಿತವಾಧ ಟೀಕೆಯಾಗಿದ್ದಿರಬೇಕೆಂಬುದು ಒಂದು ಪಕ್ಷದ ಅಭಿಪ್ರಾಯವಾಗಿದೆ. ನೇಮಿಚಂದ್ರಾಚಾರ್ಯರು ರಚಿಸಿದ ಗೊಮ್ಮಟಸಾರವನ್ನು ಕನ್ನಡ ಲಿಪಿಯಲ್ಲಿ ಬರೆದಿದ್ದು ಅದನ್ನೇ 'ದೇಸೀ' ಎಂದು ಹೆಸರಿಸಿರಬೇಕೆಂಬ ಅಭಿಪ್ರಾಯವೂ ಇದೆ. ಆದರೆ ಈ ಎರಡನೇ ಅಭಿಪ್ರಾಯವು ಸಮಂಜಸವೆನಿಸಿ ಕಂಡುಬರುವುದಿಲ್ಲ. ಕೇವಲ ಕನ್ನಡ ಲಿಪಿಯಲ್ಲಿ ಬರೆದ ಮಾತ್ರಕ್ಕೆ ಅದನ್ನು 'ವೀರಮತ್ತಂಡೀ' ಎಂದು ಹೆಸರಿಸಿದೆ ಎಂಬುದು ಯುಕ್ತಿಯುಕ್ತವಲ್ಲ. ನೇಮಿಚಂದ್ರಾಚಾರ್ಯರೂ ಕನ್ನಡಿಗರೇ ಆಗಿದ್ದರಿಂದ ಅವರೇ ಕನ್ನಡ ಲಿಪಿಯಲ್ಲಿ ಬರೆದಿದ್ದಲ್ಲಿ ಅದು ವಿಸ್ಮಯದ ಸಂಗತಿಯಲ್ಲ. ಈ ರೀತಿಯಾಗಿ ಸಿದ್ಧಾಂತಗ್ರಂಥಗಳನ್ನು ಕನ್ನಡ ಲಿಪಿಯಲ್ಲಿ ಬರೆದಿರುವುದಕ್ಕೆ ಈಗ ಉಪಲಬ್ಧವಿರುವ ಧವಲ, ಜಯಧವಲ ಮತ್ತು ಮಹಾಬಂಧ ಸಿದ್ಧಾಂತ ಗ್ರಂಥಗಳೇ ಉದಾಹರಣೆಯಾಗಿವೆ. ಪ್ರಾಯಶಃ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರು ಗೊಮ್ಮಟಸರದ ಅರ್ಥವನ್ನು ಕನ್ನಡದಲ್ಲಿ ವಿವರಿಸಿದ ಸಮಯದಲ್ಲಿ ಚಾಮುಂಡರಾಯನು ತನ್ನ ಉಪಟೋಗಕ್ಕಾಗಿ ಪ್ರತಿಯೊಂದು ಗಾಹೆಯ ಅರ್ಥವನ್ನು (ದೇಸಿ) ಕನ್ನಡದಲ್ಲಿ ಬರೆದಿಟ್ಟುಕೊಂಡಿದ್ದಾನೆ. ಇದನ್ನೇ 'ವೀರಮತ್ತಂಡೀ' ಎಂದು ನೇಮಿಚಂದ್ರಾರ್ಯರು ಹೆಸರಿಸಿರಬಹುದಾದ ಸಂಭವವಿದೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಇದರ ನಕಲುಗಳನ್ನು ಮಾಡಿರಲಿಲ್ಲವಾಗಿ ಕಾಲಕಳೆದಂತೆ ಇದು ನಷ್ಟವಾಗಿದೆ ಎಂದು ತಿಳಿಯಬಹುದಾಗಿದೆ.

ನೇಮಿಚಂದ್ರಾಚಾರ್ಯರನ್ನು ಕುರಿತು ಕೆಲವೆಡೆ ಕಂಡು ಬರುವ ಅಪವಾದಾತ್ಮಕವಾದ ಅಭಿಪ್ರಾಯವನ್ನು ಪರಿಷ್ಕರಿಸುವುದು ವಿಷಯಾಂತರವಾಗಲಾರದು. 'ಚಾವುಂಡರಾಯನು, ಬಾಹುಬಲಿಮೂರ್ತಿ ಪ್ರತಿಷ್ಠಾಪನೆಯಾದ ಬಳಿಕ ನೇಮಿಚಂದ್ರಾರ್ಯರನ್ನು ಈ ಪವಿತ್ರ ಕ್ಷೇತ್ರದ

(ಚೀಫ್ ಪ್ರೀಸ್ಟ್., ಪಾಂಟಿಫ್ ಆಂಡ್ ಕೇರ್ ಟೇಕರ್) ಪ್ರಧಾನ ಪುರೋಹಿತ, ಧರ್ಮಗುರು (?) ಮತ್ತು ಪಾಲಕರನ್ನಾಗಿ ನಿಯೋಜಿಸಿ, ಅವರಿಗೆ ವಿಪುಲವಾದ ಭೂಮಿ ಮತ್ತು ಹಣದ ದಾನವಿತ್ತನೆಂದು ಕಂಡು ಬರುತ್ತದೆ' ಎಂದು ಮನ್ಯ ಡಾ. ಜ್ಯೋತಿಪ್ರಸಾದ್ ಜೈನ್ ಅವರು ಹೇಳೀದ್ದಾರೆ. [೧೭] ಆದರೆ ಇದು ಈ ಮನ್ಯರ ಊಹೆ ಮಾತ್ರವಾಗಿದೆ ಎಂಬುದಲ್ಲದೆ ವಾಸ್ತಿವಿಕದೃಷ್ಟಿಯಿಂದ ಸತ್ಯನಿಷ್ಠವಲ್ಲದ ಕಲ್ಪನೆಯಾಗಿದೆ. ಮೊದಲನೆಯದಾಗಿ ಮಾನ್ಯರ ಈ ಅಭಿಪ್ರಾಯವನ್ನು ಸಮರ್ಥಿಸುವ ವಿಶ್ವಾಸಾರ್ಹವಾದ ಐತಿಹಾಸಿಕ ದಾಖಲಾತಿ ಕಂಡುಬರುವುದಿಲ್ಲ. ಶ್ರವಣಬೆಳಗುಳದ ಐದುನೂರಕ್ಕೂ ಹೆಚ್ಚಿನ ಸಮಖ್ಯೆಯ ಶಾಸನಗಳಲ್ಲಿ ಯಾವ ಒಂದು ಶಾಸನದಲ್ಲಿ ಯಾಗಲಿ ಈ ಸಂಗತಿಯ ದಾಖಲಾತಿ ಇಲ್ಲ. (ಕ್ರಿ.ಶ.೧೬ನೇ ಶತಮಾನ) ದೊಡ್ಡಯ್ಯನ 'ಭುಜಬಲಿಚರಿತ' ದಲ್ಲಿ [೧೮] ಈ ರೀತಿಯದಾದ ಹೇಳಿಕೆ ಇರುವುದು ನಿಜ, ಆದರೆ ಬಾಹುಬಲಿಮೂರ್ತಿಯ ಪ್ರತಿಷ್ಠಾಪನೆಯಾದ ಸುಮಾರು ಹತ್ತು ಶತಮಾನಗಳ ಅನಂತರದ ಈ ಕೃತಿಯ ಹೇಳಿಕೆಗೆ ಪೂರ್ವಕಾಲಾನುಗತವಾದ ಆಧಾರವೇನೆಂಬುದು ತಿಳಿಯದು. ಶ್ರ. ಬೆಳಗುಳದ ಶ್ರೀಮಠದ ಭಟ್ಟಾರಕಪರಂಪರೆಯನ್ನು ನೇಮಿಚಂದ್ರಾಚಾರ್ಯರ ಮೂಲದ್ದನ್ನಾಗಿ ಗುರುತಿಸಲಾಗಿದೆ ಎಂಬ ಹೇಳಿಕೆ ಇದೆ. ಈ ಹೇಳಿಕೆಗೆ, ಪ್ರಾಯಶಃ ಈ ಮಠಕ್ಕೆ ಸಂಬಂಧಿಸಿದ ದೇವಸ್ಥಾನಗಳಲ್ಲಿ ಹೇಳಲಾಗುವ ಪ್ರಶಸ್ತಿಯಲ್ಲಿರುವ 'ಚಾವುಂಡರಾಯಾರ್ಚಿತಪಾದಪದ್ಮಾದ್ಯನೇಕ ಬಿರುದಾವಳೀ ವಿರಾಜಮಾನರುಂ' ಎಂಬ ಉಕ್ತಿ ಆಧಾರವಾಗಿರಬಹುದಾಗಿದೆ. ಆದರೆ ಈ ಪ್ರಶಸ್ತಿ ಎರಡುನೂರು ವರ್ಷಗಳಿಗಿಂತ ಈಚಿನದಾಗಿದೆ ಎಂದು, ಉಪಲಬ್ಧವಿರುವ ಪೂಜಾಪಾಠಗಳ ಪರಿವೀಕ್ಷಣೆಯಿಂದ ಅಭಿವ್ಯಕ್ತವಾಗುವುದು. ಇದೂ ಅಲ್ಲದೆ ಈ ಭಾಟ್ಟಾರಕ ಪರಂಪರೆಯು ಹೆಚ್ಚಿಂದ ಹೆಚ್ಚು ಕ್ರಿ.ಶ. ಹದಿಮೂರನೇ ಶತಮಾನದಲ್ಲಿ ಆರಂಭವಾಗಿದೆಯೆಂದು ಹೇಳಬಹುದಾಗಿದೆ. ಭಾಂಡಾರ ಬಸದಿಯನ್ನು ಕಟ್ಟಿಸಿದ ಹುಳ್ಳನು ನಯಸೇನರನ್ನು ಮಹಾಮಂಡಲಾಚಾರ್ಯರನ್ನಾಗಿರುವಂತೆ ವ್ಯವಸ್ಥೆಮಾಡಿದನೆಂದು ಹೇಳಿದೆ.[೧೯] ಈ ಸಮಯದ ಅನಂತರದಲ್ಲಿಯೇ ಶ್ರೀಮಠದ ಚಾರುಕೀರ್ತಿ ಭಾಟ್ಟಾರಕರ ಹೆಸರುಗಳನ್ನು ಶಾಸನಗಳಲ್ಲಿ ಕಾಣಬಹುದು. ಆದ್ದರಿಂದ ಈ ಭಟ್ಟಾರಕ ಪರಂಪ್ರೆಯನ್ನು ನೇಮಿ ಚಂದ್ರಾಚಾರ್ಯರ ಮೂಲದ್ದನ್ನಾಗಿ ಕಾಣಲು ವಿಶ್ವಾಸಾರ್ಹ ಐತಿಹಾಸಿಕ ಆಧಾರವಿಲ್ಲವಾಗಿದೆ. ಈ ಬಗ್ಗೆ ಮತ್ತೊಂದು ವಿಚಾರಾರ್ಹವಾದ

ಸಂಗತಿ ಇದೆ: ದಿಗಂಬರ ಪಂಥದ ಮುನಿಗಳು ದಾನದಾತ್ರಿಗಳನ್ನು ಅಂಗೀಕರಿಸಿದ ದಾಖಲಾತಿಗಳು ಇಲ್ಲವೇ ಇಲ್ಲವೆಂದು ಹೇಳಲಾಗದಿದ್ದರೂ ಅತ್ಯಂತ ವಿರಳವೆಂದು ನಿಶ್ಯಂಕಿತವಾಗಿ ಹೇಳಬಹುದು. ಹತ್ತು ಹನ್ನೊಂದನೇ ಶತಮಾನ ಪರ್ಯಂತದವರೆಗೆ ಇಂತಹ ಯಾವ ದಾಖಲಾತಿಯಾಗಲಿ ಕಂಡುಬರುವುದಿಲ್ಲ. ವೀರಸೇನರು, ಜಿನಸೇನರೇ ಮೊದಲಾದ ಆಚಾರ್ಯರು ರಾಜ ಸನ್ಮಾನ ಹೊಂದಿದವರೆಂಬುದು ತಿಳಿದ ಸಂಗತಿ; ಆದರೆ ಇವರು ದಾನದತ್ತಿಗಳನ್ನು ಸ್ವೀಕರಿಸಿದ ದಾಖಲಾತಿಗಳು ಮಾತ್ರ ಇಲ್ಲವೆಂಬುದು ಮಾತ್ರವಲ್ಲ, ಇದು ಮುನಿ ಧರ್ಮಾಚರಣೆಗೆ ವಿರೋಧವಾದುದೂ ಅಹುದು. ನೇಮಿಚಂದ್ರಾಚಾರ್ಯರು ದಿಗಂಬರ ಪಂಥದ ನಂದಿಸಂಘಾದ ಚಂದ್ರಗಣದ ಮುನಿಯಾಗಿದ್ದಾರೆ. ಇವರು ಸುದ್ಧಾಂತದ ಅಧ್ಯಯನದಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡು ಸತತವಾಗಿ ಸ್ವಾಧ್ಯಾಯ ನಿರತರಾಗಿ ಮಿನಿಧರ್ಮವನ್ನು ನಿಷ್ಕಲಂಕರೀತಿಯಿಂದ ಪಾಲನೆ ಮಾಡಿಕೊಂಡು ಬಂದರೆಂದು ಹಿಂದೆ ಸ್ಪಷ್ಟಪಡಿಸಿದೆ. ಇಂತಹ ಇವರು ಚಾವುಂಡರಾಯನಿಂದ ದಾನ ದತ್ತಿಗಳನ್ನು ಸ್ವೀಕರಿಸಿ ಕ್ಷೇತ್ರದ ಪ್ರಧಾನ ಪುರೋಹಿತರಾದರೆಂದು ಹೇಳಿದಲ್ಲಿ ಅವರು ತಮ್ಮ ಮುನಿಧರ್ಮದಿಂದ ಭ್ರಷ್ಟರಾದರೆಂದು ಹೇಳಿದಂತಾಗುವುದು. ಇದು ನಿಜವಗಿಯೂ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರ ಬಗ್ಗೆ ತೀವ್ರತರವಾದ ಅಪಚಾರದ ಕಲಂಕದ ಮಾತಾಗುವುದು.

ಸಿದ್ಧಾಂತ ಚಕ್ರವರ್ತಿ ನೇಮಿಚಂದ್ರಾಚಾರ್ಯರ ಕೃತಿಗಳು– (೧) ಗೊಮ್ಮಟಸಾರ ಇವರ ಕೃತಿ ಎಂಬುದು ಈಗಾಗಲೇ ತಿಳಿದ ಸಂಗತಿಯಾಗಿದೆ. ಈ ಕೃತಿಯ ಕಾರಣದಿಂದಾಗಿಯೇ ಇವರು ವಿಶೇಷ ಖ್ಯಾತಿಭಾಜನರಾಗಿರುವರೆಂದು ಹೇಳಿದಲ್ಲಿ ತಪ್ಪಾಗುವುದಿಲ್ಲ. ಜೀವಕಾಂಡ ಮತ್ತು ಕರ್ಮಕಾಂಡ ಎಂಬುವು ಈ ಕೃತಿಯ ಎರಡು ಪ್ರಧಾನ ವಿಭಾಗಗಳು. 'ಗೊಮ್ಮಟಸಾರ' ಎಂಬುದರ ಅರ್ಥವತ್ತತೆಯನ್ನು ಹಿಂದೆ ವಿವರಿಸಿದೆ. ಇದರ ಭಾಷೆ ಪ್ರಾಕೃತ.

ಜೀವಕಾಂಡದಲ್ಲಿ ಜೀವ ಲಕ್ಷಣದ ಪ್ರಾಧಾನ್ಯತೆಯಿಂದ ನಾನಾ ಅವಸ್ಥಾಂತರಗಳಲ್ಲಿ ಅದರ ಸ್ಥಿತಿಯನ್ನು ನಿರೂಪಿಸಲಾಗಿದೆ. ಕರ್ಮಕಾಂಡದಲ್ಲಿ ಕರ್ಮಸ್ವರೂಪದ ಪ್ರಾಧಾನ್ಯತೆಯೊಡನೆ ಅದರ ಸಂಸರ್ಗದಿಂದ ಜೀವವು ಹೇಗೆ ಸಾಂಸಾರಿಕ ಸ್ಥಿತಿಯಲ್ಲಿ ಭ್ರಮಣೆ ಮಾಡುತ್ತಾ ಸುಖದುಃಖಗಳನ್ನು ಹೊಂದುತ್ತದೆ ಮತ್ತು ಇದರಿಂದ ಬಿಡುಗಡೆ ಹೊಂದಿದ ಜೀವವು ತನ್ನ ಪರಿಶುದ್ಧ ಸ್ವರೂಪ ಹೊಂದಿ

ಅನಂತ ಸುಖಭಾಗಿಯಾಗುವುದೆಂಬುದರ ನಿರೂಪಣೆಯಿದೆ. ಹಿಂದೆ ಹೇಳಿರುವಂತೆ ಈ ಎರಡೂ ಕಾಂಡಗಳಲ್ಲಿ ಪ್ರಧಾನವಾಗಿ ಧವಲಾಟೀಕಾಯುತವಾದ ಷಟ್ ಖಂಡಾಗಮವನ್ನು ಸಂಗ್ರಹಿಸಲಾಗಿದೆ. ಇದಲ್ಲದೆ ಇದಲ್ಲದೆ ಇದರ ರಚನೆಯಲ್ಲಿ 'ಪಂಚ ಸಂಗ್ರಹ' ಗ್ರಂಥವನ್ನೂ ವಿಶೇಷರೀತಿಯಿಂದ ಬಳಸಿಕೊಳ್ಳಲಾಗಿದೆ. ಜೀವಕಾಂಡದಲ್ಲಿ ೨೨ ಅಧಿಕಾರಗಳಿದ್ದು ೭೩೩-(೭೩೪) ಗಾಹೆಗಳಿವೆ. ಕರ್ಮಕಾಂಡದಲ್ಲಿ ೯ ಅಧಿಕಾರಗಳಿದ್ದು ೯೭೩ ಗಾಹೆಗಳಿವೆ. ಈ ಕೃತಿಯು, ರಚನೆಗೊಂಡ ಬಳಿಕ, ತನ್ನದೇ ಆದ ಅತ್ಯಂತ ಮಹತ್ವದ ಸ್ಥಾನ ಗಳಿಸಿಕೊಂಡಿತು ವೀರಸೇನಸ್ವಾಮಿಯವರಿಂದ 'ಧವಲಾ' ರಚನೆಯಾದ ಬಳಿಕ ಅದಕ್ಕಿಂತ ಹಿಂದಿನ ಕಾಲದ ಟೀಕೆಗಳೆಲ್ಲವೂ ಕಣ್ಮರೆಯಾಗಿ ಹೋದುವೆಂಬುದು ತಿಳಿದ ಸಂಗತಿ; ಹೀಗೆಯೇ ಗೊಮ್ಮಟಸಾರದ ರಚನೆಯಾದ ಬಳಿಕ, ಕಾಲಾನುಕ್ರಮದಲ್ಲಿ ಧವಲಾಸಹಿತವಾದ ಷಟ್ ಖಂಡಾಗಮದ ಅಧ್ಯಯನವೂ ಕುಂದುತ್ತಾ ನಡೆದು ಕೊನೆಗೆ ಇದರ ಗ್ರಂಥಗಳು ಶ್ರುತಪೂಜೆಯ ವಸ್ತು ಮಾತ್ರವಾಗಿ ಉಳಿದುವು. ದಿಗಂಬರ ಪಂಥದ ಜೈನರಲ್ಲಿ ಗೊಮ್ಮಟಸಾರದ ಅಧ್ಯಯನವೇ ಸಿದ್ಧಾಂತದ ಉಚ್ಚತಮ ಅಧ್ಯಯನವೆನ್ನಿಸಿ ಕೊಂಡಿತು.

ಗೊಮ್ಮಟಸಾರದ ಟೀಕೆಗಳು[೨೦]– ಚಾಮುಂಡರಾಯನಿಂದ 'ವೀರಮತ್ತಂಡೀ' ಎಂಬ ಹೆಸರಿನ ದೇಸೀ(ಕನ್ನಡ ಟೀಕೆ) ಯು ರಚಿತವಾಗಿರಬೇಕೆಂಬ ಅಭಿಪ್ರಾಯವಿದ್ದು ಅದು ವಾದ ವಿವಾದಗಳಿಗೆಡೆಯಾಗಿದೆ. ಈ ಬಗ್ಗೆ ಹಿಂದೆ ವಿವರಣೆ ಕೊಡಲಾಗಿದೆ. ಈಗ ಉಪಲಬ್ಧವಿರುವ ಟೀಕೆಗಳ್ಲಿ ಪ್ರಧಾನವಾದುವು ನಾಲ್ಕು. ಇವುಗಳಲ್ಲಿ ಅಭಯ ಚಂದ್ರಾಚಾರ್ಯರ 'ಮಂದಪ್ರಬೋಧಿಕಾ' ಎಂಬ ಸಂಸ್ಕೃತ ಟೀಕೆ, ಜೀವಕಾಂಡದ ೩೮೩ನೇ ಗಾಹೆಯ ಪರ್ಯಂತ ಮಾತ್ರ ದೊರೆಯುತ್ತದೆ. ಈ ಟೀಕಾಕಾರರು ಕ್ರಿ.ಶ. ೧೩೫೯ಕ್ಕಿಂತ ಹಿಂದಿನ ಕಾಲದವರೆಂಬುದು ಜುಗಲ್ ಕಿಶೋರ್ ಮುಖ್ತಾರ್ ಅವರ ಅಭಿಮತ. (ಕ್ರಿ.ಶ. ೧೩೧೩ರ) ಶ್ರ. ಬೆಳಗುಳದ ಶಾಸನದಲ್ಲಿ (೭೨/೬೫/೪೧) ಮಾಘ ನಂದಿಯವರ ಶಿಷ್ಯ ಅಭಯಶಶಿ (= ಅಭಯಚಂದ್ರ)ಯವರನ್ನು ಹೆಸರಿಸಿದೆ. ಇವರು 'ಸಿದ್ಧಾಂತಾಂಬೋಧಿ ಶೀತದ್ಯುತಿ' ಯಾಗಿದ್ದರೆಂದು ವರ್ಣನೆಮಾಡಿದೆ. ಆದ್ದರಿಂದ ಪ್ರಾಯಿಕವಾಗಿ ಈ ಮೇಲೆ ಹೇಳಿದ ಮಂದ ಪ್ರಬೋಧಿಕಾ ಟೀಕೆಯ ಕರ್ತೃ ಇವರೇ ಆಗಿರಬಹುದೆಂದು ತಿಳಿಯಬಹುದಿ. ಈ ಶಾಸನ ಮತ್ತು ಬೇಲೂರಿನ(೧೩೧-೧೩೩) ಶಾಸನಗಳ ಆಧಾರದಿಂದ ಇವರ ಕಾಲವನ್ನು ಕ್ರಿ.ಶ.

೧೩ನೇ ಶತಮಾನದ ೩ನೇಚರಣವೆಂದು ಗಣನೆಮಾಡಬಹುದಾಗಿದೆ. ಎರಡನೆಯ ಟೀಕೆ. ಅಭಾಯಸೂರಿಯವರ ಶಿಷ್ಯ ಕೇಶವವರ್ಣಿಯವರಿಂದ ರಚಿತವಾಗಿರುವ ಸಂಸ್ಕೃತ ಕನ್ನಡಮಿಶ್ರವಾದ 'ಜೀವತತ್ತ್ವ ಪ್ರದೀಪಿಕಾ' ಎಂಬ ಹೆಸರಿನ ಟೀಕೆ. ಇದು ಎರಡೂ ಕಾಂಡಗಳಮೇಲೆ ರಚಿಸಿಲಾಗಿರುವ ಪೂರ್ಣರೂಪದ ವಿಸ್ತೃತ ಟೀಕೆ. ಇದರಲ್ಲಿ 'ಮಂದಪ್ರಬೋಧಿನೀ' ಟೀಕೆಯ ಅನುಸರಣೆ ಕಂಡುಬರುತ್ತದೆ. ಧರ್ಮಭೂಷಣರ ಆದೇಶದನುಸಾರ ಕೇಶವ ವರ್ಣಿಯವರು ಶಕ ಸಂ.೧೨೮೧ (ಕ್ರಿ.ಶ. ೧೩೫೯)ರಲ್ಲಿ ಇದರ ರಚನೆ ಮಾಡಿದ್ದಾರೆ. ಶ್ರವಣಬೆಳಗುಳದ (೩೮೦/೨೮೪ನೇ). ಕ್ರಿ.ಶ. ೧೩೭೨ನೇ ಇಸವಿ ಶಾಸನದಲ್ಲಿ ಭಟ್ಟಾರಕ ಧರ್ಮಭೂಷಣರನ್ನು ಹೆಸರಿಸಿದೆ. ಕೇಶವವರ್ಣಿಯವರಿಗೆ ಈ ಟೀಕೆ ಬರೆಯಲು ಪ್ರೇರಣೆಯಿತ್ತವರು ಪ್ರಾಯಶಃ ಇವರೇ ಆಗಿದ್ದಾರೆ. ಶ್ರ. ಬೆಳಗುಳದ ಶಾಸನ(೩೬೦/೨೫೪/೧೦೫)ದಲ್ಲಿ, ಒಬ್ಬ ಅಭಯಸೂರಿಯವರನ್ನು ಹೆಸರಿಸಿದೆ. ಬಲ್ಲಾಳರಾಯನನ್ನು ಸಾವಿಗೆ ತುತ್ತಾಗಿಸಿದ್ದ ರೋಗದಿಂದ ಬಿಡುಗಡೆ ಮಾಡಿದ ಚಾರುಕೀರ್ತಿಯವರು ಇವರ ಗುರುವೆಂದು ಹೇಳಿದೆ. ಇವರು ಸಕಲವಿದ್ಯಾನಿಪುಣರಾಗಿದ್ದರೆಂದು ವರ್ಣನೆಯಿಂದ ತಿಳಿದುಬರುತ್ತದೆ. ಧರ್ಮಾಭಿವೃದ್ಧಿಗಾಗಿ ಇವರು– ಶ್ರೀಮಾನಸ್ಥಾತ್ ಬೆಳಗುಳ ನಗರೇ– ಬೆಳಗುಳ ನಗರದಲ್ಲಿ ಇದ್ದರೆಂದು ಹೇಳಿದೆ. ಈ ಶಾಸನವು ಶಕ. ಸಂ. ೧೩೨೦ (ಕ್ರಿ.ಶ. ೧೨೯೮)ರದ್ದಾಗಿದೆ. ಕೇಶವವರ್ಣಿಯವರು ಈ ಶಾಸನದಲ್ಲಿ ಹೆಸರಿಸಲಾಗಿರುವ ಅಭಾಯಸೂರಿಯವರ ಶಿಷ್ಯರಾಗಿದ್ದಿರಬಹುದಾದ ಸಂಭಾವ್ಯತೆ ಇದೆ. ಮೂರನೆಯ ಟೀಕೆ ನೇಮಿಚಂದ್ರಾಚಾರ್ಯರ ಸಂಸ್ಕೃತ 'ಜೀವತತ್ತ್ವ ಪ್ರದೀಪಿಕಾ' ಎಂಬ ಹೆಸರಿನ ಟೀಕೆ. ಇದು ಹಿಂದಿನ ಎರಡೂ ಟೀಕೆಗಳ ಅನುಸರಣೆಯೊಡನೆ ಎರಡೂಕಾಂಡಗಳ ಮೇಲೆ ವಿಸ್ತೃತರೀತಿಯಿಂದ ರಚಿತವಾಗಿರುವ ಟೀಕೆಯಾಗಿದೆ. ಇದನ್ನು ಸಾಳ್ವಮಲ್ಲಿರಾಯ– ಮಲ್ಲಿಭೂಷಣನ ಸಮಯ ಕ್ರಿ.ಶ. ೧೬ನೇ ಶತಮಾನದ ಪ್ರಥಮ ಚರಣದ ಸುಮಾರಿನಲ್ಲಿ ರಚಿಸಲಾಗಿದೆ. ಈ ಟೀಕೆಯ ರಚನಕಾರರಾದ ನೇಮಿಚಂದ್ರರು ಮೂಲ ಸಂಘ, ಶಾರದಾಗಚ್ಛ, ಬಲಾತ್ಕಾರಗಣ, ಕುಂದಕುಂದಾನ್ವಯ, ನಂದಿ ಆಮ್ನಾಯದಾಚಾರ್ಯರು, ಜ್ಞಾನಭೂಷಣಭಟ್ಟಾರಕರ ಶಿಷ್ಯ. ಇವರು ಕರ್ನಟಕದ ಜೈನ ರಾಜ ಮಲ್ಲಿಭೂಪಾಲನ ಪ್ರಯತ್ನದ ಫಲವಾಗಿ 'ತ್ರೈವಿದ್ಯವಿದ್ಯಾಪರಮೇಶ್ವರ' ಪದವಿ ಭೂಷಿತ ಮುನಿಚಂದ್ರರಲ್ಲಿ ಸಿದ್ಧಾಂತದ ಅಧ್ಯಯನ

ಮಾಢಿದರು, ಲಾಲಾವರ್ಣಿಯ ಒತ್ತಾಯದ ಕಾರಣದಿಂದ ಗೌರ್ಜರ ದೇಶದಿಂದ ಚಿತ್ರಕೂಟಕ್ಕೆ ಬಂದು, ಅಲ್ಲಿ ಜಿನದಾಸ ಶಾಹನಿಂದ ನಿರ್ಮಾಪಿತವಾಗಿದ್ದ ಪಾರ್ಶ್ವನಾಥ ಮಂದಿರದಲ್ಲಿ ಉಳಿದು ಕೊಂಡರು, ಧರ್ಮಚಂದ್, ಅಭಾಯಚಂದ್ರ ಮತ್ತಿತರ ಸಜ್ಜನರ ಹಿತಕ್ಕಾಗಿ, ಖಂಡೇಲವಾಲ ವಂಶದ ಸಾಹ್ ಸಾಂಗ್ ಮತ್ತು ಸಾಹ್ ಸಹೇಸರ ಪ್ರಾರ್ಥನೆಯಂತೆ, (ಕೇಶವ ವರ್ಣೀಯವರ) ಕರ್ಣಾಟಕವೃತ್ತಿಯ ಅನುಸರಣೆಯೊಡನೆ, ತ್ರೈವಿದ್ಯವಿದ್ಯಾ (ಸಂಪನ್ನ) ವಿಶಾಲಕೀರ್ತಿಯವರ ಸಹಾಯದಿಂದ ಈ ಟೀಕೆಯನ್ನು ರಚಿಸಿದರು ಇದರ ಪ್ರಥಮ ಪ್ರಾತಿಯನ್ನು ನಿರ್ಗ್ರಂಥಾಚಾರ್ಯ ತ್ರೈವಿದ್ಯಚಕ್ರವರ್ತಿ ಅಭಯಚಂದ್ರರು ಸಂಶೋಧನಪೂರ್ವಕ ಸಿದ್ಧಪಡಿಸಿದರು. ನಾಲ್ಕನೆಯ ಟೀಕೆ ಪಂ. ಟೋಡರಮಲ್ ಅವರ 'ಸಂಯಗ್ ಜ್ಞಾನ ಚಂದ್ರಿಕಾ, ಎಂಬ ಹೆಸರಿನ ಹಿಂದೀ ಟೀಕೆ. ಇದು ಸಂಸ್ಕೃತ ಟೀಕೆಯನ್ನು ಅತ್ಯಂತ ಸ್ಪಷ್ಟರೀತಿಯಿಂದ ವಿಶದಪಡಿಸುತ್ತದೆಯಲ್ಲದೆ ಇದರ ಆಧಾರದಿಂದ ಹಿಂದೀ, ಇಂಗ್ಲೀಷ್, ಮರಾಠೀ ಭಾಷೆಗಳಲ್ಲಿ ಅನುವಾದಗಳು ಹುಟ್ಟಿವೆ.

ಕೇಶವವರ್ಣಿಯವರು ಪರಿಮೂರ್ಣ ಟೀಕೆಯ ಅನಂತರದಲ್ಲಿ ಮತ್ತಾವುದಾದರೂ ಕನ್ನಡ ಟೀಕೆ ಅಥವಾ ಕನಿಷ್ಠ ಮಿತಿಯಿಂದ ಭಾವಾನುವಾದವಾದರೂ ರಚಿತವಾಗಿದೆಯೆ ಎಂಬುದು ಪ್ರಶ್ನೆಯಾಗಿದೆ. ಮಾಘನಂದ್ಯಾಚಾರ್ಯರ ಶಾಸ್ತ್ರಸಾರಸಮುಚ್ಚಯದ ದ್ರವ್ಯಾನುಯೋಗ ಪ್ರಕರಣದ ಕನ್ನಡ ಟೀಕಿನ ಪರಿಶೀಲನೆಯಿಂದ ಗೊಮ್ಮಟಸಾರಕ್ಕೆ ಕನ್ನಡದಲ್ಲಿ ಬೇರೆ ಟೀಕೆಗಳ ರಚನೆಯಾಗಿರಬಹುದೆಂದು ಹೇಳಬಹುದಾಗಿದೆ. ಹೊಸ ಕನ್ನಡದಲ್ಲಿ ದಿ. ಮನ್ಯ ಟಿ.ಸಿ. ಬ್ರಹ್ಮಸೂರಯ್ಯನವರ ಭಾವಾನುವಾದವುಳ್ಳ ೧೮೦೦ಕ್ಕೂ ಹೆಚ್ಚಿನ ಪುಟಗಳ ಎರಡು ಹಸ್ತಪ್ರತಿಗಳಿವೆ.೨೧ ಇದರಲ್ಲಿ ಕರ್ಮಕಾಂಡದ 'ಪ್ರಕೃತಿ ಸಮುತ್ಕೀರ್ತನಾಧಿಕಾರಿ' ಮಾತ್ರ ೧೯೯೧ನೇ ಇಸವಿಯಲ್ಲಿ ಪ್ರಕಾಶಗೊಂಡಿದೆ.

ಗೊಮ್ಮಟಸಾರದ ಅನುವಾದಗಳಲ್ಲಿ ಅಗತ್ಯದ ವಿವರಣೆ (ಕಾಮೆಂಟರಿ) ಸಹಿತವಿರುವ, ಇಂಗ್ಲೀಷ್ ಅನುವಾದವು ತನ್ನದೇ ಆದ ಮಹತ್ತ್ವದ ಸ್ಥಾನ ಹೊಂದಿದೆ. ಭಾರತೀಯರಲ್ಲಿಯೂ, ಸಂಸ್ಕೃತ, ಪ್ರಾಕೃತ ಮತ್ತು ಹಿಂದೀ ಭಾಷೆಗಳನ್ನು ತಿಳಿಯದಿರುವವರಿಗೆ, ವಿಶೇಷತಃ ದಕ್ಷಿಣ ಭಾರತೀಯರಿಗೆ ಇದರಿಂದ ಮಹತ್ತರ ಉಪಕಾರವಾಗಿದೆ. ಜಿಜ್ಞಾಸುಗಳಾದ ವಿದೇಶೀಯರಿಗೆ ಇದರ

ಉಪಯೋಗ ಮಹತ್ತ್ವವನ್ನು ವಿವರಿಸ ಬೇಕಾದ ಅಗತ್ಯವಿಲ್ಲ. ದಿಗಂಬರ ಅಮ್ನಾಯದ ಸುದ್ಧಾಂತವನ್ನು ಹೊರ ಜಗತ್ತಿಗೆ, ವಿದೇಶೀಯರಿಗೆ ಪರಿಚಯಿಸುವಲ್ಲಿ ಇದರಿಂದಾಗಿರುವ ಕಾರ್ಯ ಅಪಾರ ಪ್ರಶಂಸ ನೀಯವಾಗಿದೆ. ಈ ಇಂಗ್ಲೀಷ್ ಅನುವಾದವನ್ನು ಮಾಡಿದವರು ಮಾನ್ಯ ಇಂದೂರಿನ ರಾಯ ಬಹದ್ದೂರ್ ಜಗಮಂದರಲಾಲ್ ಜೈನಿ. ಎಂ ಎ. ಎಂ ಆರ್ ಎಸ್ ಅವರು. ಇವರು ಜೆ.ಎಲ್. ಜೈನಿ ಎಂಬ ಹೆಸರಿನಿಂದಲೇ ಪ್ರಸಿದ್ಧರಾಗಿದ್ದಾರೆ. ಇವರ ಈ ಅನುವಾದ ಕಾರ್ಯಕ್ಕೆ ಪೂಜ್ಯಜೈನಧರ್ಮ ಭೂಷಣ ಬ್ರಹ್ಮಚಾರಿ ಶೀತಲ ಪ್ರಸಾದ್ ಜಿ ಮತ್ತು ಮಾನ್ಯ ಪಂಡಿತ ಅಜಿತ ಪ್ರಸಾದ್ ಜೀ ಎಂ.ಎ. ಎಲ್ ಎಲ್ ಬಿ ಅವರು ಸಹಾಯ ಸಹಕಾರವಿತ್ತಿದ್ದಾರೆ.

(೨) ಲಬ್ಧಿಸಾರ[೨೩] –ಹಿಂದೆಯೇ ತಿಳಿಸಿರುವಂತೆ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರೇ ಈ ಲಬ್ಧಿಸಾರದ ರಚನಕಾರರಾಗಿದ್ದಾರೆ. ಗೊಮ್ಮಟಸಾರದ ಜೀವಕಾಂಡದಲ್ಲಿ ಜೀವಸ್ವರೂಪದ ವರ್ಣನೆ ಮತ್ತು ಕರ್ಮಕಾಂಡದಲ್ಲಿ ಕರ್ಮಸ್ವರೂಪದ ವರ್ಣನೆ ಇದೆಯಾದರೆ, ಪ್ರಸ್ತುತ ಲಬ್ಧಿಸಾರದಲ್ಲಿ ಕರ್ಮಗಳ ನಿರ್ಮೂಲನ ಪೂರ್ವಕ ಜೀವವು ಮುಕ್ತಿ ಹೊಂದಿ ಪರಿಶುದ್ಧರೂಪವನ್ನು ಹೇಗೆ ಹೊಂದುವುದೆಂಬುದರ ವಿವರಣೆಯಿದೆ. ಹಿಂದೆ ಹೇಳಿರುವಂತೆ, ಇದಕ್ಕೆ ಕಸಾಯಪಾಹುಡ ಮತ್ತು ಜಯಧವಲಾಗಳು ಪ್ರಧಾನ ಆಧಾರಗಳಾಗಿವೆ. ಇದರಲ್ಲಿ ದರ್್ಶನಲಬ್ಧಿ, ಚಾರಿತ್ರಲಬ್ಧಿ ಮತ್ತು ಕ್ಷಾಯಿಕಚಾರಿತ್ರಗಳೆಂಬ ಮೂರು ಅಧಿಕಾರಗಳಿವೆ. ಪ್ರಥಮ ಆಧಿಕಾರದಲ್ಲಿ ಕ್ಷಯೋಪಶಮ, ವಿಶುದ್ಧಿ, ದೇಶನಾ, ಪ್ರಾಯೋಗ್ಯ ಮತ್ತು ಕರಣ ಎಂಬ ಐದು ಲಬ್ಧಿಗಳ ಸ್ವರೂಪದ ವರ್ಣನೆಯಿದೆ. ಇವುಗಳಲ್ಲಿ ಮೊದಲ ನಲ್ಕು ಲಬ್ಧಿಗಳು, ಭವ್ಯ ಮತ್ತು ಅಭವ್ಯ ಎಂಬ ಎರಡೂ ಪ್ರಕಾರದ ಜೀವಗಳಲ್ಲಿ ಉಂಟಾಗುವ ಸಾಮಾನ್ಯ ಲಬ್ಧಿಗಳಾಗಿವೆ. ಐದನೆಯ ಕರಣ ಲಬ್ಧಿಯು ಸಂಯಗ್ದರ್ಶನ ಮತ್ತು ಸಂಯಗ್ ಚಾರಿತ್ರದ ಯೋಗ್ಯತೆ ಹೊಂದಿದ ಭವ್ಯ ಜೀವಗಳಿಗೆ ಮಾತ್ರ ಉಂಟಾಗುವುದು. ಇದು ಅಧಃಕರಣ, ಅಪೂರ್ವಕರಣ ಮತ್ತು ಅನಿವೃತ್ತಿಕರಣವೆಂದು ಮೂರು ಪ್ರಕಾರವಗಿದೆ. ಎರಡನೇ ಅಧಿಕಾರದಲ್ಲಿ ಚಾರಿತ್ರ ಲಬ್ಧಿಯ ಸ್ವರೂಪ ಮತ್ತು ಚಾರಿತ್ರದ ಭೇದೋಪಭೇದ ಮೊದಲಾದವುಗಳ ಸಂಕ್ಷಿಪ್ತ ವರ್ಣನೆ ಇದೆಯಲ್ಲದೆ ಉಪಶಮ ಶ್ರೇಣಿಯನ್ನೇರುವ ವಿಧಾನವೂ ಇದೆ. ಮೂರನೇ ಅಧಿಕಾರದಲ್ಲಿ ಅಂತಿಮ ಫಲವಾಗಿ ಮುಕ್ತಿದಾಯಕವಾದ ಚಾರಿತ್ರಮೋಹ ಕ್ಷಪಣದ ಸಂಕ್ಷಿಪ್ತ

ವಿಧಾನವಿದೆ. ಈ ರೀತಿಯಾಗಿ ಈ ಗ್ರಂಥವು ಆತ್ಮವಿಕಾಸ ಸಾಧನ ಮಾರ್ಗ ದರ್ಶಕವಾಗಿದೆ. ಇದರಲ್ಲಿ ೬೪೯ ಗಾಹೆಗಳಿವೆ. ಇದಕ್ಕೆ ಗೊಮ್ಮಟಸಾರ ಟೀಕಾಕರ್ತೃಗಳಾದ ನೇಮಿಚಂದ್ರಾಚಾರ್ಯರ ಸಂಸ್ಕೃತ ಟೀಕೆ ಇದೆ. ಇದಲ್ಲದೆ ಪಂ. ಟೋಡರ್ ಮಲ್ ಅವರು ಇದರ ಮೊದಲಿನೆರಡು ಅಧಿಕಾರಗಳಿಗೆ ಈ ಹೇಳಿದ ಸಂಸ್ಕೃತ ಟೀಕೆಯನ್ನನುಸರಿಸಿ ವ್ಯಾಖ್ಯಾನ ಮಾಡಿ, ಮೂರುನೆಯ 'ಕ್ಷಪಣಾ' ಅಧಿಕಾರಕ್ಕೆ ಮಾಧವ ಚಂದ್ರ ತ್ರೈವಿದ್ಯರ ಸಂಸ್ಕೃತ ಗದ್ಯಾತ್ಮಕ ಕ್ಷಪಣಸಾರವನ್ನನುಸರಿಸಿ ವ್ಯಾಖ್ಯಾನ ಮಾಡಿದ್ದಾರೆ. ಈ ಕಾರಣದಿಂದ ಅವರು ತಮ್ಮ 'ಸಮ್ಯಗ್ ಜ್ಞಾನ ಚಂದ್ರಿಕಾ' ಟೀಕೆಯನ್ನು ಲಬ್ಧಿಸಾರ–ಕ್ಷಪಣಸಾರ ಸಹಿತ ಗೊಮ್ಮಟಸಾರ ಟೀಕೆಯೆಂದು ವ್ಯಕ್ತಪಡಿಸಿದ್ದಾರೆ.

ತಿಲೋಯಪಣ್ಣತ್ತಿಯಲ್ಲಿ ಮತ್ತು ಧವಲಾ, ಜಯಧವಲಾ ಟೀಕೆಗಳಲ್ಲಿ ಸಂಗತ ವಾಗಿರುವ ಗಣಿತಸಂಬಂಧಿ ವಿಷಾಯವನ್ನು ಹಿಂದೆ ಹೇಳಿದೆ. ಜೀವ ಮತ್ತು ಕರ್ಮಸಿದ್ಧಾಂತಕ್ಕೆ ಸಂಬಂಧಿಸಿದಂತೆ ಗೊಮ್ಮಟಸಾರದಲ್ಲಿ ವಿಶೇಷತಃ ಕರ್ಮಕಾಂಡ ಭಾಗದಲ್ಲಿ ಗಣಿತವು ಸಂಕಲಿತವಾಘಿದೆ. ಮಾನ್ಯ ಜೆ.ಎಲ್. ಜೈನಿಯವರ ಇಂಗ್ಲಿಷ್ ಕಾಮೆಂಯರಿಯಲ್ಲಿ ಆಧುನಿಕ ಗಣಿತಶಾಡ್ತ್ರ ಸಮನ್ವಯಪೂರ್ವಕ ಇದರ ವಿವರಣೆ ಇದೆ. ಇದಲ್ಲದೆ, ಮಾನ್ಯ ಪ್ರೊ. ಎಲ್. ಸಿ. ಜೈನ್ ಅವರು, ಕರ್ಮ ಸಿದ್ಧಾಂತದಲ್ಲಿ ನಿರೂಪಿತವಿರುವ ಹಾಗು ವಿಶೇಷತಃ ಲಬ್ಧಿಸಾರದಲ್ಲಿ ಒಳಗೊಂಡಿರುವ ವಿಜ್ಞಾನ ಮತ್ತು ಗಣಿತವನ್ನು ಆಧುನಿಕ ವಿಜ್ಞಾನ ಚಿಂತನೆಯೊಡನೆ ಸಮನ್ವಯಗೊಳಿಸಿ ನಿರೂಪಿಸಲು ಯತ್ನ ಮಾಡಿದ್ದಾರೆ, ಈ ಮಹನೀಯರು ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡಮಿ (ಐ.ಎನ್.ಎಸ್.ಎ) ಸಂಶೋಧನೆ ಯೋಜನೆಯಲ್ಲಿ ಕಾರ್ಯನಿರತರಾಗಿದ್ದಾರೆ.

(೩) ತ್ರಿಲೋಕಸಾರ[೨೩]– ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರು ತ್ರಿಲೋಕಸಾರದಲ್ಲಿ ಊರ್ಧ್ವಲೋಕ, ಮಧ್ಯಲೋಕ ಮತ್ತು ಅಧೋಲೋಕಗಳೆಂಬ ಮೂರು ಲೋಕಗಳನ್ನು ಆಕಾರ ಪ್ರಕಾರಾದಿಗಳೊಡನೆ ವಿವರಣೆಯನ್ನು ಪ್ರಾಕೃತ ಗಾಹೆಯಲ್ಲಿ ಮಾಡಿದ್ದಾರೆ[೨೪] ಇದರ ಪ್ರಮುಖ ಆಧಾರಗ್ರಂಥ ಹಿಂದೆ ಹೇಳಿರುವಂತೆ ತೀಲೋಯಪಣ್ಣತ್ತಿಇದಲ್ಲದೆ ಇನ್ನಿತರ ಲೋಕರೂಪ ವಿವರಣೆಯ ಗ್ರಂಥಗಳ ಉಪಯೋಗವನ್ನೂ ಪಡೆಯಲಾಗಿದೆ. ಇದರಲ್ಲಿ ೧೦೦೧೮ ಗಾಹೆಗಳಿವೆ. ಇವುಗಳಲ್ಲಿ ಕೆಲವು, ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರ ಪ್ರಧಾನ ಶಿಷ್ಯರಲ್ಲೊಬ್ಬರಾದ

ಮಾಧವ ಚಂದ್ರ ತ್ರೈವಿದ್ಯರಿಂದ ರಚಿತವಾಗಿವೆ. ತಮ್ಮ ಗುರುವಿನ ಸಮ್ಮತಿ ಹೊಂದಿಯೇ ಇವರು ತಮ್ಮ ರಚನೆಯ ಗಾಹೆಗಳನ್ನು ಸೇರಿಸಿದ್ದಾರೆ. ಗೊಮ್ಮಟಸಾರ್ಅದಲ್ಲಿಯೂ ಇವರಿಂದ ರಚಿತವಾಗಿರುವ ಗಾಹೆಗಳು ಸೇರಿವೆಯೆಂದು ಟೀಕೆಯ ಪ್ರಸ್ತಾವನಾ ವಾಕ್ಯಗಳಿಂದ ಸೂಚಿತವಾಗುವುದು. ಗೊಮ್ಮಟಸಾರದಂತೆ ಈ ಕೃತಿಯೂ ಚಾಮುಂಡರಾಯನ ಪ್ರತಿಬೋಧನಾರ್ಥವಾಗಿ ರಚಿತವಾಯಿತೆಂದು, ಮಾಧವಚಂದ್ರರು ತಮ್ಮ ಟೀಕೆಯ ಪ್ರಾರಂಭದಲ್ಲಿ ವ್ಯಕ್ತಪಡಿಸಿದ್ದಾರೆ. ಇದರ ಮೇಲೆ ಪ್ಡ್. ಟೋಡರ್ ಮಲ್ ಅವರ ವಿಸ್ತೃತ ಟೀಕೆ ಇದೆ. ಇದರಲ್ಲಿ ಗಣಿತವಿಷಯವನ್ನು ವಿಶೇಷರೂಪದಿಂದ ವಿಶದ ಪಡಿಸಲಾಗಿದೆ.

ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರು 'ಕರ್ಮಪ್ರಕೃತಿ' ಮತ್ತು 'ದ್ರವ್ಯ ಸಂಗ್ರಹ' ಎಂಬ ಮತ್ತೆರಡು ಗ್ರಂಥಗಳನ್ನು ರಚಿಸಿರುವರೆಂಬುದು ಕೆಲವರು ವಿದ್ವಾಂಸರ ಅಭಿಪ್ರಾಯವಾಗಿದೆ. ಆದರೆ ಮಾನ್ಯ ಜುಗುಲ್ ಕಿಶೋರ್ ಮುಖ್ತಾರ್ ಅವರು, ಕರ್ಮಪ್ರಕೃತಿಯು ಪ್ರಧಾನವಾಗಿ ಗೊಮ್ಮಟಸಾರ–ಕರ್ಮಕಾಂಡದ ಗಾಹೆಗಳನ್ನು ಮತ್ತು ಅನ್ಯತ್ರ ಕಂಡು ಬರುವ ಗಾಹೆಗಳನ್ನೊಳಗೊಂಡಿರುವ ಸಂಕಲನಾತ್ಮಕ ಗ್ರಂಥವಾಗಿದೆ ಎಂದು ಮತ್ತು ಇದು ನೇಮಿಚಂದ್ರಾಚಾರ್ಯರ ಕೃತಿಯಾಗಿರದೆ 'ನೇಮಿಚಂದ್ರ' ಎಂಬ ಹೆಸರಿನ ಬೇರೊಬ್ಬ ಆಚಾರ್ಯರ ಕೃತಿಯಾಗಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.[೨೫] 'ದ್ರವ್ಯಸಂಗ್ರಹ' ದ ಬಗ್ಗೆ ಕೃತಿಯ ವೃತ್ತಿಕರ್ತೃವಾದ ಶ್ರೀ ಬ್ರಹ್ಮದೇವನ ಮುಂದಿನ ಹೇಳಿಕೆಯನ್ನು ಗಮನಿಸಬೇಕಾಗಿದೆ : "ಮಾಲವ ದೇಶದಲ್ಲಿ ಧಾರಾನಗರಾಧಿಪತಿ ಕಲಿಕಾಲ ಚಕ್ರವರ್ತಿ ರಾಜಭೋಜದೇವನ ಸಂಬಂಧಿಯಾದ ಶ್ರೀಪಾಲಮಂಡಲೇಶ್ವರನ 'ಆಶ್ರಮ' ಎಂಬ ಹೆಸರಿನ ನಗರದಲ್ಲಿ ಶ್ರೀ ಮುನಿ ಸುವ್ರತ ತೀರ್ಥಂಕರನ ಬಸದಿಯಲ್ಲಿ..... ಭವ್ಯ ಪುಂಡರೀಕನೆನಿಸಿ ಭಾಂಡಾಗಾರಾದಿ ಅನೇಕ ನಿಯೋಗಾಧಿಕಾರಿಯಾಗಿದ್ದ ಸೋಮನೆಂಬ ರಾಜಶ್ರೇಷ್ಠಿಗಾಗಿ ಶ್ರೀ ನೇಮಿ ಚಂದ್ರ ಸಿದ್ಧಾಂತದೇವರು ಮೊದಲಿಗೆ ೨೬ ಗಾಹೆಗಳೊಡನೆ, ಲಘು ದ್ರವ್ಯ ಸಂಗ್ರಹವನ್ನು ಮುಂದುವರಿಸಿ ಮತ್ತೆ ವಿಶೇಷ ತತ್ತ್ವ ಪರಿಜ್ಞಾನಕ್ಕಾಗಿ ರಚಿಸಲಾದ ಬೃಹದ್ ದ್ರವ್ಯ ಸಂಗ್ರಹಕ್ಕೆ ಅಧಿಕಾರ ಶುದ್ಧಿಕಾರ ಶುದ್ಧಿಪೂರ್ವಕ ವೃತ್ತಿಯನ್ನು ಆರಂಭಿಸಲಾಗಿದೆ."

ಶ್ರೀ ಬ್ರಹ್ಮದೇವನ ಮೇಲ್ಕಂಡ ಹೇಳಿಕೆಯಂತೆ 'ದ್ರವ್ಯಸಂಗ್ರಹ'(ಅಥವಾ ಬೃಹದ್ ದ್ರವ್ಯ ಸಂಗ್ರಹ) ದ ಕರ್ತೃ ನೇಮಿಚಂದ್ರ ಸಿದ್ಧಾಂತಿ ದೇವರು. ಇವರು ಪ್ರಸಿದ್ಧ ಧಾರಾನಗರಾಧಿಪತಿ ಭೋಜ ದೇವ ರಾಜನ ಸಮಕಾಲೀನರು, ಮತ್ತು ಈ ಕೃತಿಯನ್ನು ಆಶ್ರಮನಗರದ ಮುನಿಸುವ್ರತತೀರ್ಥಂಕರ್ ಬಸದಿಯಲ್ಲಿ ಭಾಂಡಾಗಾರಾದಿ ಅಧಿಕಾರಗಳಲ್ಲಿ ನಿಯುಕ್ತನಾಗಿದ್ದ ಸೋಮನಿಗಾಗಿ ರಚನೆ ಮಾಡಿದ್ದಾರೆ. ಈ ಹೇಳಿಕೆಯಿಂದ ಈ ಕೃತಿಯು ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರಿಂದ ರಚಿತವಾಗಿರದೆ ನೇಮಿಚಂದ್ರ ಸಿದ್ಧಾಂತಿ ದೇವ ಎಂಬ ಮತ್ತೊಬ್ಬ ಆಚಾರ್ಯರಿಂದ ರಚಿತವಾಗಿದೆ ಎಂದು ಸ್ಪಷ್ಟವಾಗುವುದು. ಇದೂ ಅಲ್ಲದೆ ಗ್ರಂಥದ ಅಂತ್ಯಗಾಹೆಯಲ್ಲಿ ಗ್ರಂಥಕರ್ತೃವು ಸ್ವತಃ ತಮ್ಮನ್ನು 'ತಣಿಸುತ್ತಧರೇಣ ಣೇಮಿಚಂದಮುಣಿಣಾ ಭಣಿಯಂ' ಶ್ರುತ–ಆಗಮ ವನ್ನು ಸ್ವಲ್ಪ ಮಾತ್ರ ತಿಳಿದ ನೇಮಿಚಂದ್ರ ಮುನಿಯಿಂದ ( ಈ ದ್ರವ್ಯಸಂಗ್ರವು) ಹೇಳಲ್ಪಟ್ಟಿದೆ' ಎಂದು ಹೇಳೀದ್ದಾರೆ, ಇದರಿಂದ ಈ ಗ್ರಂಥಕರ್ತೃವಾದ ನೇಮಿಚಂದ್ರ ಮಿನಿಯು 'ಭರತ ಚಕ್ರಿಯು (ಭರತ ಖಂಡದ) ಷಟ್‌ಖಂಡವನ್ನು ಸಾಧಿಸಿದಂತೆ ಷಟ್ ಖಂಡಆಗಮ ಸಿದ್ಧಾಂತವನ್ನು ಸಾಧಿಸಿರುವೆ'ನೆಂದು ಹೇಳಿಕೊಂಡಿರುವ ಗೊಮ್ಮಟಸಾರಕರ್ತೃ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರಿಂದ ಬೇರೆಯವರೆಂದು ನಿಸ್ಸಂದಿಗ್ಧ ರೀತಿಯಿಂದ ಸ್ಪಷ್ಟವಾಗುವುದು. ಈ ವಿಚಾರ ಸರಣಿಯನ್ನು ಸಮರ್ಥಿಸುವ ಮತ್ತೂ ಒಂದು ಅಂಶವಿದೆ; ದ್ರವ್ಯ ಸಂಗ್ರಹದ ಕರ್ತೃವು ಭಾವಾಸ್ರವದ ಭೇದಗಳಲ್ಲಿ ಪ್ರಮಾದವನ್ನು ಪರಿಗಣನೆ ಮಾಡಿ, ಅವಿರತದ ಐದು ಭೇದಗಳನ್ನು ಮತ್ತು ಕಷಾಯದ ಭೇದಗಳನ್ನು ಗ್ರಹಣೆ ಮಾಡಿದ್ದಾರೆ. ಆದರೆ ಗೊಮ್ಮಟ ಸಾರದ ಕ್ರ್ತೃ ಪ್ರಮಾದವನ್ನು ಭಾವಾಸ್ರವದ ಭೇದಗಳಲ್ಲಿ ಪರಿಗಣನೆ ಮಾಡಿಲ್ಲವೆಂಬುದಲ್ಲದೆ ಅವಿರತದ ೧೨ ಭೇದಗಳನ್ನು (ಬೇರೆ ಪ್ರಕಾರದಿಂದ) ಮತ್ತು ಕಷಾಯದ ೨೫ ಭೇದಗಳನ್ನು ಪರಿಗಣನೆ ಮಾಡಿದ್ದಾರೆ[೨೬] ಈ ರೀತಿಯಾಗಿ ಒಂದೇ ವಿಷಯದ ಬಗ್ಗೆ ವಿಭಿನ್ನ ರೀತಿಯಿಂದ ಹೇಳಿರುವ ಗ್ರಂಥಕರ್ತೃಗಳ ವಿಭಿನ್ನತೆಯು ಸ್ಪಷ್ಟವಾಗಿ ಸೂಚಿತವಾಗುವುದು. ಇದರಿಂದಲೂ ದ್ರವ್ಯ ಸಂಗ್ರಹದ ಕರ್ತೃನೇಮಿಚಂದ್ರ ಸಿದ್ಧಾಂತಿದೇವರು ಗೊಮ್ಮಟಸಾರದ ಕೃರ್ತ ನೇಮಿಚಂದ್ರ ಸಿದ್ಧಾಂತಚಕ್ರವರ್ತಿಯವರಿಂದ ಬೇರೆಯವರಾಗಿದ್ದಾರೆಂದು ಸಿದ್ಧವಾಗುವುದು. ದ್ರವ್ಯಸಂಗ್ರಹ ವೃತ್ತಿಕಾರ ಬ್ರಹ್ಮದೇವನಿಗೆ ದ್ರವ್ಯಸಂಗ್ರಹದ ರಚನಕಾರರ ನಿಕಟ ಪರಿಚಯ, ಇಲ್ಲವೆ

ಕನಿಷ್ಠಮಿತಿಯಿಂದ ನಿಶ್ಚಿತ ಇತಿವೃತ್ತ ತಿಳಿದಿದ್ದಿತೆಂದು, ಈ ಹಿಂದೆ ಉಲ್ಲೇಖಿಸಿರುವ ಹೇಳಿಕೆಯಿಂದ ನಿಸ್ಸಂದಿಗ್ಧವಾಗಿ ಸೂಚಿತವಾಘುವುದು. ಇಷ್ಟಾದರೂ ಈ ಕೃತಿಯ ರಚನಾ ಕಾರರ ಬಗ್ಗೆ ಸಂದಿಗ್ಧತೆಯನ್ನು ಮೂಡಿಸುವಂತಿರುವ ಮತ್ತು ಒಂದು ಅಂಶವನ್ನು ಇಲ್ಲಿ ಪರಿಷ್ಕರಿಸಬೇಕಾದ ಅಗತ್ಯವಿದೆ.

ಬೆಂಗಳೂರು ದಿಗಂಬರ ಜೈನ್ ಟ್ರಸ್ಟ್ ನಿಂದ[೨೭] ೧೯೮೭–ಏಪ್ರಿಲ್ ತಿಂಗಳಲ್ಲಿ ಶ್ರೀ ಎಂ.ಬಿ. ಪಾಟೀಲ ಸೇಡಬಾಳ ಅವರ ಪ್ರಧಾನ ಸಂಪಾದಕತ್ವದಲ್ಲಿ ಮತ್ತು ಶ್ರೀ ಡಿ. ಪಾರ್ಶ್ವನಾಥ ಮತ್ತು ಶ್ರೀ ಮಹೇಂದ್ರ ಎಂ. ಎ. ಅವರ ಸಂಪಾದಕತ್ವದಲ್ಲಿ ಕನ್ನಡ ಅನ್ವಯಾರ್ಥ ಮತ್ತು ಭಾವಾರ್ಥಗಳೊಡನೆ 'ದ್ರವ್ಯ ಸಂಗ್ರಹ'ವು ಪ್ರಕಾಶಿತವಾಗಿದೆ. ಈ ಕೃತಿಯು 'ನೇಮಿಚಂದ(ದ್ರ?) ಸಿದ್ಧಾಂತಿದೇವವಿರಚಿತ' ಎಂದು ಹೇಳಲಾಗಿದೆಯಾದರೂ ಈ ನೇಮಿಚಂದ್ರಸಿದ್ಧಾಂತಿ ದೇವರನ್ನು ಗೊಮ್ಮಟಸಾರ, ಲಬ್ಧಿಸಾರ, ಕ್ಷಪಣಸಾರ, ತ್ರಿಲೋಕಸಾರಗಳ ಕರ್ತೃವಾಧ 'ಸಿದ್ಧಾಂತ ಚಕ್ರವರ್ತಿ' ಎಂಬ ಬಿರುದು ಹೊಂದಿದ್ದ ನೇಮಿಚಂದ್ರರೆಂದೇ ಗುರುತಿಸಲಾಗಿದೆ,[೨೮] ಇದಲ್ಲದೆ 'ಈ ದ್ರವ್ಯ ಸಂಗ್ರಹ'ಕ್ಕೆ ಶ್ರವಣಬೆಳಗುಳದ ಜಗತ್ಪ್ರಸಿದ್ಧ ಗೊಮ್ಮಟ ಮಹಾಮೂರ್ತಿಯನ್ನು ಪ್ರತಿಷ್ಠಿಸಿದ ಚಾವುಂಡರಾಯನು ಟೀಕೆಯನ್ನು ರಚಿಸಿರುವನೆಂಬ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ[೨೯]. ಮತ್ತೆ ಮುಂದುವರಿದು ಪೀಠಿಕೆಯಲ್ಲಿ "'ದ್ರವ್ಯಸಂಗ್ರಹ'ದ ಟೀಕೆಯಾದ 'ಭಾವನಾಸಾರ'ದಲ್ಲಿ ಚಾಮುಂಡರಾಯನ(೯೭೮) ಬಗ್ಗೆಯಾವ ಸುಳಿವೂಸಿಗುವುದಿಲ್ಲ" ಎಂದು ಹೇಳಿ ಮುಂದೆ "ಯುದ್ಧದ ಅನುಭವಗಳ ದಟ್ಟವಾಧ ಪ್ರಭಾವಗಳ ಸೆಳೆತಗಳಿಂದಾಗಿ ಚಾಮುಂಡರಾಯನಿಗೆ ದ್ರವ್ಯ ಸಂಗ್ರಹದಂತಹ ಉತ್ಕೃಷ್ಟ ಪ್ರಾಕೃತ ಭಾಷೆಯ ಗುರುಕೃತಿಗೆ ಅಷ್ಟೇ ನಿರ್ದಿಷ್ಟವಾಗಿ ಗಹನವಾದ ತತ್ತ್ವಗಳಿದ್ದರೂ ಕೂಡ ಕನ್ನಡದಲ್ಲಿ ಟೀಕೆ ಬರೆಯಲು ಸಾಧ್ಯವಾಗಿದ್ದು ರೋಮಾಂಚಕ ಸಂಗತಿ" ಎಂದು ಹೇಳಿದ್ದಾರೆ. ಈ ಚಾಮುಂಡರಾಯನು ದ್ರವ್ಯಸಂಗ್ರಹಕ್ಕೆ ಭಾವನಾಸಾರವೆಂಬ ಟೀಕೆಯನ್ನು ರಚಿಸಿರುವನೆಂಬುಕ್ಕೆ ಆಧಾರವಾಗಿ ಹಸ್ತಪ್ರತಿಗ್ರಂಥಾಂತ್ಯದಲ್ಲಿರುವುದೆಂದು ಹೇಳಿ ಮುಂದಿನ ವಾಕ್ಯವನ್ನು ಉಲ್ಲೇಖ ಮಾಡಿದ್ದಾರೆ. "ಇತಿ ಸಕಲಾಗಮಸಂಪನ್ನ ಶ್ರೀಮಜ್ಜಿನಸೇನಭಟ್ಟಾರಕ ಶ್ರೀಪಾದಪದ್ಮಪ್ರಸಾದಾಸಾದಿತ ಚತುರನುಯೋಗ ಪಾರಾವಾರ ಪಾರಗ ಧರ್ಮವಿಜಯ ಶ್ರೀಮಚ್ಚಾಮುಂಡರಾಯ ಮಹಾರಾಜ ವಿರಚಿತೇ

ಭಾವನಾಸಾರ್ಥ ಸಂಗ್ರಹೇ ಚಾರಿತ್ರಸಾರೇ ಅನಗಾರಧರ್ಮಃ ಸಮಾಪ್ತಃ ಅಯಂ ಗ್ರಂಥಃ"[೩೦] ಇಲ್ಲಿ ಹೇಳೀರುವ ಚಾಮುಂಡರಾಯ ಮಹಾರಾಜನು ಶ್ರೀ ಜಿನಸೇನ ಭಟ್ಟಾರಕರ ಶಿಷ್ಯ ಇವನು ಅಜಿತಸೇನರ ಶಿಷ್ಯ-ಗೊಮ್ಮಟದೇವಮೂರ್ತಿ ಪ್ರತಿಷ್ಠಾಪಕ ಚಾಮುಂಡರಾನಿಂದ ಬೇರೆಯಾದವನು ಎಂಬುದು ಸ್ವಯಂ ಸ್ಪಷ್ಟವಿದೆ. ಇದಲ್ಲದೆ, ಈ ಪುಷ್ಟಿಕೆಯಲ್ಲಿ ಹೇಳಿರುವ ಭಾವನಾಸಾರ ಸಂಗ್ರಹವು ದ್ರವ್ಯಸಂಗ್ರಹದ ಟೀಕೆಯಾಗಿರ್ದೆ ಸ್ವತಂತ್ರವಾದ ಒಂದು ಗ್ರಂಥವಾಗಿರಬೇಕೆಂಬುದಾಗಿ ತಿಳಿಯಬೇಕಾಗಿದೆ.

ಸಂಪಾಶಕ ಮಹೋದಯರು ಮುಂದುವರಿದು, "ಭಾವನಾಸಾರದ ಗ್ರಂಥಾಂತ್ಯದಲ್ಲಿ

ದ್ರವ್ಯಸಂಗ್ರಹಶಾಸ್ತ್ರಸ್ಯ ಭಾವನಾಸಾರ ಸಂಜ್ಞಕಃ।
ಗ್ರಂಥೋ ವ್ಯತ್ತಿ ಸ್ವರೂಪೋಯಂ ತ್ರಿಸಹಸ್ರ ಪ್ರಮಾಣಕಂ॥

ಶಕೆ ೧೮೬೪ ಮಾಘ ಕೃಷ್ಣ ಪ್ರತಿಪದಿ ಸಂಪೂರ್ಣಂ" ಎಂದು ಉಲ್ಲೇಖಿಸಿದ್ದಾರೆ. ೩೧ ಈ ಹೇಳಿಕೆಯಿಂದ ದ್ರವ್ಯ ಸಂಗ್ರಹದ 'ಭಾವನಾಸರ' ವೃತ್ತಿಗ್ರಂಥದ ರಚನೆಯು ಶಕ ಸಂ. ೧೮೬೪ (ಕ್ರಿ.ಶ. ೧೯೪೨) ರಲ್ಲಿ ಪೂರ್ಣವಾಗಿದೆಯೆಂದು ಸೂಚಿತವಾಗುವುದು, ಅಥವಾ ಇದು ಮೂಲ ಕೃತಿಯ ಪ್ರತಿಯನ್ನು ಸಿದ್ಧಪಡಿಸಿದ ಕಾಲದ ಸೂಚಿತವಾಗಿರ ಬಹುದಾದ ಸಂಭವವಿದೆ. ಸಂಪಾದಕ ಮಹೋದಯರು ಪ್ರಸ್ತಾವನೆಯಲ್ಲಿ ಮಾದರಿಗಾಗಿ, ೩೫ನೆ ಮತ್ತು ೪೦ನೇ ಗಾಹೆಗಳ ಟೀಕೆಯ ಮೂಲಭಾಗವನ್ನು ಉಲ್ಲೇಖಿಸಿದ್ದಾರೆ. ಇಲ್ಲಿ ಕಂಡು ಬರುವ ಭಾಷಾ ಶೈಲಿಯಿಂದ ಈ ವೃತ್ತಿಯು ಕನಿಷ್ಠಮಿತಿಯಿಂದ ೨೦೦ ವರ್ಷಗಳಷ್ಟಾದರೂ ಹಿಂದಿನ ಕಾಲದ್ದಾಗಿದೆ ಎಂದು ಹೇಳಬಹುದಾಗಿದೆ. ಸಂಪಾದಕ ಮಹೋದಯರು ಎಲ್ಲ ಗಾಹೆಗಳಿಗೂ ಮೂಲರೂಪದ ಟೀಕೆಯನ್ನು ಕೊಟ್ಟು ಅನಂತರ ಈಗಿನ ಹೊಸ ಕನ್ನಡದಲ್ಲಿ ಅದರ ಭಾವಾರ್ಥವನ್ನು ಕೊಟ್ಟಿದ್ದಲ್ಲಿ ಈ ಕೃತಿಯ ಉಪಯೋಗ ಇನ್ನೂ ಹೆಚ್ಚು ಪ್ರಯೋಜನಕಾರಿಯಾಗಿತ್ತಿದ್ದಿತು. ಈ ಕೃತಿಗೆ ಮುನ್ನುಡಿಯನ್ನು ಬರೆದಿರುವ ಪ್ರಧಾನ ಸಂಪಾದಕರಾದ ಮಾನ್ಯ ಶ್ರೀ ಎಂ. ಬಿ. ಪಾಟೀಲರು "ಈ ಭಾವನಾಸಾರವು ಬ್ರಹ್ಮದೇವನು ಬರೆದ

ಸಂಸ್ಕೃತ ವೃತ್ತಿಯ ನಂತರವೇ ಬರೆಯಲ್ಪಟ್ಟಿರಬೇಕೆಂದು ಹೇಳಬೇಕಾಗುತ್ತದೆ, ಏಕೆಂದರೆ ಇದು ಬ್ರಹ್ಮದೇವನ ಸಂಸ್ಕೃತ ವೃತ್ತಿಯನ್ನೇ ಅನುಸರಣೆ ಮಾಡಿದೆ" ಎಂದು ಹೇಳಿದ್ದಾರೆ. ಆದರೆ ಈ ಬಗ್ಗೆ ಸಮರ್ಥಕವಾದ ಯಾವ ಮಾತನ್ನೂ ಅವರು ಹೇಳಿಲ್ಲ. ಸಂಪಾದಕ ಮಹೋದಯರು ಮಾದರಿಯಾಗಿ ಕೊಟ್ಟಿರುವ ೩೫ನೇ ಗಾಹೆಯ ಮೂಲವೃತ್ತಿಯಲ್ಲಿ ಪ್ರಸ್ತುತಮಾಡಿರುವ ಸ್ತ್ರೀ ಪರೀಷಹ ಜಯದ ವಿವರಣೆ ಬ್ರಹ್ಮದೇವನ ಇದೇ ಗಾಹೆಯ ವೃತ್ತಿಯಲ್ಲಿ ಕಂಡುಬರುವುದಿಲ್ಲ. ಇದರಲ್ಲಿ ೨೨ ಪರೀಷಹಗಳನ್ನು ಹೆಸರಿಸಿದ್ದು ಒಟ್ಟಿನಲ್ಲಿ ಪರೀಷಹ ಜಯದ ಅರ್ಥವಿವರಣೆ ಮಾತ್ರವಿದೆ. ಇಷ್ಟಾದರೂ ಮನ್ಯ ಸಂಪಾದಕರು ಮಾದರಿಗಾಗಿ ಕೊಟ್ಟಿರುವ ೪೦ನೇ ಗಾಹೆಯ ಮೂಲವೃತ್ತಿಯು ಬ್ರಹ್ಮದೇವನ, ಇದೇ ಗಾಹೆಯ ವೃತ್ತಿಯೊಡನೆ ಹೆಚ್ಚಿನದಾದ ಸಾಮ್ಯತೆ ಹೊಂದಿರುವಂತೆ ಕಂಡುಬರುತ್ತದೆ. ಆದ್ದರಿಂದ ಭಾವನಾಸಾರದ ಕರ್ತೃವು ಪೂರ್ಣರೀತಿಯಿಂದ ಬ್ರಹ್ಮದೇವನ ವೃತ್ತಿಯನ್ನೆಏ ಅನು ಸರಿಸಿದ್ದಾನೆಂದು ಹೇಳಲಾಗದಿದ್ದರೂ ಅಲ್ಲಲ್ಲಿ ಅದರ ಅನುಕರಣೆ ಮಾಡಿರುವನೆಂದು ಹೇಳಬಹುದಾಗಿದೆ.

ಬ್ರಹ್ಮದೇವನು, ಕ್ರಿ. ಶ. ೧೦೧೮ ರಿಂದ ೧೦೬೦ ರವರೆಗೆ ಧಾರಾನಗರದಲ್ಲಿ ರಾಜ್ಯವಾಳಿದ ಭೋಜರಾಜದೇವನನ್ನು ಹೆಸರಿಸಿಃದ್ದಾನೆ, ಮತ್ತು ಕ್ರಿ.ಶ. ೧೪೨೮ ರಲ್ಲಿ ಬರೆಯಲಾಗಿರುವ ಬ್ರಹ್ಮದೇವನ ಟೀಕೆಯ ಒಂದು ಹಸ್ತಪ್ರತಿಯು ಜೈಸಲ್ಮೇರಿನ ಗ್ರಂಥಭಂಡಾರದಲ್ಲಿ ಉಪಲಬ್ಧವಿದೆ.[೨] ಇದರಿಂದ ಬ್ರಹ್ಮದೇವನ ಈ ಟೀಕೆಯು ಕ್ರಿ.ಶ. ೧೧ನೇ ಶತಮಾನಕ್ಕಿಂತ ಪೂರ್ವಕಾಲೀನವಾಘಲಾರದು. ದ್ರವ್ಯಸಂಗ್ರಹದ ರಚನ ಕಾರರಾದ ನೇಮಿಚಂದ್ರ ಸಿದ್ಧಾಂತಿ ದೇವರನ್ನು ಭೋಜರಾಜನ ಸಮಕಾಲೀನರೆಂಬುದಾಗಿಯೇ ಬ್ರಹ್ಮದೇವನು ಕಾಣಿಸಿದ್ದಾನೆ. ಇದರಂತೆ ಈ ಗ್ರಂಥವು ಕ್ರಿ.ಶ.೧೧ನೇ ಶತಮಾನದಲ್ಲಿ ರಚಿತವಾಗಿದ್ದು ತದನಂತರ ಕಾಲದಲ್ಲಿಯೇ ಬಹ್ಮದೇವನ ಟೀಕೆ ರಚಿತವಾಘದೆಯೆಂಬುದರಲ್ಲಿ ಸಂದೇಹವಿಲ್ಲ. ಈ ಟೀಕೆಯ ೧೫ನೇ ಶತಮಾನದ ಹಸ್ತಪ್ರತಿ ದೊರಕಿರುವುದರಿಂದ ಬ್ರಹ್ಮದೇವನ ಕಾಲವನ್ನು ಕ್ರಿ.ಶ. ೧೧ ಮತ್ತು ೧೫ನೇ ಶತಮಾನಗಳ ಮಧ್ಯವರ್ತಿ ಕಾಲವೆಂದು ಗಣನೆ ಮಾಡಬೇಕಾಗಿದೆ. ದ್ರವ್ಯಸಂಗ್ರಹದ ಕರ್ತೃ ನೇಮಿಚಂದ್ರ ಸಿದ್ಧಾಂತಿ ದೇವರ, ಹಾಗೂ ಅವರು ಕೃತಿ ರಚನೆ ಮಾಡಿದ ಸ್ಥಳ ಮುಂತಾದ ಅಂಶಗಳ ಪರಿಚಯವು

ಬಹ್ಮದೇವನಿಗೆ ಬಹು ಖಚಿತರೀತಿಯದಾಗಿ ಇರುವಂತೆ ಕಂಡುಬರುವುದಾದ್ದರಿಂದ, ನೇಮಿಚಂದ್ರ ಸಿದ್ಧಾಂತಿ ದೇವರಿಂದ ಅನತಿ ದೀರ್ಘಕಾಲದಲ್ಲಿ, ಎಂದರೆ ಪ್ರಾಯಿಕವಾಗಿ ಕ್ರಿ.ಶ. ೧೧ನೇ ಶತಮಾನದ ಅಂತ್ಯಭಾಗ ಮತ್ತು ೧೨ನೇ ಶತಮಾನದ ಪೂರ್ವಭಾಗದಲ್ಲಿ ಜೀವಿಸಿದ್ದನೆಂದು ಸಂಭವನೀಯವಾಗಿ ಪರಿಗಣಿ ಮಾಡಬಹುದು. ಈ ಹಿಂದೆ ಹೇಳಿರುವಂತೆ ಭಾವನಾಸಾರ ಟೀಕೆಯ ಮೇಲೆ ಬಹ್ಮದೇವನ ಟೀಕೆಯ ಪ್ರಭಾವ ಕಂಡುಬರುವುದಾದ್ದರಿಂದ ಇದು ೧೨ನೇ ಶತಮಾನ ಅಥವಾ ಆನಂತರದ ಒಂದೆರಡು ಶತಮಾನಗಳಲ್ಲಿ ರಚಿತವಾಗಿದೆಯೆಂದು ಗಣನೆ ಮಾಡಬಹುದು. ಈ ಎಲ್ಲ ವಿಚಾರ ಸರಣೀಯಿಂದ ದ್ರವ್ಯ ಸಂಗ್ರಹವು, ಗೊಮ್ಮಟ ಸಾರಾದಿ ಕೃತಿಗಳ ಕರ್ತೃ ನೇಮಿಚಂದ್ರ ಸಿದ್ಧಾಂತಚಕ್ರವರ್ತಿಯವರ ಕೃತಿಯಾಗಿರದೆ ನೇಮಿಚಂದ್ರ ಸಿದ್ಧಾಂತಿದೇವ ಎಂಬ ಹೆಸರಿನ ಬೇರೊಬ್ಬ ಅಚಾರ್ಯರಿಂದ ರಚಿತವಾಗಿದೆಯೆಂದು ಸಿದ್ಧವಾಗುವುದು. ಹೀಗೆಯೇ 'ಭಾವನಾಸಾರ' ಟೀಕೆಯು ಗೊಮ್ಮಟ ಜಿನಮೂರ್ತಿ ಪ್ರತಿಷ್ಠಾಪಕ–ಅಜಿತಸೇನಾಚಾರ್ಯರ ಶಿಷ್ಯ ಚವುಂಡರಾಯನಿಂದ ರಚಿತವಾಗಿರದೆ, ಶ್ರೀಮಜ್ಜಿನಸೇನ ಭಟ್ಟಾರಕರ ಶಿಷ್ಯನಾದ ಮತ್ತು 'ಮಹಾರಾಜ' ಎನ್ನಿಸಿಕೊಂಡಿದ್ದ ಚಾವುಂಡರಾಯ ಎಂಬ ಹೆಸರಿನ ಬೇರೊಬ್ಬನಿಂದ ರಚಿತವಾಗಿದೆ ಎಂದು ತಿಳಿಯಬೇಕಾಗುವುದು. ಈ ಕೃತಿಯ ಸಂಪಾದಕ ಮಹೋದಯರು, ಹಿಂದೆ ಹೇಳಿರುವಂತೆ, ಎಲ್ಲ ಗಾಹೆಗಳಿಗೊ ಮೂಲ ಭಾವನಾಸಾರ ಟೀಕೆಯನ್ನೇ ಕೊಟ್ಟಿದ್ದಲ್ಲಿ ಪ್ರಸ್ತುತ ವಿಷಯವನ್ನು ಮತ್ತೂ ಹೆಚ್ಚಿನ ರೀತಿಯಿಂದ ಪರಿವೀಕ್ಷಣ ಮಾಡಲು ಅವಕಾಶವಾಗುತ್ತಿದ್ದಿತು.

ಜೈನತತ್ತ್ವದ ಅಧ್ಯಯನ ಮಾಡಬೇಕೆನ್ನುವವರಿಗೆ ದ್ರವ್ಯಸಂಗ್ರಹವು ಪ್ರವೇಶದ್ವಾರದಂತಿದೆ. ಜೈನ ಸಿದ್ಧಾಂತದನುಸಾರ, ಸಮಸ್ತ ಲೋಕವು ಜೀವ, ಪುದ್ಗಲ, ಧರ್ಮ ಅಧರ್ಮ, ಆಕಾಶ ಮತ್ತು ಕಾಲ ಎಂಬ ಆರು ದ್ರವ್ಯಗಳಲ್ಲಿ ಅಂತರ್ಗತವಾಗಿದೆ. ಇವುಗಳ ಸ್ವರೂಪದ ಸಂಗ್ರಹರೀತಿಯದಾದ ಕಥನ ಮಾಡುವ ಈ ಕೃತಿಯನ್ನು 'ದ್ರವ ಸಂಗ್ರಹ' ಎಂದು ಹೆಸರಿಸಲಾಗಿದೆ. ಅತ್ಯಂತ ಸರಳವಾಗಿ ಸಂಗ್ರಹವಾಗಿ ಜೈನ ಸಿದ್ಧಾಂತವನ್ನು ತಿಳಿಸುವ ಈ ಕೃತಿಯು ಜೈನಧರ್ಮೀಯರಲ್ಲಿ, ಅದರಲ್ಲಿಯೂ ದಿಗಂಬರ ಪಂಥದ ಜೈನರಲ್ಲಿ ಹೆಚ್ಚು ಪ್ರಚಾರದಲ್ಲಿದೆ. ಜೈನಪಾಠಶಾಲೆಗಳಲ್ಲಿ ಪ್ರಾಥಮಿಕಸ್ತರದ ಅಭ್ಯಾಸಕ್ಕೆ ಇದು ನಿಯತವಾದ ಪಠ್ಯಪುಸ್ತಕವಾಘಿದೆ. ಇದು ಪ್ರಾಕೃತ ಭಾಷೆಯಲ್ಲಿದೆ. ಪ್ರಾಕೃತದ

ಅಧ್ಯಯನವು ತೀವ್ರರೀತಿಯಿಂದ ಕುಂಠಿತವಾಗಿರುವುದರಿಂದ ಆಧುನಿಕಭಾಷೆಗಳ ಅನುವಾದಗಳ ಸಹಾಯದೊಡನೆ ಅರ್ಥಮಾಡಿಕೊಳ್ಳ ಬೇಕಾದ ಅಗತ್ಯವೇ ರ್ಪಟ್ಟಿದೆ. ಈ ಕಾರಣದಿಂದ ಉತ್ತರ ಭಾರತದಲ್ಲಿ ಹಿಂದೀ ಅನುವಾದವುಳ್ಳ ಕೃತಿಗಳು ಹೆಚ್ಚು ಪ್ರಚಾರದಲ್ಲಿವೆ. ಆಂಗ್ಲಭಾಷೆಯಲ್ಲಿ ಮುನ್ನುಡಿ– ಪ್ರಸ್ತಾವನೆ ಮತ್ತು ಟಿಪ್ಪಣಿಗಳಿಂದ ಕೂಡಿದ ಅನುವಾದ, ಕಾಮೆಂಟರಿ ಹಾಆಘೂ ಬ್ರಹ್ಮದೇವನ ಸಂಸ್ಕೃತ ವ್ಯಾಖ್ಯಾನ ಸಹಿತವಾಗಿ ಸಂಪಾದಿಸಿ ವಿದ್ಯಾಭೂಷಣ ಶ್ರೀ ಶರಚ್ಚಂದ್ರ ಘೋಷಾಲ್ ಅವರು 'ಬಿಬ್ಲಿ ಓಥೆಕಾ–ದಿ ಸೇಕ್ರೆಡ್ ಬುಕ್ಸ್ ಆಫ್ ದಿ ಜೈನಾಸ್' ಮಾಲೆಯಲ್ಲಿ ನಾಲ್ಕನೇ ವಾಲ್ಯೂಂ ಆಗಿ ಪ್ರಕಾಶಪಡಿಸಿದ್ದಾರೆ. ಮಾನ್ಯ ದಿ.ಎ. ಶಾಂತಿರಾಜಶಾಸ್ತ್ರಿಗಳವರಿಂದ ಕನ್ನಡ ಅನುವಾದ, ಟಿಪ್ಪಣಿ ಅನುವಾದ ಮತ್ತು ವಿಶೇಷ ವಿವರಣೆ ಸಹಿತ ಪ್ರಕಾಶಿತವಾಗಿರುವ ಈ ಕೃತಿಯು ವಿಶೇಷ ಮನ್ನಣೆ ಪಡೆದು ಹೆಚ್ಚಿನ ಪ್ರಚಾರದಲ್ಲಿದೆ. ಮೂಲ ಗ್ರಂಥವು ಸಂಗ್ರಹರೂಪದ್ದಾಗಿರುವುದರಿಂದ ಶ್ರೀ ಶಾಸ್ತ್ರಿಗಳವರು ಬ್ರಹ್ಮದೇವನ ಬೃಹದ್ದ್ರವ್ಯ ಸಂಗ್ರಹ ವ್ಯಾಖ್ಯಾನ, ಭಾವನಾಸಾರ, ಗೊಮ್ಮಟಸಾರ, ಸರ್ವಾರ್ಥಸಿದ್ಧಿ, ರಾಜವಾರ್ತಿಕ ಮೊದಲಾದ ಸಿದ್ಧಾಂತ ಗ್ರಂಥಗಳ ಸಹಾಯ ಪಡೆದು, ಸರಳರೀತಿಯಲ್ಲಿ ವಿಷಯ ವಿವರಣೆ ಮಾಡಿರುವುದು ಇದರ ವಹತ್ವವಾಗಿದೆ. ಶ್ರೀ ಶಾಸ್ತ್ರಿಗಳವರು ಇದಕ್ಕೆ ಅರ್ಥವತ್ತಾಗಿ 'ಜೈನಸಿದ್ಧಾಂತ ಸಂಗ್ರಹ' ಎಂಬ ಉಪನಾಮವಿತ್ತಿದ್ದಾರೆ.

ಗೊಮ್ಮಟಸಾರದ ರಚನೆಯ ಬಳಿಕ ಸುಮಾರು ಇನ್ನೂರು ವರ್ಷಗಳ ಅನಂತರ ಧವಲಾ, ಜಯಧವಲಾಗಳ ಅಧ್ಯಯನ ನಿಂತುಹೋಗಿ ಅದರ ಸ್ಥಾನವನ್ನು ಗೊಮ್ಮಟ ಸಾರವೇ ಪಡೆದುಕೊಂಡಿತೆಂದು ಕಂಡುಬರುತ್ತದೆ. ಈ ಕೃತಿಯ ರಚನೆಯಾದಬಳಿಕ ಸಿದ್ಧಾಂತದ ಇಷ್ಟು ಮಹತ್ವಪೂರ್ಣ ಕೃತಿ ಮತ್ತಾವುದೂ ರಚಿತವಾಘಲ್ಲವೆಂದೇ ಹೇಳಬೇಕಾಗುವುದು. ಇಷ್ಟಾದರೂ ಕರ್ಮಸಿದ್ಧಾಂತವನ್ನು ಕುರಿತು ಕೆಲವಾದರೂ ಕೃತಿಗಳು ರಚಿತವಾಗಿವೆಯೆಂದು ಹೇಳಲವಕಾಶವಿದೆ, ಇಂತಹವುಗಳಲ್ಲಿ ಒಂದೆರಡು ಕೃತಿಗಳ ಬಗ್ಗೆ ಇಲ್ಲಿ ಪರಿಚಯ ಕೊಡಬೇಕಾಗಿದೆ.

'ಕರ್ಮಪ್ರಕೃತಿ'–ಈ ಕೃತಿಯ ಬಗ್ಗೆ ಮಾನ್ಯ ಜುಗುಲ್ ಕಿಶೋರ್ ಮುಖ್ತಾರ್ ಅವರು ಹೇಳಿರುವುದರ ಸಾರಾಂಶವನ್ನು ಹಿಂದೆ ತಿಳಿಸಿದೆ. ಇಷ್ಟಾದರೂ ಇದರ ಬಗ್ಗೆ ಅನ್ಯತ್ರ ಕಂಡುಬರುವ

ಸಂಗತಿಗಳನ್ನು ಹೇಳಬೇಕಾದ ಅಗತ್ಯವಿದೆ. ಶ್ರವಣ ಬೆಳಗುಳದ ಶಾಸನದಲ್ಲಿ (೭೭/೬೭/೫೪) ಚಂದ್ರಕೀರ್ತಿಗಣಿ ಎಂಬುವರ ಬಗ್ಗೆ "....ತಂವಾಚಾರ್ಚತ ಚಂದ್ರಕೀರ್ತಿಗಣಿನಂ ಚಂದ್ರಾಭಕೀರ್ಂ ಬುಧಾಃ ॥ ಸದ್ಧರ್ಮಕರ್ಮ ಪ್ರಕೃತಿ ಪ್ರಣಾ ಮಾದ್ಯಸ್ಯೋಗ್ರ ಕರ್ಮಪ್ರಕೃತಿ ಪ್ರಮೋಕ್ಷಃ । ತನ್ನಾಮ್ನಿ ಕರ್ಮಪ್ರಕೃತಿಂ ನಮಾಮೋ ಭಟ್ಟಾರಕಂ ದೃಷ್ಟ ಕೃತಾನ್ತಪಾರಂ" ಎಂದು ಹೇಳಿದೆ. ಇದು ಚಂದ್ರಕೀರ್ತಿಗಣಿ ಭಟ್ಟಾರಕರಿಂದ ರಚಿತವಾಗಿರಬಹುದಾದ 'ಕರ್ಮಪ್ರಕೃತಿ' ಕೃತಿಯ ಸೂಚಕವಾಗಿದೆ.

ಹಿಂದೆ ಪ್ರಸ್ತಾವಿಸಿರುವ ಮಾನ್ಯ ಟಿ.ಸಿ. ಬ್ರಹ್ಮಸೂರಯ್ಯ ಅವರ ಕನ್ನಡ ಭಾವಾನುವಾದದೊಡನೆ ಪ್ರಕಾಶಿತವಾಗಿರುವ ಗೊಮ್ಮಟಸಾರದ ಪರಿಶಿಷ್ಟ-೧, ಪುಟ ೭೦ರಲ್ಲಿ ಅಭಾಯಚಂದ್ರರಚಿತ ಕರ್ಮಪ್ರಕೃತಿಯ(೫೫,೫೬ ಮತ್ತು ೫೭ನೆಯವಾದ) ಮೂರು ಸೂತ್ರಗಳನ್ನು ಉಲ್ಲೇಖಿಸಿದೆ. ಈ ಸೂತ್ರಗಳು ಪುಂವೇದ, ಸ್ತ್ರೀವೇದ ಮತ್ತು ನಪುಂಸಕ ವೇದಗಳ ಲಕ್ಷಣವನ್ನು ನಿರೂಪಿಸುತ್ತವೆ.[೩೪] ಕರ್ಮಪ್ರಕೃತಿಯ ಕರ್ತೃವೆಂದು ಹೆಸರಿಸಲಾಗಿರುವ ಅಭಯಚಂದ್ರರು ಯಾರು ಎಂಬುದನ್ನು ಖಚಿತರೀತಿಯಿಂದ ಗುರುತಿಸಲು ಸಾಧ್ಯವಿಲ್ಲವಾಗಿದೆ. ಅಭಯಚಂದ್ರಾಚಾರ್ಯ ಎಂಬುವರು ಗೊಮ್ಮಟ ಸಾರಕ್ಕೆ 'ಮಂದಪ್ರಬೋಧಿಕಾ' ಟೀಕೆ ಬರೆದಿರುವ ಸಂಗತಿಯನ್ನು ಹಿಂದೆ ಹೇಳಿದೆ. ಇವರಿಂದ ಈ ಹೇಳಿದ 'ಕರ್ಮಪ್ರಕೃತಿ'ಯು ರಚಿತವಾಗಿರುವ ಸಂಭವವಿದೆ. ಕ್ರಿ.ಶ.೧೨೭೯ರ ಶ್ರ.ಬೆ. ಶಾಸನದಲ್ಲಿ (೨೬೦/೨೫೪.೧೦೫) ಮಾಘನಂದಿಯವರ ಬಳಿಕ ಒಬ್ಬ ಅಭಯಚಂದ್ರರನ್ನು ಹೆಸರಿಸಿದೆ. ಸೈದ್ಧಾಂತಿಕ ಗ್ರಂಥಗಳ ರಚನಾಕಾರರಾದ ಶ್ರುತ ಮಿನಿಯು ಇವರ ಶಿಷ್ಯರು. ಈ ಅಭಯಚಂದ್ರರು 'ಮಂದಪ್ರಬೋಧಿಕಾ' ಟೀಕಾ ರಚನಕಾರ ಆಭಯಚಂದ್ರರಿಂದ ಅಭಿನ್ನರಾಗಿರಬಹುದಾದ ಸಂಭವವಿದೆ.[೩೬] ಈ ಮೇಲೆ ಹೇಳಿದ ಸಂಸ್ಕೃತ ಭಾಷೆಯ ಸೂತ್ರಗಳನ್ನೊಳಗೊಂಡ 'ಕರ್ಮಪ್ರಕೃತಿ' ಯಲ್ಲಿದೆ ಕನ್ನಡ ಬಾಷೆಯಲ್ಲಿ ಒಂದು 'ಕರ್ಮಪ್ರಕೃತಿ' ಗ್ರಂಥವಿದೆ.

ಇದರ ಪ್ರಾರಂಭದ ಸಂಸ್ಕೃತಿ ಮಂಗಲಶ್ಲೋಕ ಮುಂದಿನಂತಿದೆ-

ಶ್ರೀವರ್ಧಮಾನಮಾನಂಯ ಸ್ಪಷ್ಟಾನಂತಚತುಷ್ಟಯಂ।
ವಿಶುದ್ಧಂ ಜ್ಞಾನಸಿದ್ಧ್ಯರ್ಥಂ ಕರ್ಮಣಾಂ ಪ್ರಕೃತಿಂಬ್ರುವೇ ॥

ಮುಂದೆ "ಆತ್ಮಪ್ರದೇಶದೊಳು ಕಟ್ಟಿದ ಕರ್ಮಂ ದ್ರವ್ಯ-ಭಾವ-ನೋಕರ್ಮ ಭೇದದಿಂ ತ್ರಿವಿಧಮಕ್ಕು" ಎಂದು ಹೇಳಿ ಅನಂತರ ಈ ತ್ರಿವಿಧ ಕರ್ಮಗಳ ವಿಸ್ತೃತ ವಿವರಣೆ ಮಾಡಿದೆ. ಗ್ರಂಥವು ಕೊನೆಯಲ್ಲಿ ಸಿದ್ಧಸ್ವರೂಪದ ವಿವರಣೆ ಬಳಿಕ "ವರ್ಧತಾಂ ಜೈನ ಶಾಸನಂ- ಶ್ರೀ ವರ್ಧಮಾನಾಯ ನಮಃ- ಕರ್ಮಪ್ರಕೃತಿಃ ಸಮಾಪ್ತಾ- ಮಂಗಲ ಮಹಾ" ಎಂಬ ವಾಕ್ಯಗಳೊಡನೆ ಕೊನೆಗೊಂಡಿದೆ.

ಶ್ವೇತಾಂಬರ ಸಾಹಿತ್ಯದಲ್ಲಿ 'ಕರ್ಮಪ್ರಕೃತಿ' ಎಂಬ ಹೆಸರಿನ ಪ್ರಸಿದ್ಧವಿದೆ. ಇದರ ಕರ್ತೃ 'ಶಿವಶರ್ಮಸೂರಿ' ಎಂದು ಹೇಳಲಾಗಿದೆ. ಆದರೆ ಇವರ ಕಾಲ ಮುಂತಾದ ಸಂಗತಿಗಳ ಬಗ್ಗೆ ಇದುವರೆಗೆ ಹೆಚ್ಚಿನದಾದ ಮಾಹಿತಿ ಲಭ್ಯವಾಗಿಲ್ಲ ಇವರು ಪೂರ್ವ(ಶ್ರುತ) ಧರರಾಗಿದ್ದರೆಂದು ಮತ್ತು ಆಗಮೋದ್ಧಾರಕ ದೇವರ್ಧಿಗಣಿ ಯವರಿಂದ ಹಿಂದಿನಕಾಲದವರೆಂಬ ಮತ್ತು ವಿಕ್ರಮಶಕೆ ೫ನೇ ಶತಮಾನದವರೆಂಬ ತರ್ಕವಿದೆ. ಈ ಕೃತಿಯಲ್ಲಿ ೪೭೫ ಗಾಹೆಗಳಿವೆ. ಮೊದಲ ಗಾಥೆಯಲ್ಲಿ ಗ್ರಂಥಕರ್ತೃವು ಎಂಟು ಕರಣಗಳ ಹಾಗೂ ಉದಯ ಮತ್ತು ಸತ್ವಗಳ ವರ್ಣನೆ ಮಾಡುವುದಾಗಿ ಪ್ರತಿಜ್ಞೆ ಮಾಡಿದ್ದಾರೆ. ಮತ್ತು ಉಪಾಂತ್ಯ ಗಾಥೆಯಲ್ಲಿ 'ನಾನು ಅಲ್ಪಬುದ್ಧಿಯವನಾಗಿದ್ದೂ ನಾನು ಕೇಳಿಸಿಕೊಂಡಿರುವಂತೆ ( ಉಪದೇಶ ಪಡೆದಿರುವಂತೆ) ಯಥಾವತ್ತಾಗಿ ಕರ್ಮಪ್ರಕೃತಿ ಪ್ರಾಭೃತದಿಂದ ಈ ಗ್ರಂಥದ ಉದ್ಧಾರ ಮಾಡಿದ್ದೇನೆ. ದೃಷ್ಟಿವಾದ ಜಜ್ಞಾತೃಗಳು, ಇದರಲ್ಲಿರ್ಬಹುದಾದ ದೋಷಪೂರ್ಣ ಅಂಶಗಳನ್ನು ಪರಿಹರಿಸಿ ಹೇಳಬೇಕು' ಎಂದು ಪ್ರಾರ್ಥಿಸಿದ್ದಾರೆ. ಟೀಕಾಕಾರ ಶ್ರೀ ಮಲಯಗಿರಿಯವರ ಹೇಳಿಕೆಯಂತೆ, ಆಗ್ರಾಯಣೀಯಪೂರ್ವದ ಪಂಚಮ ವಸ್ತುವಿನಲ್ಲಿ ಅಂತರ್ಗತವಾಗಿರುವ 'ಕರ್ಮಪ್ರಕೃತಿ' ಎಂಬ ನಾಲ್ಕನೇ ಪ್ರಾಭೃತ(ದ ಆಧಾರ) ದಿಂದ ಈ ಪ್ರಕರಣವನ್ನು ರಚಿಸಲಾಗಿದೆ. ಈ ಕರ್ಮಪ್ರಕೃತಿಯ ಕೆಲವು ಗಾಹೆಗಳು ಮತ್ತು ಕಷಾಯಪಾಹುಡದ ಕೆಲವು ಗಾಹೆಗಳು ಸಮಾನತೆಯುಳ್ಳವಾಗಿವೆ. ಈ ಕರ್ಮಪ್ರಕೃತಿಯ 'ಸಂಕ್ರಮಕರಣ' ಅಧಿಕಾರದಲ್ಲಿ, ಕಷಾಯ ಪ್ರಾಭೃತದ 'ಬಂಧಕ' ಮಹಾಧಿಕಾರದಲ್ಲಿ ಅಂತರ್ಗತವಾಗಿರುವ ಸಂಕ್ರಮ ಅನುಯೋಗದ್ವಾರದ ೧೩ ಗಾಹೆಗಳು ಅನುಕ್ರಮ ರೀತಿಯಲ್ಲಿ ಕಂಡುಬರುತ್ತವೆ. ಕಷಾಯ ಪ್ರಾಭೃತದಲ್ಲಿ ಇವುಗಳ ಕ್ರಮ ಸಂಖ್ಯೆ ೨೭ ರಿಂದ ೩೯ ಆಗಿದೆಯಾದರೆ, ಕರ್ಮಪ್ರಕೃತಿಯಲ್ಲಿ

೧೧೨ರಿಂದ ೧೨೪ ಪರ್ಯಾಂತದ ಸಂಖ್ಯೆಯವಾಗಿವೆ. ಹೀಗೆಯೇ ಕರ್ಮಪ್ರಕೃತಿಯ ಸರ್ವೋಪಶಮನಾ ಪ್ರಕರಣದ ೩೩೫ ರಿಂದ ೩೩೮ರ ಪರ್ಯಂತದ ನಾಲ್ಕು ಗಾಹೆಗಳು ಕಷಾಯ ಪ್ರಾಭೃತದ ೧೦೦, ೧೦೩, ೧೦೪ ಮತ್ತು ೧೦೫ನೇ ಗಾಹೆಗಳೊಡನೆ ಸಮಾನತೆ ಹೊಂದಿವೆ. ಈ ಎರಡು ಗ್ರಂಥಗಳಲಿಯೂ ಈ ಹೇಳಿದ ಗಾಥೆಗಳ ಕೆಲವು ಪದಗಳು ಮತ್ತು ಶಬ್ದಗಳಲ್ಲಿ ವ್ಯತಿಕ್ರಮ ಹಾಗೂ ಅಂತರವೂ ಕಂಡು ಬರುತ್ತದೆ. ಕೆಲವು ಸಂದರ್ಭಗಳಲ್ಲಿ ಈ ಅಂತರವು ಸೈದ್ಧಾಂತಿಕ ಭೇದದ ನಿಮಿತ್ತವನ್ನು ಹೊಂದಿರುವಂತೆಯೂ ಕಂಡು ಬರುತ್ತದೆ. ಉದಾಹರಣೆಯಾಗಿ ಕಷಾಯಪಾಹುಡದ ೩೨ನೇ ಗಾಹೆಯ ಕೊನೆಯ ಪಾದ 'ವಿರದೇ ಮಿಸ್ಸೇ ಅವಿರದೇಯ' ಎಂದಿದೆಯಾದರೆ ಕರ್ಮಪ್ರಕೃತಿಯಲ್ಲಿ ಇದೇ ಗಾಹೆಯ ಅಂತಿಮ ಚರಣವು 'ಣಿಯಮಾ ದಿಟ್ಠೀಕಏ ದುವಿಹೇ' ಎಂದಿದ, ಹೀಗೆಯೇ ಕಷಾಯ ಪ್ರಾಭೃತದ ೩೪ನೇ ಗಾಹೆಯ ಅಂತಿಮ ಚರಣವು 'ಛಕ್ಕೇ ಪಣಏ ಚ ಬೊದ್ಧವ್ವಾ' ಎಂದಿದೆಯಾದರೆ ಕರ್ಮಪ್ರಕೃತಿಯ ಇದೇ ಗಾಹೆಯ ಅಂತಿಮ ಚರಣವು ಸತ್ತಗೇ ಛಕ್ಕ ಪಣಗೇ ವಾ' ಎಂದಿದೆ.

ಪಂಚಸಂಗ್ರಹ– ಇದು ಗೊಮ್ಮಟಸಾರದಂತೆ ಒಂದು ಉತ್ತಮ ಸಂಗ್ರಹ ಗ್ರಂಥ. ಗೊಮ್ಮಟಸಾರಕ್ಕೂ 'ಪಂಚಸ್ಮಗ್ರಹ' ಎಂಬ ಹೆಸರಿದೆ. ಪ್ರಸ್ತುತ ಪಂಚಸಂಗ್ರಹವು ಜೀವಸ್ವರೂಪ, ಪ್ರಕೃತಿ ಸಮುತ್ಕೀರ್ತನ, ಕರ್ಮಸ್ರವ, ಶತಕ ಮತ್ತು ಸಪ್ರತಿಕಾ ಎಂಬ ಐದು ಅಧಿಕಾರ್ಲಗಳುಳ್ಳದ್ದಾಗಿದೆ. ಇದರಲ್ಲಿ ಹೆಚ್ಚು ಕಡಿಮೆ ೧೫೦೦ ಗಾಹೆಗಳಿವೆ. ಕೆಲವೆಡೆ ಗದ್ಯಭಾಗಗಳೂ ಇವೆ. ಗ್ರಂಥ ಕರ್ತೃವಿನ ಹೆಸರಾಗಲಿ, ರಚನೆಯ ಕಾಲವಾಗಲಿ ಗ್ರಂಥದಲ್ಲಿ ಸೂಚಿತವಾಗಿಲ್ಲ. ಇದಕ್ಕೆ ಸುಮತಿಕೀರ್ತಿಯವರ ಸಂಸ್ಕೃತ ಟೀಕೆ ಇದೆ ಮತ್ತು ಅನಾಮಕ ಟಿಪ್ಪಣಿಯೂ ಇದೆ. ಅನೇಕಾಂತ– ವರ್ಷ ೩, ಕಿರಣ ೩ರಲ್ಲಿ ಪ್ರಕಾಶಿತವಾಗಿರುವ 'ಅತಿ ಪ್ರಾಚೀನ ಪ್ರಾಕೃತ ಪಂಚಸಂಗ್ರಹ' ಪ್ರಬಂಧದಲ್ಲಿ ಪಂಪರಮಾನಂದಜೀ ಶಾಸ್ತ್ರಿಯವರು, ಬೊಂಬಾಯಿಯ ಶ್ರೀ ಐಲಕ ಪನ್ನಾಲಾಲ್ ಸರಸ್ವತೀ ಭವನದ, ಸಂವತ್ ೧೫೨೭, ಮಾಘ ಕೃಷ್ಣ ೩, ಗುರುವಾರ ಟಂಬಕ ನಗರದಲ್ಲಿ ಬರೆಯಲಾಗಿರುವ, ೬೨ ಪತ್ರಗಳ ಹಸ್ತಪ್ರತಿಯಾಧಾರದಿಂದ ಪರಿಚಯಿಸಿರುವಂತೆ, ಇದು

ಅಧಿಕಾಂಶದಿಂದ ಹನ್ನೆರಡನೆಯದಾದ ದೃಷ್ಟಿವಾದಾಂಗದ ಆಧಾರದಿಂದ ರಚಿತವಾಗಿದ. ಮುಂದಿನ ಗಾಹೆಗಳನ್ನು ಉಲ್ಲೇಖಿಸಿ ಇದರ ಬಹು ಪ್ರಾಚೀನತೆಯನ್ನೂ ವ್ಯಕ್ತಪಡಿಸಿದ್ದಾರೆ.

ಸುಣಹ ಇಹ ಜೀವಗುಣಸನ್ನಿಹೀಸು ಠಾಣೇಸು ಸಾರಜುತ್ತಾಓ।
ವೊಚ್ಛಂ ಕದಿವ ಇಯಾಓ ಮಾಹಾಓ ದಿಟ್ಟಿವಾದಾಓ ॥೪–೩॥
ಸಿದ್ಧಪದೇಹಿಂ ಮಹತ್ಥಂ ಬಂಧೋದಯ–ಸತ್ತ–ಪಯಡಿ–ಠಾಣಾಣಿ।
ವೊಚ್ಛಂ ಪುಣ ಸಂಖೇವೇಣ ಣಿಸ್ಸಿದಂ ದಿಟ್ಟಿವಾದಾಚ॥೫೨॥

ಇದಲ್ಲದೆ, ತುಲನಾತ್ಮಕ ಪರಿಶೀಲನೆಯೊಡನೆ, "ವೀರಸೇನಾಚಾರ್ಯರ ಧವಲಾ ಟೀಕೆಯಲ್ಲಿ 'ಉಕ್ತಂ ಚ' ಎಂಬ ಪೀಠಿಕಾ ವಾಕ್ಯದೊಡನೆ ಕಾಣೇಸಿರುವ ಅನೇಕ ಗಾಹೆಗಳು ಈ ಕೃತಿಯಿಂದ ಉದ್ಧೃತವಾದವುಗಳೆಂದು ನಿರ್ದೇಶಿಸಿದ್ದಾರೆ. ಇವುಗಳಲ್ಲಿ ೧೦೦ ಗಾಹೆಗಳು ಧವಲಾದಿಂದ ಗೊಮ್ಮಟಸಾರದಲ್ಲಿ ಸಂಗ್ರಹಿಸಲಾಗಿರುವುದನ್ನು ಧವಲಾದ ಸತ್ಪ್ರರೂಪಣಾ ವಿಷಯಕ ಪ್ರಥಮ ಅಂಶದ ಪ್ರಸ್ತಾವನೆಯಲ್ಲಿ ಮಾನ್ಯ. ಪ್ರೊ. ಹೀರಾಲಾಲ್ ಜೈನ್ ಅವರು ಪ್ರಸ್ತುತಪಡಿಸಿದ್ದಾರೆ. ಈ ಗಾಹೆಗಳು ಗೊಮ್ಮಟಸಾರ ದಲ್ಲಿ ಸ್ವಲ್ಪ ಪಾಠಭೇದದೊಡನೆ ಇರುವುದಾದರೆ ಪಂಚಸಂಗ್ರಹದಲ್ಲಿ ಪ್ರಾಯಿಕವಾಗಿ ಯಥಾವತ್ತಾಗಿ ಲಬ್ಧವಾಗುವುವು. ಇದರಿಂದ ಆಚಾರ್ಯವೀರಸೇನರ ಸಂ ಮುಖದಲ್ಲಿ ನಿಶ್ಚಿತವಾಗಿ ಪಂಚಸಂಗ್ರಹವಿದ್ದಿತು ಮತ್ತು ಈ ಹೇಳಿದ ಗಾಹೆಗಳನ್ನು ಇದರಿಂದಲೇ ಅವರು ಉದ್ಧೃತಗೊಳಿಸಿಋುವರೆಂದು ಫಲಿತವಾಗುವುದು; ಧವಲಾಟೀಕೆಯು ಶಕ ಸಂ. ೭೩೮ ರಲ್ಲಿ ಸಮಾಪ್ತವಾಘಿದೆಯಾದ್ದರಿಂದ ಪಂಚಸಂಗ್ರಹವು ಈ ಕಾಲಕ್ಕಿಂತ ನಿಶ್ಚಿತವಾಗಿ ಪೂರ್ವಕಾಲೀನವಾದುದೆಂದೂ ಫಲಿತವಾಗುವುದು" ಎಂದು ಹೇಳಿದ್ದಾರೆ. ಆದರೆ ಈ ಫಲಿತಾರ್ಥದ ಸಂಭಾವ್ಯತೆಯನ್ನು ನಿಸ್ಸಂದಿಗ್ಧ ಆಧಾರ ಪ್ರಮಾಣದ ಅಭಾವದ ಕಾರಣದಿಂದ ಮಾನ್ಯ ಜುಗಲ್ ಕಿಶೋರ್ ಮುಖ್ತಾರ್ ಅವರು ಪ್ರಶ್ನಿಸಿದ್ದಾರೆ.

ಪಂಚಸಂಗ್ರಹದ ಪ್ರಾಚೀನತೆಯನ್ನು ಸಾಕ್ಷೀಕರಿಸುವ ಮತ್ತೊಂದು ಆಧಾರವನ್ನು ಮುಂದಿಡಲಾಗಿದೆ. ಆಚಾರ್ಯ ಮೂಜ್ಯಪಾದರು ತಮ್ಮ 'ಸರ್ವಾರ್ಥಸಿದ್ಧಿ' ಯಲ್ಲಿ ತತ್ತ್ವಾರ್ಥಸೂತ್ರ ೧–೧೯ನೇ ಸೂತ್ರದ ವ್ಯಾಖ್ಯಾನ ಮಾಡುತ್ತಾ ಚಕ್ಷು ಇಂದ್ರಿಯದ ಅಪ್ರಾಪ್ಯಕಾರಿತ್ವದ ಸಿದ್ಧಿಗಾಗಿ ಆಗಮ

ಪ್ರಾಮಾನ್ಯವೆನಿಸಿ “ಪುಟ್ಠಂ ಸುಣೇಇ ಸದ್ದಂ ಅಪುಟ್ಟಂ ಪುಣ ಪಸ್ಸದೇ ರೂವಂ, ಘಾಸಂ ರಸಂ ಚ ಗಂಧಂ ಬದ್ಧಂ ಪುಟ್ಟಂ ವಿಯಾಣಾದಿ’ ಗಾಹೆಯನ್ನು ಉಲ್ಲೇಖಿಸಿದ್ದಾರೆ. ಇದು ಪಂಚಸಂಗ್ರಹದ ಗಾಹೆ. ಪೂಜ್ಯಪಾದರು ವಿಕ್ರಮಸಂ. ೬ನೇ ಶತಮಾನಕ್ಕಿಂತ ಹಿಂದಿನವರಾಗಿದ್ದಾರಾಗಿ ಪಂಚ ಸಂಗ್ರಹವು ಈ ಕಾಲಕ್ಕಿಂತ ಹಿಂದಿನದಾಗಿರಬೇಕೆಂಬ ವಾದವಿದೆ. ಇದಕ್ಕೆ ಪ್ರತಿಯಾಗಿ, ಪೂಜ್ಯಪಾದರು ಸ್ಪಷ್ಟವಾಗಿ ಈ ಗಾಹೆಯು (ಆಗಮಸ್ತಾವತ್) ಆಗಮದ್ದು ಎಂದು ಹೇಳಿದ್ದಾರೆ; ಪಂಚಸಂಗ್ರಹವನ್ನು ಹೆಸರಿಸಿಲ್ಲ, ಆದ್ದರಿಂದ ಯಾವುದಾದರೊಂದು ಆಗಮದ ಗಾಹೆಯಾಗಿರಬೇಕಲ್ಲದೆ, ಸಂಗ್ರಹರೂಪದ್ದಾದ ಪಂಚಸಂಗ್ರಹದ್ದಾಗಿರಲಾರದೆಂಬ ವಾದವನ್ನಿರಿಸಲಾಗಿದೆ.

ಪಂಚಸಂಗ್ರಹದ ಗರಿಷ್ಠಕಾಲದ ನಿರ್ಣಯವೆನಿಸಿ ಮುಂದಿನ ವಾದವನ್ನು ಮಂಡಿಸಿದೆ; ಗುಣಧರಾಚಾರ್ಯರ ಕಷಾಯಪ್ರಾಭೃತದ ೯೧, ೧೦೬, ೧೯೯ನೇ ಗಾಹೆಗಳು ಪಂಚಸಂಗ್ರಹದ ಪ್ರಥಮ ಅಧಿಕಾರ ದರ್ಶನಮೋಹದ ಉಪಶಮ ಮತ್ತು ಕ್ಷಪಣಾ ವಿಷಯಕ ಗಾಹೆಗಳಾಗಿ ಸಂಗ್ರಹೀತವಾಗಿವೆ, ಗುಣಧರರು ಪೂರ್ವ ಶ್ರುತಜ್ಞರಾಗಿದ್ದರು ಮತ್ತು ಅವರ ಈ ಕೃತಿಯ ರಚನೆಯು ಹಿಂದೆ ಹೇಳೀರುವಂತೆ, ಜ್ಞಾನ ಪ್ರವಾದ ಪೂರ್ವದ ಅಂಶದಾಧಾರದಿಂದಾಗಿದೆ, ಮತ್ತಾವ ಆಧಾರದಿಂದಲ್ಲ. ಆದ್ದರಿಂದ ಇದರಿಂದಲೇ ಈ ಹೇಳಿದ ಗಾಹೆಗಳನ್ನು ಪಂಚಸಂಗ್ರಹದಲ್ಲಿ ಸಂಗ್ರಹಿಸಲಾಗಿದೆ ಕಷಾಯ ಪ್ರಾಭೃತದ ರಚನೆಯ ವಿಕ್ರಮ ಸಂ. ೧ನೇ ಶತಮಾನದದಿಂದ ಈ ಚಿನದಾಗಲಾರದಾದ ಕಾರಣ ಪಂಚಸಂಗ್ರಹದ ರಚನೆಯ ಗರಿಷ್ಠ ಕಾಲವನ್ನು ವಿಕ್ರಮ ಶಕೆಯ ೧ನೇ ಶತಮಾನದ ಅನಂತರವರ್ತಿಯಾದುದನ್ನಾಗಿ ಮಾಡಬಹುದು. ಆದರೆ ಎಷ್ಟು ಕಾಲ ಈಚೆಗೆ ಎಂಬುದನ್ನು ವಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಇಷ್ಟಾದರೂ ಪಂಚಸಂಗ್ರವು ವಿಕ್ರಮ ಸಂವತ್ ೧೦೭೩ಕ್ಕಿಂತ ಈಚಿನದಾಗಿಲ್ಲವೆಂದು ಖಚಿತವಾಗಿ ಹೇಳಬಹುದು, ಕಾರಣ; ಈ ಸಂವತ್ಸರದಲ್ಲಿ ಪ್ರಾಕೃತ ಪಂಚಸಂಗ್ರಹದಾಧಾರದಿಂದ ಆಚಾರ್ಯ ಅಮಿತಗತಿಯವರು ಸಂಸ್ಕೃತ ಪಂಚಸಂಗ್ರಹದ ರಚನೆಮಾಡಿದ್ದಾರೆ. ಈ ರೀತಿಯಾಗಿ ಪ್ರಾಕೃತ ಪಂಚಸಂಗ್ರಕ್ಕೆ ಸಂಸ್ಕೃತರೂಪ ಕೊಡುವಷ್ಟು ಅದರ ಪ್ರಸಿದ್ಧಿಯಾಗಲು ( ಆ ಕಾಲದ ಅಪೇಕ್ಷೆಯಿಂದ) ಅದರ ರಚನೆಯಾಗಿ ಸುಮಾರು ೫೦ ವರ್ಷಗಳಷ್ಟಾದರೂ ಕಳೆದಿರಬೇಕು. ಈ ಗಣನೆಯಂತೆ ಇದು, ವಿಕ್ರಮ ಸಂ. ೧೦೩೫ರ ಬಳಿಕ

ರಚನಎಯಾಗಿರುವ ಗೊಮ್ಮಟಸಾರಕ್ಕಿಂತ ಪೂರ್ವಭಾವಿಯಾಗಿ ರಚಿತವಾಗಿದೆಯೆಂದು ಮತ್ತು ವಿಕ್ರಮ ೧೧ನೇ ಶತಾಬ್ದಿಗಿಂತ ಪೂರ್ವಕಾಲೀನವಾದುದೆಂದು ತಿಳಿಯಬಹುದು, ಅದರೆ ಎಷ್ಟು ವರ್ಷಗಳಿಂದ ಪೂರ್ವಕಾಲೀನ ಎಂಬುದನ್ನು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಇಷ್ಟಾದರೂ, ಇದು ವಿಕ್ರಮ ೧ನೇ ಶತಮಾನ ಮತ್ತು ೧೦ನೇ ಶತಮಾನಗಳ ಅಂತರ ಸಮಯದಲ್ಲಿ ರಚಿತವಾಗಿದೆ ಎಂದು ಹೇಳಬಹುದು.

ಈ ಕೃತಿಯ ಕಾಲ ನಿರ್ಣಯದ ಬಗ್ಗೆ ಪ್ರಸ್ತಾವಿತವಾಗಿರುವ ಮತ್ತೂ ಒಂದುವಾದವನ್ನು ಇಲ್ಲಿ ಪರಿಗಣನೆ ಮಾಡಬೇಕಾಗಿದೆ; ಕರ್ಮಸ್ತವ, ಶತಕ, ಮತ್ತು ಸಪ್ತತಿಕಾ ಎಂಬುವು ಈ ಗ್ರಂಥದ ಕೊನೆಯ ಮೂರು ಅಧಿಕಾರಗಳು, ಪ್ರತ್ಯೇಕವಾಗಿ ಇದೇ ಹೆಸರನ್ನು ಹೊಂದಿರುವ ಗ್ರಂಥಗಳು ಶ್ವೇತಾಂಬರ ಸಂಪ್ರದಾಯದಲ್ಲಿ ಉಪಲಬ್ಧವಿವೆ. ಇವುಗಳಲ್ಲಿ ಅನುಕ್ರಮವಾಗಿ ೫೫,೧೦೦ ಅಥವಾ ೧೦೮,೭೫ ಗಾಹೆಗಳಿವೆ. ಹಾಗೂ ಬಂಧ ವಿಷಯ ಕಥನದ ಪ್ರಾಧಾನ್ಯತೆ ಹೊಂದಿರುವ ಶತವನ್ನು 'ಬಂಧಶತಕ' ವೆಂದೂ ಕರೆಯಲಾಗಿದೆ, ಮತ್ತು ಇದು, ಕರ್ಮಪ್ರಕೃತಿರಚನಕಾರ, ಶಿವಶರ್ಮಸೂರಿಯವರ ಕೃತಿಯೆಂದು, ಕರ್ಮಸ್ತವವನ್ನು ಎರಡನೆಯ ಪ್ರಾಚೀನ ಕರ್ಮಗ್ರಂಥವೆಂಬುದಾಗಿ ಹಾಗೂ ಇದು ಚಂದ್ರರ್ಷಿರಚಿತ ಕೃತಿಯಾಗಿಯೆಂದು ಹೇಳಲಾಗಿದೆ. ಶ್ವೇತಾಂಬರ ಸಂಪ್ರದಾಯದ ಈ ಕೃತಿಗಳನ್ನು ಪಂಚಸಂಗ್ರಹದೊಡನೆ ತುಲನೆ ಮಾಡುತ್ತಾ ಪಂ. ಪರಮಾನಂದಜೀ ಶಾಸ್ತ್ರಿಯವರು, ಅನೇಕಾಂತ-ವರ್ಷ ೩, ಕಿರಣ ೩ರಲ್ಲಿ 'ಶ್ವೇತಾಂಬರ ಕರ್ಮಸಾಹಿತ್ಯ ಔರ್ ಪಂಚ ಸಂಗ್ರಹ' ಎಂಬ ಲೇಖನ ಬರೆದಿದ್ದಾರೆ ಇದರಲ್ಲಿ ಕೆಲವು ಪ್ರಮಾಣಗಳು ಹಾಗೂ ಊಹಾಪೋಹಗಳೊಡನೆ, ಬಂಧಾಶತಕವು, ವಿಕ್ರಮಶಕೆ ೫ನೆ ಶತಮಾನದವರೆನ್ನಲಾದ, ಶಿವಶರ್ಮರ ಕೃತಿಯಲ್ಲ, ಮತ್ತು ಸಪ್ತತಿಯು ಚಂದ್ರರ್ಷಿಯವರ ಕೃತಿಯಲ್ಲ ಎಂದು ಹೇಳಿದ್ದಾರೆ. ಇದಲ್ಲದೆ ಈ ಮೂರೂ ಕೃತಿಗಳಲ್ಲಿ ಕಂಡು ಬರುವ ಕೆಲವು ಅಸಂಗತತೆ, ವಿಶ್ರಂಖಲತೆ ಮತ್ತು ವಿಚ್ಛಿತ್ತಿಗಳನ್ನು ಕಾಣಿಸುತ್ತಾ ಗಾಥಾ ಸಂಖ್ಯೆಗಳ ಸಹಿತ, ಪಂಚ ಸಂಗ್ರಹದ ಶತಕ ಪ್ರಕರಣದ ೩೦೦ ಗಾಥೆಗಳಲ್ಲಿ ೯೪ ಗಾಥೆಗಳು ಬಂಧಶತಕದಲ್ಲಿ( ಪಂ. ಸಂ. ದ) ಕರ್ಮಾಸ್ತವ ( ಪ್ರಕರಣ) ದ ೭೮ ಗಾಹೆಗೆಳಲ್ಲಿ ,೫೩ ಹಾಗೂ ಪ್ರಕೃತಿ ಸಮುತ್ಕೀರ್ತನದ ೨ ಗಾಹೆಗಳು ಹೀಗೆ, ಒಟ್ಟು ೫೫ ಗಾಹೆಗಳು ಕರ್ಮಾಸ್ರವ ಗ್ರಂಥದಲ್ಲಿ, ಮತ್ತು ( ಪಂ. ಸಂ. ದ) ಸಪ್ತತಿಕಾ ಪ್ರಕರಣದ ಕೆಲವು ನೂರರಷ್ಟು ಗಾಹೆಗಳಲ್ಲಿ ೫೧

ಗಾಹೆಗಳು ಸಪ್ತತಿಕಾ ಗ್ರಂಥದಲ್ಲಿ ಸ್ವಲ್ಪ ಮಾತ್ರದ ಪಾಠಭೇದ, ಮಾನ್ಯತಾ ಭೇದ ಮತ್ತು ಶಬ್ದ ಪರಿವರ್ತನಗಳೊಡನೆ ಕಂಡುಬರುವ ಇವೆಲ್ಲವನ್ನೂ ಪಂಚಸಂಗ್ರಹದಿಂದ ತೆಗೆದುಕೊಂಡು ಬೇರೆ ಬೇರೆ ಕೃತಿಗಳನ್ನಾಗಿ ಮಾಡಲಾಗಿದೆ ಯೆಂದು ನಿರೂಪಿಸಿದ್ದಾರೆ. ಮಾನ್ಯ ಶಾಸ್ತ್ರಿಯವರ ಈ ನಿರೂಪಣೆಯು ಪ್ರಶ್ನಾರ್ಹವಾಗಿರುವುದೆಂದು ಮಾನ್ಯ ಜುಗುಲ್ ಕಿಶೋರ್ ಮುಖ್ತಾರ ಅವರು ಅಭಿಪ್ರಾಯ ಪಟ್ಟಿದ್ದಾರೆಯಲ್ಲದೆ ಈ ಬಗ್ಗೆ ಮುಂದಿನ ವಕ್ತವ್ಯವನ್ನು ಪ್ರಸ್ತುತಪಡಿಸಿದ್ದಾರೆ.

"ಪಂಚಸಂಗ್ರಹದ ಶತಕ ಅಧಿಕಾರದಲ್ಲಿರುವ ೩೦೦ ಗಾಥೆಗಳಲ್ಲಿ ೧೦೦ ಮೂಲ ಗಾಥೆಗಳಾಗಿವೆ ಎಂದು ಮತ್ತು ಉಳಿದ ೨೦೦ ಭಾಷ್ಯಗಾಥೆಗಳಾಗಿವೆಯೆಂದು ತಿಳಿದು ಬಂದಿದೆ. ಇದೇ ರೀತಿಯಾಗಿ ಸಪ್ತತಿಕಾಗಳಲ್ಲಿ ೭೦ ಮೂಲ ಗಾಥೆಗಳಾಗಿದ್ದು ಮಿಕ್ಕವು ಭಾಷ್ಯ ಗಾಥಗಳಾಗಿವೆ. ಇದರಿಂದ ಪಂಚಸಂಗ್ರಹದ ಸಂಕಲನಕಾರ್ಯ ನಡೆಯುವ ಸಮಯಕ್ಕೆ ಶತಕ ಮತ್ತು ಸಪ್ತತಿಕಾಗಳ ಮೂಲ ಗಾಥೆಗಳ ಮೇಲೆ ಭಾಷ್ಯಗಾಥೆಗಳೂ ರಚಿತವಾಗಿದ್ದುವೆಂದು ಸಂಭಾವಿತವಾಗುವುದಲ್ಲದೆ ಇದರಿಂದಾಗಿಯೇ ಪಂಚ ಸಂಗ್ರಹ ಸಂಕಲನಕಾರರು, ಮೂಲಗಾಥೆಗಳು ಮತ್ತು ಭಾಷ್ಯಗಾಥೆಗಳೆರಡನ್ನೂ ಸಂಕಲನಮಾಡಲು ಸಮರ್ಥರಾದರೆಂದು ಅಧಿಗತವಾಗುವುದು, ಎರಡು ಮೂಲ ಪ್ರಕರಣಗಳ ಮೇಲೆ ಪ್ರಾಕೃತ ಚೂರ್ಣಿ ಉಪಲಬ್ಧವಿದೆ, ಮತ್ತು ದೃಷ್ಟಿವಾದದ ಗಾಥೆಗಳಜೊತೆಯಲ್ಲಿ ಎರಡರ ಸಂಬಂಧವನ್ನೂ ತೋರಿಸಲಾಗಿದೆ. ಇದರಿಂದ ಎರಡು ಪ್ರಕರಣಗಳೂ ಬಹಳ ಪ್ರಾಚೀನವಾದುವಾಗಿವೆಯೆಂದು ನಿರ್ದೇಶಿತವಾಗುವುದು. ಇದಲ್ಲದೆ ಭಾಷ್ಯಗಾಥೆಗಳ ಪ್ರಚಾರವು ದಿಗಂಬರ ಸಂಪ್ರದಾಯದಲ್ಲಿ ಉಳಿದು ಬಂದಿದೆ, ಅವು ಶ್ವೇತಾಂಬರ ಸಂಪ್ರದಾಯದ ಟೀಕೆಗಳಲ್ಲಿ ಕಂಡುಬರುವುದಿಲ್ಲ. ಈ ಭಾಷ್ಯ ಗಾಥೆಗಳಲ್ಲಿ, 'ಸವ್ವಟ್ಠಿದೀಣಮುಕ್ಕಸ್ಸ' ಹಾಗೂ 'ಸುಹಪಗದೀ (ಯಡೀ)ಣ ವಿಸೋಹೀ ಎಂಬ ಎರಡು ಗಾಥೆಗಳು ಅಕಲಂಕದೇವರ ರಾಜವಾರ್ತಿಕ(೬–೩)ದಲ್ಲಿ 'ಉಕ್ತಂಚ' ಎಂಬ ಪೀಠಿಕೆಯೊಡನೆ ಉದ್ಧೃತವಾಗಿವೆ. ಇದರಿಂದ ಭಾಷ್ಯಗಾಥೆಗಳ ರಚನೆಯು ಪ್ರಾಯಿಕವಾಗಿ ೭ನೇ ಶತಾಬ್ದಿಯ ಮುನ್ನವೇ ಆಗಿರುವುದೆಂದು ತಿಳಿದುಬರುತ್ತದೆಯಲ್ಲದೆ ಭಾಷ್ಯವೂ ಹೆಚ್ಚು ಪ್ರಾಚೀನವಾದುದೆಂದು ಸಾಕ್ಷೀಕೃತವಾಗುವುದು. ಈಗ ಈ ಎರರೂ ಮೂಲ ಪ್ರಕರಣಗಳು ದಿಗಂಬರ ಸಂಪ್ರದಾಯದ್ದೇ, ಇಲ್ಲವೇ ಶ್ವೇತಾಂಬರ ಸಂಪ್ರದಾಯದ್ದೇ, ಅಥವಾ ಈ ಎರಡೂ

ಸಂಪ್ರದಾಯಗಳಿಗೆ ಸಮಾನತರವಾಗಿದ್ದ ಮತ್ತೊಂದು ಸ್ರೋತದ್ದಾಗಿದ್ದು ಅವುಗಳನ್ನು ಈ ಎರಡೂ ಸಂಪ್ರದಾಯಗಳು ತಮ್ಮ ತಮ್ಮ ಇಷ್ಟ ಮತ್ತು ಸೈದ್ಧಾಂತಿಕ ಸ್ಥಿತಿಯನುಸಾರ ತಮ್ಮದಾಗಿಸಿಕೊಂಡಿವೆಯೆ? ಎಂಬ ಪ್ರಶ್ನೆ ಉಳಿದುಕೊಂಡಿದೆ.

ಸಂಕ್ಷೇಪವಾಗಿ ಹೇಳುವುದಾದರೆ, ಈ ಗ್ರಂಥವು, ಅದರ ಸಾಹಿತ್ಯ ದೃಷ್ಟಿಯಿಂದ ಬಹು ಪ್ರಾಚೀನವಾದುದು, ಮತ್ತು ವಿಷಯ ವರ್ಣನಾಧಿ ಅಪೇಕ್ಷೆಯಿಂದ ಬಹು ಮಹತ್ವಪೂರ್ಣವಾದುದಾಗಿದೆ; ಈ ದೃಷ್ಟಿಯಿಂದ ಇದರ ಈಗಿನ 'ಪಂಚಸಂಗ್ರಹ' ರೂಪದ ಸಂಕಲನವು ೧೧ನೇ ಶತಮಾನಕ್ಕಿಂತ ಮುಂಚಿತವಾಗಿ ಆಗಿಲ್ಲವೆಂಬುದಾಗಲಿ ಅದರ ಸಂಗ್ರಹಕಾರರು ಯಾರು ಎಂಬುದಾಗಲಿ ಪ್ರಾಧಾನ್ಯತೆ ಹೊಂದುವುದಿಲ್ಲ.

ಶ್ವೇತಾಂಬರ ಸಂಪ್ರದಾಯದಲ್ಲಿಯೂ ಒಂದು ಪ್ರಾಕೃತ 'ಪಂಚಸಂಗ್ರಹ' ವಿದೆ. ಆರನೇ ಶತಮಾನ ಕಾಲದ ಚಂದ್ರರ್ಷಿ ಇದರ ರಚನಕಾರರೆಂದು ತಿಳಿಯಲಾಗಿದೆ. ಇದರಲ್ಲಿ ೯೬೩ ಗಾಹೆಗಳಿವೆ. ಅವುಗಳನ್ನು ಶತಕ. ಸಪ್ತತಿ, ಕಷಾಯಪಾಹುಡ. ಷಟ್ ಕರ್ಮ ಮತ್ತು ಕರ್ಮಪ್ರಕೃತಿ ಎಂಬ ಐದು ಅಧಿಕಾರಗಳಲ್ಲಿ ವಿಭಾಗಿಸಲಾಗಿದೆ. ಇದರ ಮೇಲೆ ಮಲಯಗಿರಿಯವರ ಟೀಕೆ ಇದೆ. (ಭಾ.ಸಮ. ಜೈನಧರ್ಮದ ಕೊಡುಗೆ, ಪು.೯)

ಮಾನ್ಯ ಜುಗುಲ್ ಕಿಶೋರ್ ಮುಖ್ತಾರ್ ಅವರು ಶ್ರುತಮುನಿ ವಿರಚಿತವಾಧ ಭಾವತ್ರಿಭಂಗೀ, ಆಸ್ರವತ್ರಿಭಂಗೀ ಮತ್ತು ಪರಮಾಗಮಸಾರ ಎಂಬ ಮೂರು ಕೃತಿಗಳ ಬಗ್ಗೆ ವಿವರಣೆ ಕೊಟ್ಟಿದ್ದಾರೆ. ಇದರ ಸಾರಾಂಶ ಇಲ್ಲಿ ಕೊಡಲಾಗುವುದು. ಭಾವತ್ರಿಭಂಗೀ– "ಇದಕ್ಕೆ 'ಭಾವಸಂಗ್ರಹ' ಎಂಬ ಹೆಸರೂ ಇದೆ. 'ಮೂಲುತ್ತರ ಭಾವ ಸರೂಹಂ ಪವಕ್ಖಾಮಿ' (ಗ್ರಾ.೨) 'ಇದಿ ಗುಣಮಗ್ಗಣಠಾಣೇ ಭಾವಾ ಕಹಿಯಾ'(ಗಾ.೧೧೬) ಎಂಬ ಹೇಳಿಕೆ ಮತ್ತು ಸಮಾಪ್ತಿಸೂಚಕ ವಾಕ್ಯಗಳಿಂದ ಇದು ಭಾವಗಳ ಒಂದು ಸಂಗ್ರಹವಾಗಿದೆ ಎಂದು ತಿಳಿದುಬರುತ್ತದೆ. ಭಾವಗಳನ್ನು ಅಧಿಕಾಂಶ ಮೂರು ಭಂಗಗಳನ್ನಾಗಿ ಮಾಡಿ ಹೇಳಿರುವುದರಿಂದ 'ಭಾವತ್ರಿಭಂಗೀ' ಎಂಬ ಹೆಸರೂ ಇದಕ್ಕೆ ರೂಢವಾಗಿದೆ. ಇದರಲ್ಲಿ ಜೀವಗಳ (೧) ಔಪಶಮಿಕ (೨) ಕ್ಷಾಯಿಕ (೩) ಕ್ಷಾಯೋಪ ಶಮಿಕ (೪) ಔದಯಿಕ ಮತ್ತು (೫) ಪಾರಿಣಾಮಿಕ ಎಂಬ ಐದು ಮೂಲ ಭಾವಗಳು ಮತ್ತು ಅನುಕ್ರಮದಿಂದ ಇವುಗಳ ೨, ೯, ೧೮, ೨೧

ಮತ್ತು ೩ ಹೀಗೆ ಒಟ್ಟು ೫೩ ಉತ್ತರ ಭಾವಗಳ ವರ್ಣನೆ ಮಾಡಿದೆ. ಈ ವರ್ಣನೆಯ ಅಧಿಕಾಂಶ ೧೪ ಗುಣಸ್ಥಾನಗಳ ಮತ್ತು ಮಾರ್ಗಣಾಗಳ ಆಶ್ರಯ ಹೊಂದಿದೆ. ವಿಷಯದ ದೃಷ್ಟಿಯಿಂದ ಗ್ರಂಥವು ಮಹತ್ತ್ವಪೂರ್ಣದ್ದಾಗಿದೆ. ಪ್ರಶಸ್ತಿಯೂ ಸೇರಿದಂತೆ ಇದರಲ್ಲಿ (೧೧೬+೭=) ೧೨೩ ಗಾಹೆಗಳಿವೆ. ಮಾಣಿಕಚಂದ್ರಮಾಲಾ ಪ್ರಕಾಶಿತ ಗ್ರಂಥದಲ್ಲಿ ಪ್ರಶಸ್ತಿ ಮುದ್ರಿತವಗಿಲ್ಲ. ಆರಾ ಜೈನ ಸಿದ್ಧಾಂತ ಭವನದ ಒಂದು ತಾಡಪತ್ರದಾಧಾರದಿಂದ ಕೊಡಲಾದ ನನ್ನ ಸೂಚನೆಯಂತೆ ಸುಹೃದ್ವರ ನಾಥೂರಾಂ ಪ್ರೇಮಿಯವರು 'ಗ್ರಂಥ ಪರಿಚಯ' ಎಂಬ ಪ್ರಸ್ತಾವನೆಯಲ್ಲಿ ಕೊಟ್ಟಿರುತ್ತಾರೆ. ಈ ಪ್ರಶಸ್ತಿಯಿಂದ ಗ್ರಂಥಕಾರ ಶ್ರುತಮುನಿಯ ಮತ್ತು ಅವರ ಗುರುಗಳ ಉತ್ತಮ ಪರಿಚಯ ದೊರೆಯುತ್ತದೆ. ೩೮ ಇದರಲ್ಲಿ ಶ್ರುತಮುನಿಗೆ ಅಣುವ್ರತವಿತ್ತ (ಶ್ರಾವಕಾಚಾರ ಧರ್ಮದ) ಗುರು ಬಾಲೇಂದು – ಬಾಲಚಂದ್ರ ಮುನಿ. ಮಹಾವ್ರತವಿತ್ತ (ಮುನಿಧರ್ಮದೀಕ್ಷೆಯಿತ್ತ) ಗುರು–ಅಭಾಯಚಂದ್ರ ಸಿದ್ಧಾಂತಿ ಮತ್ತು ಶಾಸ್ತ್ರ (ಅಧ್ಯಯನ ಮಾಡಿಸಿದ ವಿದ್ಯಾ) ಗುರು ಅಭಯಸೂರಿ ಮತ್ತು ಪ್ರಭಾಚಂದ್ರರು. ಈ ಎಲ್ಲ ಗುರು–ಶಿಷ್ಯರು (ಪ್ರಾಯಿಕವಾಗಿ ಪ್ರಭಾಚಂದ್ರರ ಹೊರತಾಗಿ) ಮೂಲಸಂಘ, ದೇಶೀಯಗಣ ಪುಸ್ತಕಗಚ್ಛ, ಕುಂದ ಕುಂದಾನ್ವಯ, ಇಮಗಲೇಶ್ವರ ಶಾಖೆಯವರಾದ್ದಾರೆ. ಇವರಲ್ಲಿ ಬಾಲಚಂದ್ರ ಮುನಿಯೂ ಅಭಯಚಂದ್ರ ಸಿದ್ದಾಂತಿಯವರ ಶ್ರಿಷ್ಯರಾಗಿರುವರಾದ್ದರಿಂದ ಇವರು ಶ್ರುತಮುನಿಯ ಹಿರಿಯ ಭ್ರಾತೃಗುರುವಾಗಿದ್ದಾರೆ, ಶಾಸ್ತ್ರಗುರುಗಳಲ್ಲಿ ಅಭಯ ಸೂರಿಯವರೂ ಸಿದ್ಧಾಂತಿಯಾಗಿರುವರು, ಮತ್ತು ಶಬ್ದಾಗಮ–ಪರಮಾಗಮ–ತರ್ಕಾಗಮಗಳನ್ನು ಚೆನ್ನಾಗಿ ತಿಳಿದವರಾಗಿದ್ದರಲ್ಲದೆ ಪರವಾದಿಗಳನ್ನು ಜಯಿಸಿದ್ದರು ; ಪ್ರಭಾಚಂದ್ರ ಮುನಿಯು ಸಾರತ್ರಯ (ಸಮಯಸಾರ, ಪ್ರವಚನಸಾರ ಮತ್ತು ಪಂಚಾಸ್ತಿ ಕಾಯಸಾರ)ದಲ್ಲಿ ಉತ್ತಮ ನೈಪುಣ್ಯತೆ ಹೊಂದಿದ್ದರು; ಪರಭಾವರಹಿತರಾಗಿ ಶುದ್ಧಾತ್ಮರೂಪದಲ್ಲಿ ಲೀನರಾಗಿ ಭವ್ಯಜನರಿಗೆ ಬೋಧನೆ ಮಾಡುವುದರಲ್ಲಿ ತತ್ಪರರಾಗಿದ್ದರು, ಈ ಗುರುಗಳಲ್ಲದೆ, ಶ್ರವಣಬೆಳಗುಳ ಶ್ರೀಮಠದ ಪೀಠಾಧಿಪತಿ ಭಟ್ಟಾರಕರ ಪರಂಪರೆಯನುಕ್ರಮದ ಸ್ಥಾಯಿರೂಢನಾಮವಾಗಿರುವ 'ಚಾರುಕೀರ್ತಿ'ಎಂಬ ಮಿನಿಯು ನಯ–ನಿಕ್ಷೇಪಗಳು ಮತ್ತುಪ್ರಮಾಣಗಳನ್ನು ತಿಳಿದವರಾಗಿದ್ದು ಸಕಲ ಪರಧರ್ಮಗಳನ್ನು

ಜಯಿಸಿದವರೂ, ನೃಪಗಣದಿಂದ ವಂದಿತ ಪಾದಪದ್ಮರೂ, ಸಮಸ್ತ ಶಾಸ್ತ್ರಗಳ ಜ್ಞಾತೃವೂ ಜಿನಮಾರ್ಗ ಗಮನದಲ್ಲಿ ಶೂರರೂ ಆಗಿದ್ದರು ಎಂದು ಹೇಳಿ ಎಲ್ಲ ಗುರುಗಳಿಗೂ ಜಯಕಾರಮಾಡಿದೆ.

ಈ ಕೃತಿಯಲ್ಲಿ ಗ್ರಂಥರಚನೆಯ ಕಾಲವನ್ನು ಹೇಳದಿದ್ದರೂ, ಇವರಿದಲೇ ರಚಿತವಾಗಿರುವ ಪರಮಾಗಮಸಾರದಲ್ಲಿ ಆ ಗ್ರಂಥದ ರಚನೆಯು ಶಕ ಸಂ. ೧೨೬೩ ( ವಿ. ಸಂ.೧೩೯೮–ಕ್ರಿ. ಶ. ೧೩೪೧) ವೃಷ ಸಂವತ್ಸರ, ಮಾರ್ಗಶಿರ ಶುದ್ಧ ಸಪ್ತಮೀ ಗುರುವಾರದಂದು ಸಮಾಪ್ತವಾಯಿತೆಂದು ಹೇಳಿದೆ. ೩೯ ಇದರ ಆ ಗ್ರಂಥದಲ್ಲಿ. ಈ ಮೇಲೆ ಹೇಳಿದ ಪ್ರಶಸ್ತಿಯನ್ನು ಚಾರುಕೀರ್ತಿಯವರಿಗೆ ಸಂಬಂಧಿಸಿದ (ಎರಡು ಗಾಥೆಗಳಲ್ಲಿ) ಎರಡನೆಯದರ ಹೊರತಾಗಿ, ಮಿಕ್ಕೆಲ್ಲ ಗಾಥೆಗಳಲ್ಲಿ ಕೊಡಲಾಗಿದೆ. ಇದರತೆ ಶ್ರುತಮುನಿಯವರು ವಿಕ್ರಮಶಕೆ (ಕ್ರಿ.ಶಕೆ) ೧೪ನೇ ಶತಮಾನದವರಾಗಿದ್ದಾರೆ.

ಮಾನ್ಯ ಜುಗಲ್ ಕಿಶೋರ್ ಮುಖ್ತಾರ್ ಅವರು ಉಲ್ಲೇಖಿಸಿರುವ ಪ್ರಶಸ್ತಿಯಲ್ಲಿ ಹೇಳಿರುವ ಸಂಗತಿಯೊಡನೆ ಸನ್ನಿಹಿತವಾದ ಸಮ್ಯತೆ ಹೊಂದಿರುವ ಹೇಳಿಕೆ ಶ್ರ. ಬೆಳಗುಳದ ಶಾಸನಗಳಲ್ಲಿದೆ ಚಿಕ್ಕ ಬೆಟ್ಟದ (೭೨/೬೫/೪೧) ಕ್ರಿ.ಶ. ೧೩೧೩ರ ಶಾಸನದಲ್ಲಿ ಶುಭಚಂದ್ರ, ಚಾರುಕೀರ್ತಿ, ಮಾಘಾನಂದಿ, ಅಭಯ–ಶಶಿ (ಚಂದ್ರ) ಮತ್ತು ಬಾಳೇಂದುಗಳನ್ನು ಗುರುಶಿಷ್ಯಾನುಕ್ರಮದಿಂದ ಹೆಸರಿಸಿದೆ. ಮೇಲೆ ಹೇಳಿರುವ ಪ್ರಶಸ್ತಿಯಲ್ಲಿಯೂ ಅಭಯಚಂದ್ರ ಮತ್ತು ಬಾಲೇಂದು ಮುನಿಗಳ ಗುರುಶಿಷ್ಯ ಕ್ರಮವನ್ನು ಸ್ಪಷ್ಟವಾಗಿ ಹೇಳೀದೆ. ಪ್ರಶಸ್ತಿಯಲ್ಲಿ ಹೇಳಲಾಗಿರುವ ಕಾಲಗಣನೆಯೂ ಇಲ್ಲ ಸಮನ್ವಿತವಾಗುವುದು. ಆದ್ದರಿಂದ ಪ್ರಶಸ್ತಿಯಲ್ಲಿ ಮತ್ತು ಶಾಸನದಲ್ಲಿ ಹೇಳಿರುವ ಗುರು ಶಿಷ್ಯಾನುಕ್ರಮವನ್ನು ಅಭಿನ್ನವಾದುದೆಂದು ತಿಳಿಯಬಹುದಾಗಿದೆ. ಪುನಃ ದೊಡ್ಡಬೆಟ್ಟದ ಸಿದ್ಧರ ಬಸದಿಯ ಕ್ರಿ. ಶ. ೧೩೯೮ ರ (೩೬೦/೨೫೪/೧೦೫) ಶಾಸನದಲ್ಲಿ ನಂದಿಸಂಘ, ದೇಸೀಗಣ, ಪುಸ್ತಕಗಚ್ಛ, ಇಂಗಲೇಶ್ವರಬಳಿಯ ಮುನಿಪರಂಪರೆಯನ್ನು ಹೇಳಿದೆ. ಈ ಪರಂಪರೆಗೆ ಸೇರಿದಂತೆ ಅಭಯಚಂದ್ರರು, ಇವರ (ತನುಜ) ಶಿಷ್ಯ ಶ್ರುತಮುನಿಯನ್ನು ಹೆಸರಿಸಿದೆ. ಮುಂದೆ ಈ ಅಭಯಚಂದ್ರಸೂರಿಯವರ ಕಿರಿಯಭ್ರಾತೃ (ಅನುಜಾತ) ಶ್ರುತಕೀರ್ತಿಯವರನ್ನು ಹೆಸರಿಸಿದೆ. ಬಳಿಕ ಇವರ ಶಿಷ್ಯ (ತನೂಜ) ಚಾರುಕೀರ್ತಿಯವರು ಗಣಿಪದ ಹೊಂದಿದರು. ಈ ಚಾರುಕೀರ್ತಿಯವರು ರಾಜವಂದಿತರಾಗಿದ್ದರು. ಇದಲ್ಲದೆ ಇವರ ಬಗ್ಗೆ ಹೇಳಿರುವ "ಬಲ್ಲಾಳ ಕ್ಷೋಣಿಪಾಲಂ ವಲಿತಬಲಿಬಲಂ ವಾಜಿಭಿರ್ವೇಜಿತಾಜಿಂ

ರೋಗಾವೇಗಾದ್ಗತಾಸುಸ್ಥಿತಮಪಿ ಸಹಸೋಲ್ಲಾಘತಾಮಾನಿನಾಯ" ಎಂಬ ಉಕ್ತಿಯಿಂದ ಶ್ರ. ಬೆಳಗುಳದ ಶ್ರೀಮಠದ ಭಟ್ಟಾರಕರ ಪ್ರಶಸ್ತಿಯಲ್ಲಿರುವ "ಬಲ್ಲಾಳರಾಯಜೀವರಕ್ಷಾಪಾಲಕರುಂ" ಎಂಬ ವಾಕ್ಯದ ಅರ್ಥವು ಸೂಚಿತವಾಗುವುದು. ಈ ಚಾರುಕೀರ್ತಿಯವರ ಬಳಿಕ ಅಶೇಷ ಶಾಸ್ತ್ರಾಂಬುನಿಧಿ ಅಭಯ ಸೂರಿಯವರನ್ನು ಹೆಸರಿಸಿದೆ. ಇವರಿಗೆ ಸಿಂಹಣಾರ್ಯ ಎಂಬ ಮತ್ತೊಂದು ಹೆಸರಿದ್ದು ವಾದಿಸಿಂಹ ಎಂಬ ಬಿರುದಿದ್ದಿತೆಂದು ಕಂಡುಬರುತ್ತದೆ. ಧರ್ಮಾಭಿವೃದ್ಧಿನಿಮಿತ್ತವಾಗಿ ಬೆಳಗುಳನಗರದಲ್ಲಿ ನಿಲ್ಲುವ ಆಸ್ಥೆಹೊಂದಿದ್ದ ಇವರು ("ಶ್ರೀಮಾನಸ್ಥಾತ್ ಕೃತಾ ಸ್ಥೋ ಬೆಳಗುಳ ನಗರೇ ತತ್ರಧರ್ಮಾಭಿವೃದ್ಧೈ") ಏಳು ಬಾರಿ ಮಸ್ತಕಾಭಿಷೇಕ ಮಾಡಿದರೆಂದು ಹೇಳಿದೆ, ("ಚಿತ್ರಂ ಶೀರ್ಷೆSಭಿಷಿಚ್ಯ ತ್ರಿಭುವನ ತಿಲಕಂ ತಂ ಪುನಸ್ಸಪ್ತವರಾನ್") ಪ್ರಾಯಶಃ ಇವರಿಗೂ ಚಾರುಕೀರ್ತಿ ಎಂಬ ಹೆಸರು ಬಂದಿತೆಂದು ಕಂಡುಬರುತ್ತದೆ. ಈ ಶಾಸನದಂತೆ ಇದೇ ಸಿದ್ಧರ ಬಸದಿಯ ಮತ್ತೊಂದು ಕ್ರಿ.ಶ. ೧೪೩೨–೩೩(?)ರ (೩೬೪/೨೫೮/೧೦೮)ಶಾಸನದಲ್ಲಿ ಪೂರ್ವಗುರು ಅನುಕ್ರಮದೊಡನೆ ಶ್ರುತಮುನಿಯವರ ವರ್ಣನೆಯಿಂದ. ಇದರ ಪ್ರಕಾರ ನಂದಿಸಂಘ, ದೇಶೀಯಗಣ, ಪುಸ್ತಕಗಚ್ಛ, ಇಂಗುಲೇಶಬಲಿಯ ಶ್ರುತಕೀರ್ತಿ ಭಟ್ಟಾರಕರ ಅನಂತರ ಚಾರುಕೀರ್ತಿಯವರನ್ನು ಹೆಸರಿಸಿದೆ. ಇವರು ಸಾರತ್ರಯವನ್ನು ಭೂತಲದಲ್ಲಿ ವರ್ತನೆ ಮಾಡಿದರು. ಯುಕ್ತಿ (ನ್ಯಾಯ) ಶಾಸ್ತ್ರ ಮುಂತಾದುವುಗಳ ಪ್ರಕೃಷ್ಟಾಶಯರಾದ ಇವರು ಶಬ್ದ (ವ್ಯಾಕರಣ) ವಿದ್ಯಾಂಬುಧಿಯ ವೃದ್ಧಿಮಾಡಿದ ಚಂದ್ರಮ. ಇವರಿಂದ ಬಲ್ಲಾಳರಾಜನಲ್ಲಿ ಉಂಟಾಗಿದ್ದ ರೋಗದ ಶಾಂತಿಯಾಯಿತು. ಇವರ ಬಳಿಕ ಸಿದ್ಧಾಂತಯೋಗಿ ಯವರನ್ನು ಹೆಸರಿಸಿದೆ. ಈ ಹಿಂದೆ ಉಲ್ಲೇಖಿಸಿರುವ ಹೇಳಿಕೆಯಾಧಾರದಿಂದ ಅಭಯಸೂರಿಯವರನ್ನೇ ಈ ಶಾಸನದಲ್ಲಿ 'ಸಿದ್ಧಾಂತಯೋಗಿ' ಎಂದು ಹೆಸರಿಸಲಾಗಿದೆ ಎಂದು ತಿಳಿಯಬೇಕಾಗುವುದು. ಈ ಸಿದ್ಧಾಂತಯೋಗಿಯವರು ತಮ್ಮ ಶಿಷ್ಯನಾದ ಶ್ರುತಮುನಿಯನ್ನು ಗಣೇಪದದಲ್ಲಿ ನಿಯೋಜಿಸಿದರು. ಕೊನೆಯದಾಗಿ ರೋಗ ಗ್ರಸ್ತರಾದ ಇವರು ತಮ್ಮ ಹಿರಿಯ ಭ್ರಾತೃಗುರು ಪಂಡಿತೇಂದ್ರಗೋಗಿಯವರಲ್ಲಿ ಸಲ್ಲೇಖನ ಸ್ವೀಕರಿಸಲು ಅನುಮತಿ ಪಡೆದು ಸಮಾಧಿಮರಣ ಹೊಂದಿದರು. ಇವರ ಸ್ಮರನಾರ್ಥವಾಘಿ ಇಷು ಶರ ಶಿಖ ವಿಧು ಮಿತ ಶಕ (೧೩೫೫ನೇ) ಪರಿಧಾನಿ ಶರ ದ್ವಿತೀಯಗಾಷಾಢ ಶುಕ್ಲ ನಕ್ಷತ್ರದಲ್ಲಿ ನಿಷದ್ಯೆ ಪ್ರತಿಷ್ಠಿತವಾಯಿತು.

ಈ ಶಾಸನಗಳಲ್ಲಿ ಕಂಡುಬರುವ ಶ್ರುತಮುನಿಯವರಿಗೆ ಸಂಬಂಧಿಸಿದ ಇತಿವೃತ್ತವು ಈ ಹಿಂದೆ ಹೇಳಿರುವ ಪ್ರಶಸ್ತಿಯ ಇತಿವೃತ್ತದ ಪೂರಕವಾಗಿದೆ.

ಆಸ್ರವತ್ರಿಭಂಗೀ–ಇದೂ ಕೂಡ ಶ್ರುತಮುನಿಯವರ ರಚನೆಯಾಗಿದೆ. ಇದರಲ್ಲಿ ಮಿಥ್ಯಾತ್ವ, ಅವಿರತ, ಕಷಾಯ ಮತ್ತು ಯೋಗ–ಈ ಮೂಲ ಆಸ್ರವಗಳ, ಕ್ರಮಶಃ ೫, ೧೨, ೨೫ ಮತ್ತು ೧೫–ಒಟ್ಟು ೫೭ ಭೇದಗಳ ವರ್ಣನೆಯನ್ನು ಗುಣಸ್ಥಾನ ಮತ್ತು ಮಾರ್ಗಣಾಸ್ಥಾನಗಳ ಆಶ್ರಯದಿಂದ ಮಾಡಲಾಗಿದೆ. ಪ್ರತಿಜ್ಞಾತ ವಿಷಯ ನಿರೂಪಣೆಯ ದೃಷ್ಟಿಯಿಂದ ಇದು ಒಂದು ಉತ್ತಮ ಸೂತ್ರಗ್ರಂಥವಾಗಿದೆ. ಇದರಲ್ಲಿ ಒಟ್ಟು ೬೨ ಗಾಹೆಗಳಿದ್ದು ಗೊಮ್ಮಟಸಾರದ ಅನೇಕ ಗಾಹೆಗಳೂ ಯಥಾವತ್ತಾಗಿ ಸೇರಿವೆ. ಅಂತಿಮ ಗಾಹೆಯಲ್ಲಿ ಬಾಲೇಂದು (ಬಾಲಚಂದ್ರ) ಮುನಿಗೆ ಜಯಘೋಷ ಮಾಡಲಾಗದೆ.

ಜುಗಲ್ ಕಿಶೋರ್ ಮುಖ್ತಾರ್ ಅವರು, ಈ ಮೇಲಿನಂತೆ, ವಿವರಣೆಯಿತ್ತಿರುವ 'ಆಸ್ರವತ್ರಿಭಂಗಿ'ಯ ಕೆಲವು ಗಾಹೆಗಳ ಹೊರತಾಗಿ ಮಿಕ್ಕೆಲ್ಲ ಗಾಹೆಗಳನ್ನು ಹೊಂದಿರುವ 'ಸಪ್ತಪಂಚಾಶ ದಾಸ್ರವಿಕಃ' ಎಂಬ ಕೃತಿಯಿದೆ. [೪೦] ಕೃತಿಯ ಹೆಸರಿನೊಡನೆ ಇರುವ 'ನೇಮಿಚಂದ್ರ' ಎಂಬ ಹೆಸರು ಕೃತಿಕಾರನ ಹೆಸರಾಗಿರುವದೆಂಬ ಸೂಚನೆ ಇರುವುದಾದರೂ ಕೊನೆಯದಾದ ೫೮ನೇ ಗಾಹೆಯಲಿ ಶ್ರುತಮುನಿಯ ಹೆಸರಿದೆ. ೫೯ನೇ ಗಾಹೆಯಲ್ಲಿ ಆಸ್ರವತ್ರಿಭಾಂಗಿಯಲ್ಲಿರುವಂತೆ ಬಾಳೇಂದುವನ್ನು ಕುರಿತು ಜಯಘೋಷಣೆ ಇದೆ. ಈ ಎರಡು ಗಾಹೆಗಳು ಆಸ್ರವತ್ರಿಭಂಗಿಯ ೬೧ ಮತ್ತು ೬೨ ನೇ ಗಾಹೆಗಳೊಡನೆ ಸಮಾನತೆ ಹೊಂದಿರುವಂತೆ ಕಂಡುಬರುತ್ತವೆ. ಈ ಕೃತಿಯು ಮುಂದಿನ ಸಂಸ್ಕೃತ ಮಂಗಲ ಶ್ಲೋಕದೊಡನೆ ಆರಂಭವಾಗಿದೆ.

ಅಭಿವಂದ್ಯ ಜಿನಾನ್ವೀರಾನ್ ಸದ್ ಜ್ಞಾನಾದಿಗುಣಾತ್ಮಕಾನ್ ।
ಕರ್ಣಾಟ ಭಾಷಯಾ ವಕ್ಷ್ಯೇ (ಟೀಕಾಂ) ಕರ್ಮಾಸ್ರವಸಂತತೇಃ ॥

ಇದರ ಬಳಿಕ ಕನ್ನಡದ ಪೀಠಿಕೆ ಇದೆ. ಇದರ ಕೊನೆಯ ಮಾತಿನಲ್ಲಿ....... 'ಸರ್ವಜ್ಞನುಂ ತದಕ್ಷಯ ಸುಖಾರ್ಥಿಗಳ್ಗೆ ನಮಸ್ಕಾರಾರ್ಹನೆಂಬ ಬಗೆಯಂ ಗ್ರಂಥಾದಿಯೊಳು ಗ್ರಂಥಕಾರನೊಂದುಂ

ವಿಘ್ನಮಿಲ್ಲದುದು ಮೊದಲಾಗೊಡೆಯ ಫಲಮನಪೇಕ್ಷಿಸಿನಮಸ್ಕಾರ ಗಾಥೆಯಂ ಪೇಳ್ವೆನದಾವುದೆಂದೊಡೆ' ಎಂದು ಹೇಳಿ–

ಪಣಮಿಯ ಸುರಿಂದಪೂಜಿಯಪಯಕಮಳಂ ವಡ್ಢಮಾಣಮಮಳಗುಣಂ ।

ಪಂಚಯಸತ್ತಾವಣ್ಣಂ ಬೊಚ್ಛೇಹಂ ಸುಣಹ ಭಾವಿಯಜಣಾ ॥

ಎಂದು ಐವತ್ತೇಳು ಆಸ್ರವಗಳನ್ನು ಹೇಳುವ ಪ್ರತಿಜ್ಞಾ ಗಾಹೆಯೊಡನೆ ಗ್ರಂಥವನ್ನು ಪ್ರಾರಂಭಿಸಿದೆ. ಇದರ ಅನಂತರ ಮಿಥ್ಯಾತ್ವ, ಅವಿರಮಣ, ಕಸಾಯ ಮತ್ತು ಯೋಗಗಳ ಅನುಕ್ರಮವಾಗಿ ಅವುಗಳ ೫, ೧೨, ೧೫ ಮತ್ತು ೧೫; ಭೇದ ಮೂಲದ ಒಟ್ಟು ೫೭ ಆಸ್ರವ ಪ್ರಕಾರಗಳನ್ನು ತಿಳಿಸಿ ಮುಂದೆ ವಿವರಣೆ ಮಾಡಲಾಗಿದೆ.

ಗುಣಸ್ಥಾನ ಮಾರ್ಗಣಾಸ್ಥಾನಗಳ ಆಧಾರದಿಂದ ಆಸ್ರವವಿಚ್ಛಿತ್ತಿ. ಆಸ್ರವ ಮತ್ತು ಅನಾಸ್ರವಗಳ ಸಂಖ್ಯೆಗಳನ್ನು ಕನ್ನಡದಲ್ಲಿ ನಿರೂಪಿಸಿದೆ. ಆಸ್ರವ ತ್ರಿಭಂಗಿಯಂತೆ ಇದೂ ಕೂಡ ಉತ್ತಮ ಸೂತ್ರಗ್ರಂಥವಾಗಿದೆ.

ಪರಮಾಗಮಸಾರ– ಶ್ರುತಮುನಿಯವರೇ ಇದರ ಕರ್ತೃವಾಗಿದ್ದಾರೆ. ಇದರಲ್ಲಿ ಎಂಟು ಅಧಿಕಾರಗಳಿವೆ, ೨೩೦ ಗಾಹೆಗಳಲ್ಲಿ, ಪಂಚಾಸ್ತಿಕಾಯ, ಷಟ್ ದ್ರವ್ಯ, ಸಪ್ತ ತತ್ತ್ವ, ನವಪದಾರ್ಥ, ಬಂಧ, ಬಂಧಕಾರಣ, ಮೋಕ್ಷ ಮತ್ತು ಮೋಕ್ಷಕಾರಣಗಳನ್ನು ಸಂಕ್ಷೇಪವಾಗಿ ಉತ್ತಮ ರೀತಿಯಿಂದ ನಿರೂಪಣೆ ಮಾಡಿದೆ. ಈ ಗ್ರಂಥ ರಚನೆಯು ಶ.ಕ.ಸಂ. ೧೨೬೩ರ ಮಾರ್ಗಶಿರ ಶುದ್ಧಸಪ್ತಮೀ ಗುರುವಾರದಂದು ಸಮಾಪ್ತವಗಿದೆ.

## ಟಿಪ್ಪಣಿಗಳು

೧ ಪೂ. ಸೂ. ಧವಲಾ ಮುನ್ನಡಿ ಪು. ೭೧

೨ ಬಿ. ಎಲ್. ರೈಸ್ ಅವರ ಶ್ರವಣಬೆಳಗುಳ ಶಾಸನ ಪುಸ್ತಕ. ಶಾಸನ ಸಂ. ೪೭. ಮೇಘಚಂದ್ರತ್ರೈವಿದ್ಯೆದೇವರ ವರ್ಣನೆ:

ಶಾಬ್ದೌಘಸ್ಯ ಶಿರೋಮಣೇಃ ಪ್ರವಿಳಸತ್ತರ್ಕಜ್ಞ ಚೂಡಾಮಣೇಃ।

ಸಿದ್ಧಾಂತೇದ್ಧ ಶಿರೋಮಣಿ ಶಿರೋಮಣಿಃ ಪ್ರಶಮವದ್ ಬ್ರಾತಸ್ಯ ಚೂಡಮಣಿಃ।
ಪ್ರೋದ್ಯತ್ಸಂಯಮಿನಾಂ ಸಿರೋಮಣೀ ರುದಂಚದ್ಭವ್ಯ ರಕ್ಷಾಮಣಿ
ರ್ಜೀಯಾತ್ಸನ್ನುತಮೇಗ– ಚಂದ್ರಮುನಿಪಸ್ತ್ರೈವಿದ್ಯ ಚೂಡಾಮಣಿಃ॥

ಸಿದ್ಧಾಂತೇ ಜಿನವೀರಸೇನಸದೃಶಶ್ಯಾಸ್ತ್ರಾಬ್ಜನೀ ಭಾಸ್ಕರಃ ।
ಷಟ್ತರ್ಕೇಷ್ವಕಳಂಕ ದೇವ ವಿಬುಧಃ ಸಾಕ್ಷಾದಯಂ ಭೂತಳೇ ।
ಸರ್ವವ್ಯಾಕರಣೇ ವಿಪಶ್ಚಿದಧಿಪಃ ಶ್ರೀ ಪೂಜ್ಯಪಾಶಃ ಸ್ವಯಂ ।
ತ್ರೈ ವಿದ್ಯೋತ್ತಮ ಮೇಘಚಂದ್ರಮುನಿಪೋವಾದೀಭ ಪಂಚಾನನಃ ॥
ಶ್ರವಣೀಯಂ ಶಬ್ದವಿದ್ಯಾ ಪರಿಣತಿ ಮಹನೀಯಂ ಮಹಾತರ್ಕವಿದ್ಯಾ ।
ಪ್ರವಣತ್ವಂ ಶ್ಲಾಘನೀಯಂ ಜಿನನಿಗದಿತ ಸಂಶುದ್ಧ ಸಿದ್ಧಾಂತ ವಿದ್ಯಾ ।
ಪ್ರವಣಪ್ರಾಗಲ್ ಭ್ಯಮೆಂದೆಂದುಪಚಿತ ಪುಳಕಂ ಕೀರ್ತಿಸಲ್ ಕೂರ್ತ್ತು।
ವಿದ್ವನ್ನಿವಹಂ ತ್ರೈವಿದ್ಯನಾಮಪ್ರವಿದಿತನೆಸೆದಂ ಮೇಘಚಂದ್ರ ವ್ರತೀಂದ್ರಂ ॥

೨ಎ ವರ ಇಂದಣಂದಿ ಗುರುಣೋ ಪಾಸೇ ಸೋಊಣ ಸಯಲಸಿದ್ಧಂತಂ ।
ಸಿರಿಕಣಯಣಂದಿ ಗುರುಣಾ ಸತ್ತಟ್ಠಾಣಂ ಸಮಾದ್ದಿಟ್ಠಂ
೨ಬಿ ಜಸ್ಸಯ ಪಾಯಪಸಾಯೇಣಣಂತಸಂಸಾರ ಜಲಹಿ ಮುತ್ತಿಣ್ಣೋ।
ವೀರಿಂದಣಂದಿವಚ್ಛೋ ಅಭಯಣಂದಿಗುರುಂ
೨ಸಿ ಣಮಿಊಣ ಅಭಯಣಂದಿಂ ಸುದಸಾಯರಪಾರಗಿಂದಣಂದಿಗುರುಂ।
ವರವೀರಣಂದಿಣಾಹಂ ಪಯಡೀಣಂ ಪಚ್ಚಯಂ ವೊಚ್ಛಂ ॥
೨ಡಿ ಣಮಹ ಗುಣರಯಣ ಭೂಸಣ ಸಿದ್ಧಂತಾಮಿಯ ಮಹದ್ಧಿ ಭವಭಾವಂ ।
೨ಇ ಪೂ. ಸೂ. ಪು. ಜೈ. ವಾ. ಸೂ. ಪ್ರಸ್ತಾವನಾ, ಪು. ೭೧
೨ಎಫ್ ಮಾನ್ಯ ನಾಥೂರಾಂ ಪ್ರೇಮಿಯವರು ಇವರನ್ನು ವರ್ಷನಂದಿ ಎಂದು ಹೆಸರಿಸಿದ್ದಾರೆ .ಪೂ.

ಸೂ. ಜೈ. ಸಾ. ಔರ್ ಇತಿಹಾಸ್, ಪು ೪೧೫, ಅ. ಟಿ. ೫

೨೭ ಆಸೀದಿಂದ್ರಾದಿದೇವಸ್ತುತಪದಕಮಲ ಶ್ರೀಂದ್ರನಂದಿರ್ಮುನೀಂದ್ರೋ ।
ನಿತ್ಯೋತ್ಸರ್ಪಚ್ಚರಿತ್ರೋ ಜಿನಮತಜಲಧಿರ್ಧೌತಪಾಪೋಪಲೇಪಃ ।
ಪ್ರಜ್ಞಾ-ನಾವಾಮಲೋದ್ಯತ್ ಪ್ರಗುಣಗಣ ಭೃತೋತ್ಕೀರ್ಣ ವಿಸ್ತೀರ್ಣ-ಸಿದ್ಧಾ-
ನ್ತಾಂಭೋರಾಶಿಸ್ತ್ರಿಲೋಕ್ ತ್ಯಾಂಬುಜವನವಿಚರತ್ ಸದ್ಯಶೋರಾಜಹಂಸಃ ॥ ೧ ॥

ಯದ್ ವೃತ್ತಂ ದುರಿತಾರಿಸೈನ್ಯ ಹನನೇ ಚಂಡಾಸಿಧಾರಾಯಿತಂ।
ಚಿತ್ತಂ ಯಸ್ಸ ಶರತ್ ಸರಸ್ಸಲಿಲವತ್ ಸ್ವಚ್ಛಂ ಶೀತಲಂ ।
ಕೀರ್ತಿಃ ಶಾರದ ಕೌಮುದೀ ಶಶಿಭೃತೋ ಜ್ಯೋತ್ ಸ್ನೇವ ಯಸ್ಯಾಮಲಾ ।
ಸಶ್ರೀವಾಸವನಂದಿಸನ್ಮುನಿಪತಿಃ ಶಿಷ್ಯಸ್ತದೀಯೋ ಭವೇತ್ ॥ ೨ ॥

ಶಿಷ್ಯಸ್ತಸ್ಯ ಮಹಾತ್ಮಾ ಚತುರನುಯೋಗೇಷು ಚತುರಮತಿವಿಭವಃ ।
ಶ್ರೀ ಬಪ್ಪಣಂದಿ ಗುರುರಿತಿ ಬುಧನಿಷೇನಿತ ಪಾದಾಬ್ಜಃ ॥ ೩ ॥

ಲೋಕೇ ಯಸ್ಯ ಪ್ರಸಾದಾದಜನಿ ಮುನಿಜನಸ್ತತ್ ಪುರಾಣಾರ್ಥವೇದೀ ।
ಯಸ್ಯಾಶಾಸ್ತಂಭಮೂರ್ಧನ್ಯತಿವಿಮಲಯಶಃ ಶ್ರೀವಿತಾನೋ ನಿಬದ್ಧಃ ।
ಕಾಲಾಸ್ತ್ರಾ ಯೇನ ಪೌರಾಣಿಕ ವಿವೃಷಭಾ ದ್ಯೋತಿತಾಸ್ತತ್ ಪುರಾಣ ।
ವ್ಯಾಖ್ಯಾನಾದ್ ಬಪ್ಪಣಂದಿ ಪ್ರಥಿತಗುಣಸ್ತಸ್ಯ ಕಿಂ ವರ್ಣ್ಯತೇಽತ್ರ ॥ ೪ ॥

ಶಿಷ್ಯಸ್ತಸ್ಯೇಂದ್ರನಂದಿರ್ವಿಮಲಂಗುಣಗಣೋದ್ದಾಮ ಧಾಮಾಭಿರಾಮಃ।
ಪ್ರಜ್ಞಾತೀಕ್ಷ್ಣಾಸ್ತ್ರಧಾರಾವಿದಲಿತ ಬಹಲಾಜ್ಞಾನವಲ್ಲೀವಿತಾನಃ ।
ಜೈನೇ ಸಿದ್ಧಾಂತವಾರ್ಧೌವಿಮಲಿತಹೃದಯಸ್ತೇನಸದ್ ಗ್ರಂಥತೋಽಯಂ।

ಹೇಲಾಚಾರ್ಯೋದಿತಾರ್ಥೋ ವ್ಯರಚಿ ನಿರುಪಮೋ ಜ್ವಾಲಿನೀಮಂತ್ರವಾದಃ ॥

೫ ॥

ಅಷ್ಟಶತ ಸ್ಯೈಕಷಷ್ಠಿಮಾಣ ಶಕವತ್ಸರೇಷ್ವತಿತೇಷು ।

ಶ್ರೀಮಾನ್ಯಖೇಟಕೇ ಪರ್ವಣ್ಯಕ್ಷಯತೃತೀಯಾಯಾಂ ॥

ಕಂದರ್ಪೇಣ ಜ್ಞಾತಂ ತೇನಾಪಿ ಸ್ವಸುತನಿರ್ವಿಶೇಷಾಯ ।

ಗುಣನಂದಿ ಶ್ರೀ ಮುನಯೇ ವ್ಯಾಖ್ಯಾತಂ ಸೋಪದೇಶಂ ತತ್ ॥ ೨ ॥

ಪಾರ್ಶ್ವೇ ತಯೋರ್ದ್ವಯೋರಪಿ ತಚ್ಛಾಸ್ತ್ರಂ ಗ್ರಂಥತೋರ್ಥತ್ ಶ್ವಾಪಿ ।

ಮುನಿನೇಂದ್ರನಂದಿನಾಮ್ನಾ ಸಮ್ಯಗ್ಗದಿತಂ ವಿಶೇಷೇಣ ॥ ೨೫ ॥

೨ಹೆಚ್ ನೋಡಿ, ಜೈ, ಸಾ, ಔರ್, ಇ, ಪು ೨೯೭ ಅ, ಟಿ, ೧, ೨

ಇದಿ ಣೇಮಿಚಂದ ಮುಣಿಣಾಣಪ್ಪಸುದೇಣಭಯಣಂದಿವಚ್ಛೇಣ ।

ರಇಓ ತಿಲೋಯಸಾರೋ ಖಮಂತು ತಂ ಬಹುಸುದಾಇರಿಯಾ

ವೀರಣಂದಿ ವಚ್ಛೇಣಪ್ಪಸುದೇಣಂದಿ ಸಿಸ್ಸೇಣ ।

ದಂಸಣಚರಿತ್ತಲದ್ದೀ ಸುಸೂಇಯಾ ಣೇಮಿಚಂದೇಣ ॥ ೬೪೮ ॥

೨ಐ ನೋಡಿ. ಜೈ. ಸಾ. ಔ. ಇ. ಪು. ೨೯೭. ಅ. ಟಿ. ೩

ಭಭೂವ ಭಾವ್ಯಾಂಬುಜ ಪದ್ಮಬಂಧುಃ ಪತಿಮುರ್ನೀನಾಂ ಗಣಭೃತ್ಸಮಾನಃ ।

ಸದಗ್ರಣೀದೇಸಿಗಣಾಗ್ರಗಣ್ಯೋ ಗುಣಾಕರಃ ಶ್ರೀ ಗುಣನಂದಿನಾಮಾ ॥ ೧ ॥

ಗುಣಗ್ರಾಮಂಭೋಧೇಃ ಸುಕೃತವಸತೇರ್ಮಿತ್ರಮಹಸಾ ।

ಮಸಾಧ್ಯಂ ಯಸ್ಯಾಸೀನ್ನ ಕಿಮಪಿ ಮಹೀಶಾಸಿತುಮಿವ ।

ಸ ತಚ್ಛಿಷ್ಯೋ ಜ್ಯೇಷ್ಠಃ ಶಿಶಿರಕರ ಸೌಮ್ಯಃ ಸಮಭವತ್ ।

ಪ್ರವಿಖ್ಯಾತೋ ನಾಮ್ನಾ ವಿಬುಧುಗುಣನಂದೀತಿ ಭುವನೇ ॥ ೨ ॥

ಮುನಿಜನನುತಪಾದಃ ಪ್ರಾಸ್ತಮಿಥ್ಯಾಪ್ರವಾದಃ ।

ಸಕಲಗುಣ ಸಮ್ಮೃದ್ಧಸ್ತಸ್ಯ ಶಿಷ್ಯಃ ಪ್ರಸಿದ್ಧಃ ।

ಅಭವದಭಾಯನಂದೀ ಜೈನಧರ್ಮಾಭಿನಂದೀ ।

ಸ್ವಮಹಿಮಜಿತ ಸಿಂಧು ರ್ಭವ್ಯಲೋಕೈಕ ಬಂಧುಃ ॥ ೩ ॥

ಭವ್ಯಾಂಭೋಜ ವಿಬೋಧನೋದ್ಯತ ಮತೇರ್ಭಾಸ್ವತ್ಸಮಾನತ್ವಿಷಃ।

ಶಿಷ್ಯಸ್ತಸ್ಯ ಗುಣಾಕರಸ್ಯ ಸುಧಿಯಃ ಶ್ರೀವೀರನಂದೀತ್ಯಭೂತ್ ।

ಸ್ವಾಧೀನಾಖೀಲ ವಙ್ಮಯಸ್ಯ ಭುವನಪ್ರಖ್ಯಾತ ಕೀರ್ತೇಃ ಸತಾಂ ।

ಸಂಸತ್ಸು ವ್ಯಜಯಂತ ಯಸ್ಯ ಜಾಯಿನೋ ವಾಚಾಃ ಕುತರ್ಕಾಂಕುಶಾಃ ॥

ಚಂದ್ರಪ್ರಭಾಚರಿತ

೨೫ ಪೂ. ಸೂ. ಪು. ಜೈ. ವಾ. ಸೂ. ಪ್ರಸ್ತಾವನೆ ಪು. ೭೨

೩ ಗೊಮ್ಮಟಸಾರ ಕರ್ಮಕಾಂಡ ಗಾಹೆ ೯೬೫ ೯೬೮ ಮತ್ತು ೯೭೨.

೪ ಲಬ್ಧಿಸಾರ ಮತ್ತು ಕ್ಷಪಣಸಾರಗಳು ಒಂದೇ ಗ್ರಂಥವೆನಿಸಿದ್ದು, ಕ್ಷಪಣಸಾರವು ಅದರ ಪ್ರಶಸ್ತಿಯ ಪ್ರಕಾರ, ಮಾಧವಚಂದ್ರ ತ್ರೈವಿದ್ಯದೇವನ ರಚನೆಯಾಗಿದೆ ಎಂಬ ಅಭಿಮತವಿದೆ. ನೋಡಿ– 'ಭಾಟತೀಗೆ ಜೈನ ಧರ್ಮದ ಕೊಡುಗೆ' ಪು. ೯೭.

೪ಎ ಮಾನ್ಯ ಜುಗಲ್ ಕಿಶೋರ್ ಮುಖ್ತಾರ್ ಅವರ ಪುರಾತನ ಜೈನ ವಾಕ್ಯಸೂಚೀ, ಪು. ೬೮

೫ ಜಹಚಕ್ಕೇಣಯ ಚಕ್ಕೀ ಛಕ್ಖಂಡಂ ಸಾಹಿಯಂ ಅವಿಗ್ಘೇಣ।

ತಹ ಮ ಇಚಕ್ಕೇಣ ಮಯಾ ಛಕ್ಖಂಡಂ ಸಾಹಿಯಂ ಸಮ್ಮಂ ॥

(ಕರ್ಮಕಾಂಡ ಗಾಹೆ. ೩೯೭)

೭ 'ಗೊಮ್ಮಟೇಶ್ವರ ಕಮೊರೆಶನ್ ವಾಲ್ಯೂಂ' ೧೯೮೧–'ಲಾರ್ಡ್ ಗೊಮ್ಮಟೇಶ್ವರ ಆಫ್ ಶ್ರವಣಬೇಳಗುಳ' (ಪು. ೪೧)

೭ ಚಾವುಂಡರಾಯ ಪುರಾಣ ಪ್ರಾರಂಭಾದ ಶ್ಲೋಕ ಸಂ. ೧೪ ರಿಂದ ೨೦ ಮತ್ತು ಮುಂದಿನ ಗದ್ಯ ಭಾಗ ನೋಡಿ.

೮ ಗೊ. ಸಾ. ಕ. ಕಾಂಡ(೧) 'ಗೊಮ್ಮಟಯತ್ಥಸಂಜುತ್ತಂ'– (ಗಾಹೆ ೮೧೧) ಉತ್ತಮ ಅಥವಾ ಸಮೀಚೀನ ಪದ– ಅರ್ಥಾಳಿಂದ ಕೂಡಿರುವ

(೨) 'ಗೊಮ್ಮಟಂ ರ ಇಯಂ '(ಗಾಹೆ ೯೬೫) ಚೆನ್ನಾಗಿ ಅಥವಾ ಸುಂದರವಾಗಿ ರಚಿಸಲ್ಪಟ್ಟಿದೆ, ಶ್ರವಣ ಬೆಳಗುಳ ಶಾಸನ

**(i)** ೮೫/೨೩೪/೩೩೬ ( ಸಾಲು ೧೬)– ಚಾಮುಂಡರಾಯಂ ಮನು ಪ್ರತಿಮಂ ಗೊಮ್ಮಟನಲ್ತೆ.

**(ii)** (ಸಾಲು ೫೧–೫೨) ಗೊಮ್ಮಟದೇವ ತರಿಸಂದಳವಾರ್ಯ ಜಿನಕ್ಕೆ ಗೊಂಮಟಂ ೯೦/೨೪೦/೩೪೨– (ಸಾಲು ೩೦–೩೧) ಗೋವಿಂದವಾಡಿಯಂ ಬೇಡಿದಂ ಜಿನಾರ್ಚನಲುಬ್ಧಂ– ಗೊಂಮಟಮೆನೆ ಮುನಿಸಮುದಾಯಂ, ಮನದೊಳ್ಮೆಚ್ಚಿ.... ಗೊಮ್ಮಟದೇವರ ಪೂಜೆಗದಂ ಮುದದಿಂ ಬಿಟ್ಟನಲ್ತೆ ಧೀರೋದಾತ್ತಂ

೯ ಗೋ. ಸಾ. ಕ. ಕಾಂಡ, ಗೊಮ್ಮಟೋ ಜಯ ಉ–೯೬೯, ಗೊಮ್ಮಟರಾಯವಿಣಿಮ್ಮಿಯ– ೯೬೮

೧೦ ಗೊಮ್ಮಟದೇವೇಣ ಗೊಮ್ಮಟಂ ರ ಇಯಂ–೯೬೫

೧೧ ಗೊಮ್ಮಟ ಜಿಣಿಂದ ಚಂದಂ –೮೧೧

೧೨ ಗೊಮ್ಮಟಸಿಹರುವರಿ ಗೊಮ್ಮಟ ಜಿಣೋಯ–೯೬೮

೧೩ ಪೂ.ಸೂ. ಪುರಾತನ ಜೈನವಾಕ್ಯ ಸೂಚೀ, ಪು. ಸಂ. ೭೦

೧೪ ಶ್ರ.ಬೆ. ಶಾಸನ ಸಂ. ೩೪/೩೧/೧೮.

೧೫ ಗೋ. ಸಾ. ಕ. ಕಾಂಡ–ಗಾಹೆ ೮೧೧

೧೬ ಚಾಮುಂಡರಾಯ ಬಸದಿಯನ್ನು ಚಾಮುಂಡರಾಯನೇ ನಿರ್ಮಿಸಿದನೆಂಬುದರ ಬಗ್ಗೆ ಮಾನ್ಯ ಡಾ. ಬಾ. ರಾ. ಗೋಪಾಲ್ ಅವರು ಸಂದೇಹ ವ್ಯಕ್ತಪಡಿಸಿದ್ದಾರೆ. ಇವರ ಅಭಿಪ್ರಾಯದಂತೆ ಈ ಬಸದಿಯ ಮುಂಭಾಗದ ಜಗಲಿಯ ಉಭಯ ಪಾರ್ಶ್ವಗಳ ಗೋಡೆಯ ಕೆಳಗಣ ದಿಂಡಿನ ಮೇಲಿರುವ 'ಶ್ರೀ ಚಾಮುಂಡರಾಜಂ ಮಾಡಿಸಿದಂ' ಎಂಬ ಶಾಸನವು ಹತ್ತನೇ ಶತಮಾನದ್ದಾಗಿರದೆ ಹನ್ನೊಂದನೇ ಶತಮಾನದ್ದಾಗಿದೆ– ನೋಡಿ, ಎಪಿಗ್ರಾಫಿಯ ಕರ್ನಾಟಕ, ಶ್ರವಣ ಬೆಳಗೊಳ, ಕನ್ನಡ ಅಧ್ಯಯನ ಸಂಸ್ಥೆ. ಮೈ ವಿ. ವಿ. ಪ್ರಕಾಶನ, ಪೀಠಿಕೆ. ಪು ೧

೧೭ ಪೂ. ಸೂ. ಗೊ. ಕಂ. ವಾಲ್ಯೂಂ ಪು. ೩೯

೧೮ ಜೈನ ಸಿದ್ಧಾಂತ ಭಾಸ್ಕರ–ದಿ ಜೈನ ಆಂಟಿಕ್ವೆರಿ. ಡಿಸೆಂಬರ್ ೧೯೪೩.

೧೯ ಶ್ರವಣಬೆಳಗುಳ ಶಾಸನ ೪೭೬/೩೪೫/೧೩೭, ಸಾಲು ೫೮.

೨೦ ಪೂ. ಸೂ. ಪು. ಜೈ. ವಾ, ಸೂಚೀ, ಪ್ರಸ್ತಾವನೆ. ಪು ೮೮–೯೧.

೨೧ ಇವುಗಳಲ್ಲಿ ಒಂದು ಸನ್ಮಾನ್ಯ ಆ. ಆನಂದಕುಮಾರ್, ಬಿ.ಇ. ಮೈಸೂರು ಮತ್ತು ಇನ್ನೊಂದು ಸನ್ಮಾನ್ಯ ಶಾಂತಾ ಸಂನ್ಮತಿಕುಮಾರ. ತುಮಕೂರು– ಇವರಲ್ಲಿ ಇವೆ. ನೋಡಿ, ಇದೇ ( ಮುಂದಿನ ಗೋ. ಸಾ. ಸಂಪಾದಕಿಯ. ಪು. **(IV)** ಮತ್ತು ಭಾವಾನುವಾದಕರ ನುಡಿ; ಪು **(XIV)**

೨೧ಎ ಗೊಮ್ಮಟಸಾರ–ಭಾವಾನುವಾದಕರು ಶ್ರೀ ಟಿ. ಸಿ. ಬ್ರಹ್ಮಸೂರಯ್ಯ ಅವರು,ಮೈಸೂರು, ಸಂಪಾದಕರು: ಶ್ರೀ ಆ. ಆನಂದಕುಮಾರ್, ಬಿ.ಇ. ಅವರು (ಮೈಸೂರು) ಪ್ರಕಾಶಕರು: ಶ್ರೀ ಜಿ.ಎಸ್. ಮಹಾವೀರ್ ಮತ್ತು ಶ್ರೀಮತಿ ಪ್ರೇಮ ಮಹಾವೀರ್, ಪರಿಚಾಯಕರು, ಮೈಸೂರು. ಪ್ರೊ. ಎಂ. ಪಿ. ಎಲ್. ಕಾಂತ್ ಅವರು, ಮೈಸೂರು.

೨೨ ನೋಡಿ : ಪ್ರೊ. ಎಲ್. ಸಿ. ಜೈನ್ ಅವರ 'ದಿ ಲಬ್ಧಿಸಾರ–ದಿ ಎಸ್ಸೆನ್ಸ್ ಆಫ್ ಅಟ್ಟೈನ್ ಮೆಂಟ್ –ವಾಲ್ಯೂಂ ೧, ಪ್ರಕಾಶಕರು: 'ದಿ ಎಸ್.ಎಸ್. ಮುರ್ಲೀಧರ್ ಕನ್ಹೈಯಲಾಲ್ ಜೈನ್ ಟ್ರಸ್ಟ್, ಕೀರ್ತಿಸ್ತಂಭ, ನೆಹ್ರುಪಾರ್ಕ್, ಕಟ್ನಿ ೪೮೩೫೦೧ (ಎಂ. ಪಿ)

೨೩ ಮಾನ್ಯ ಜುಗುಲ್ ಕಿಶೋರ್ ಮುಖ್ತಾರ್ ಅವರ ಪೂ. ಸೂ. ಕೃತಿ ಪ್ರಸ್ತಾವನಾ ಪು. ೮೧–೮೨

೨೪ ಮಾನ್ಯ ಡಾ. ಜ್ಯೋತಿ ಪ್ರಸಾದ್ ಜೈನ್ ಅವರು, ಈ ತ್ರಿಲೋಕಸಾರವು ಕ್ರಿ. ಶ. ೬೭೩ ರಲ್ಲಿ ರಚಿತವಾಗಿರುವುದೆಂದು ಸೂಚಿಸಿದ್ದಾರೆ. ಆದರೆ ಇದಕ್ಕೆ ಆಧಾರವನ್ನು ಹೇಳಿಲ್ಲ. ನೋಡಿ: ಪೂ. ಸೂ. ಗೋ. ಕಂ. ವಾ. ಪು. ೩೯

೨೫ ಮಾನ್ಯ ಜುಗುಲ್ ಕಿಶೋರ್ ಮುಖ್ತಾರ್ ಅವರ ಪೂ. ಸೂ. ಕೃತಿ ಪ್ರಸ್ತಾವನೆ ಪು. ೭೪–೮೮

೨೬ ಮಿಚ್ಛತ್ತಾವಿರದಿ– ಪಮಾದ– ಜೋಗ– ಕೋಹಾದಓಥ ವಿಣ್ಣೇಯಾ ।

ಪಣಪಣ ಪಣದಸತಿಯ ಚದು ಕಮಸೋ ಭೇದಾದು ಪುವ್ವಸ್ಸ ॥ ೩೦ ॥ ದ್ರ. ಸಂ.

ಮಿಚ್ಛತ್ತಂ ಅವಿರಮಣಂ ಕಸಾಯ ಜೋಗಾಯ ಅಸವಾ ಹೋಂತಿ ।

ಪಣ ಬಾರಸ ಪಣವೀಸಂ ಪಣ್ಣರಸಾ ಹೋಂತಿ ತಬ್ಭೇಯಾ ॥ ೭೮೬ ॥

ಗೋ. ಸಾ. ಕ. ಕಾಂಡ

೨೭ ದಿಗಂಬರಜೈನ್ ಟ್ರಸ್ಟ್, ೧೪೧, ರಂಗಸ್ವಾಮಿ ಗುಡಿ ಬೀದಿ, ಬೆಂಗಳೂರು–೫೩ 'ಶ್ರೀ ನೇಮಿಚಂದ, ಸಿದ್ಧಾಂತಿದೇವ ವಿರಚಿತ ದ್ರವ್ಯ ಸಂಗ್ರಹ'

೨೮ ಮೇಲ್ಕಾಣಿಸಿರುವ ಪುಸ್ತಕ–'ನಮ್ಮ ಮಾತು' ಪು. ಸಂ. **VI, VII**

೨೯ ಇದೇ ಮೇಲಿನ ಪುಸ್ತಕ–'ನಮ್ಮ ಮಾತು' ಪು **VII**

೩೦ ಇದೇ ಮೇಲಿನ್ ಪುಸ್ತ–'ನಮ್ಮ ಮಾತು' ಪು. **X.**

೩೧ ಇದೇ ಮೇಲಿನ ಪುಸ್ತಕ–'ನಮ್ಮ ಮಾತು' ಪು. **X.**

೩೨ ಪೂ. ಸೂ. ಪು. ಜೈ. ವಾ. ಸೂ. ಪ್ರಸ್ತಾವನೆ ಪು. ೬೪.

೩೩ ಪೂ. ಸೂ. ಧವಲಾ. ೧. ಪ್ರಸ್ತಾವನಾ ಪು. ೫೩

೩೪ ಯತಃ ಸ್ತ್ರೀಯಮಾತ್ಮನಂ ಮನ್ಯಮಾನಃ

ಪುರುಷ (ಷೇ?) ವೇದಯತಿ ರಂತುಮಿಚ್ಛತಿ ಸಃ ಸ್ತ್ರೀ ವೇದಃ ॥ ೫ ॥

ಯತಃ ಪುಮಾಂಸಮಾತ್ಮನಂ ಮನ್ಯಮಾನಃ

ಸ್ತ್ರೀಯಾಂ ವೇದಯತಿರಂದುಮಿಚ್ಛತಿ ಸಃ ಪುಂವೇದಃ ॥ ೫೬ ॥

ಯತೋ ನಪುಂಸಕಮಾತ್ಮಾನಂ ಮನ್ಯಮಾನಃ

ಸ್ತ್ರೀ ಪುಂಸೋರ್ವೇದಯಿತಿಮಿಚ್ಛತಿ ಸಃ ನಪುಂಸಕವೇದ ॥ ೫೭ ॥

೩೫ ಈ ಕೃತಿಯ ಒಂದು ಹಸ್ತಪ್ರತಿ ನನ್ನಲ್ಲಿದೆ.

೩೬ ಪಾಂಡಿತ್ಯ ಮತ್ತು ಪ್ರತಿಭಾ ಸಂಪನ್ನರೆಂದು ಹೆಸರಾಂತ ಸನ್ಮಾನ್ಯ ಡಾ. ಎಲ್. ಬಸವರಾಜು ಅವರು ತಾವು ಸಂಪಾದಿಸಿರುವ ಪಂಪ ಮಹಾಕವಿಯ 'ಆದಿಪುರಾಣ' ದ ಅರಿಕೆಯಲ್ಲಿ (ಪು.IX) ಅತ್ಯಂತ ಪ್ರಾಚೀನವಾದ ಹಸ್ತಪ್ರತಿ ಎಂಬುದಾಗಿ ಪ್ರಸ್ತಾವಿಸಿ– "ಇದರ ಕಾಲ ಕ್ರಿ. ಶ. ೧೩೮೯. ಇದನ್ನು ಬರೆದವನು ಶ್ರೀ ಧರ್ಮಭೂಷಣ ಶ್ರೀ ಮದಭಯಚಂದ್ರ ಸೈದ್ಧಾಂತಿ ದೇವರು ( ಇವನ ಗುರು ಶ್ರೀಮದ್ರಾಯರಾಜಗುರು ಮಂಡಲಾಚಾರ್ಯರಾದ ಶ್ರೀ ಮಲಧಾರಿ ನಾಗಚಾಂದ್ರ ಭಟ್ಟಾರಕರು) ಇವನು ಬರೆಸಿದ ಕಾಲ ವಿವರ : ೩೧–೧೦ ೧೩೮೯ ನೇ ಗುರುವಾರ ಪ್ರಾತಃಕಾಲ" ಎಂದು ಹೇಳಿದ್ದಾರೆ. ' ಸೈದ್ಧಾಂತಿ ದೇವರು ಎಂಬ ಬಿರುದನ್ನು ಹೊಂದಿರುವ ಇವರು 'ಕರ್ಮಪ್ರಕೃತಿ'ಯ ರಚನಾಕಾರರಾಗಿರಬಹುದಾಗಿದೆ.

೨೬ಎ ಪೂ. ಸೂ. ಕ. ಪಾಹುಡ. ಪ್ರಸ್ತಾವನಾ. ಪು. ೮. ೯.

೨೬ಬಿ ಪೂ. ಸೂ. ಪು. ಜೈ. ವಾಕ್ಯ ಸೂಚೀ. ಪ್ರಸ್ತಾವನಾ. ಪು. ೯೪–೯೮.

೩೭ ಪೂ. ಸೂ. ಪು. ಜೈ. ವಾ. ಸೂಚೀ. ಪ್ರಸ್ತಾವನಾ ಪು. ೧೧೦–೧೧೨.

೨೮ ಅಣುವದ ಗುರು ಬಾಲೇಂದೂ ಮಹವ್ವದೇ ಅಭಯಚಂದ ಸಿದ್ಧಂತಿ ।

ಸತ್ಥೇಽಭಯಸೂರಿ ಪಹಾಚಂದಾ ಖಲು ಸುಯಮುಣಿಸ್ಸ ಗುರೂ ॥ ೧೧೭ ॥

ಸಿರುಮೂಲ ಸಂಘ ದೇಸೀಯ [ಗಣ] ಪುತ್ಥಯಗಚ್ಛ ಕೊಂಡ ಕುಂದಮುಣೀಣಾಹಂ

(ಕುಂದಾಣಂ?)

ಪರಮಣ್ಣ ಇಂಗಲೇಸರ್ಬಲಿಮ್ಮಿ ಜಾದ[ಸ್ಸ] ಮುಣಿ ಪಹದ (ಹಾಣ) ಸ್ಸ ॥ ೧೧೮ ॥

ಸಿದ್ದಂತಾಹಯಚಂದಸ್ಸ ಯ ಸಿಸ್ಸೋ ಬಾಲ ಚಂದ ಪವರೋ ।

ಸೋ ಭವಿಯ ಕುವಲಯಾಣಂ ಆಣಂದಕರೋ ಸಯಾ ಜಯಊ ॥ ೧೧೯ ॥

ಸದ್ದಾಗಮ ಪರಮಾಗಮ ತಕ್ಕಾಗಮ ನಿರವಸೇಸವೇದಿ ಹು ।

ವಿಜಿದ ಸಯಲಣ್ಣವಾದೀ ಜಯಉಚಿರಂ ಅಭಯಸೂರಿ ಸಿದ್ಧಂತಿ ॥ ೧೨೦ ॥

ಣಯ ಣಿಕ್ಖೇವ ಪಮಾಣಂ ಜಾಣೇತ್ತಾ ವಿಜಿದ ಸಯಲ ಪರಸಮಓ ।
ವರಣಿವೈಣಿವಹ ವಂದಿಯ ಪಯ ಪಮ್ಮೋ ಚಾರುಕಿತ್ತಿ ಮುಣೀ ॥ ೧೨೧ ॥
ಣಾದಣಿಖಿಲತ್ಥ ಸತ್ಥೋ ಸಯಲಣರಿಂದೇಹಿಂ ಪೂಜಿಓವಿಮಲೋ ।
ಜಿಣ ಮಗ್ಗಗಯಣ ಸುರೋ ಜಯ ಉಚಿರಂ ಚಾರುಕಿತ್ತಿಮುಣೀ ॥ ೧೨೨ ॥
ವರಸಾರತ್ತಯಣಿಉಣೋ ಸುದ್ದಪ್ಪರಓ ವಿರಹಿಯ ಪರಭಾಓ ।
ಭವಿಯಾಣಂ ಪಡಿವಾಹಣ ಪರೋ ಪಹಾಚಂದಣಾಮ ಮುಣೀ ॥ ೧೨೩ ॥

ಇತಿ ಭಾವಸಂಗ್ರಹಃ

೩೯ ಸಗಗಾಲೇ ದು ಸಹಸ್ಸೇ ವಿ(ಬಿ?)ಸಯ ತಿಸಟ್ಠೇ ಗದೇ ದು ವಿಸವರಿಸೇ ।
ಮಗ್ಗ ಸಿರ ಸುದ್ದಸತ್ತಮಿ ಗುರುವಾರೇ ಗಂಥ ಸಂಪುಣ್ಣೋ ॥ ೨೨೪ ॥

೪೦ ಮೈಸೂರು ಓರಿಯೆಂಟಲ್ ರಿಸರ್ಚ್ ಇನ್ ಸ್ಟಿಟ್ಯೂಟಿನ ಕಾಗದ ಹಸ್ತಪ್ರತಿ– ಎಸ್. ಬಿ. ೧೮೮